ADDITIONAL AND SUPPLEMENTARY DEMANDS FOR GRANTS FOR 1965-66 (THIRD INSTALMENT

DEMAND No. 7 STAMPS.

Sri RAMAKRISHNA HEGDE (Minister for Finance).—On the recommendation of the Governor of Mysore, I beg to move :

> "That a further sum not exceeding Rs. 1,80,000 be granted to the Government to defray the charges which will come in course of payment during the financial year for the period ending 31st day of March 1966, in respect of Demand No. 7 'Stamps.'

Mr. SPEAKER.—Motion moved :

> "That a further sum not exceeding Rs. 1,80,000 be granted to the Government to defray the charges which will come in course of payment during the financial year for the period ending 31st day of March 1966, in respect of Demand No. 7 'Stamps.'

Along with this Demand the other Demands, *viz.*, Nos. 8, 9, 10, 11, 12, 13, 14, 15, 16, 18, 20, 24, 25, 26, 27, 29, 30, 30A, 31, 33, 39, 40, 43, 44, 45, 46, 47, 48, 52, 53 and 54 are also deemed to have been moved and are open for discussion.

† ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಯವರೇ, ಮಾನ್ಯ ಆರ್ಥಿಕ ಸಚಿವರು ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ಈ ವರ್ಷದಲ್ಲಿ ಮೂರನೆಯ ಬಾರಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಅವರು ದೇಶದ ಹಣಕಾಸಿನ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಎರಡನೆಯ ಸಲ ಡಿಮ್ಯಾಂಡ್ ನಮ್ಮ ಮುಂದೆ ಬಂದಾಗಲೇ ಹೇಳಿದೆವು. ಈ ವರ್ಷ 3 ಸಲ ಸಪ್ಲಿಮೆಂಟರಿ ಡಿಮ್ಯಾಂಡನ್ನು ತಂದು ಆರ್ಥಿಕ ಗೊಂದಲವನ್ನುಂಟು ಮಾಡಿದ್ದಾರೆ. ಬಹುಶಃ ನಾಲ್ಕನೆಯ ಡಿಮ್ಯಾಂಡೂ ಬರಬಹುದೆಂಬ ಅನುಮಾನವಿದೆ. ಈ ರೀತಿ ವರ್ಷದ ಕೊನೆಯಲ್ಲಿ ಇವನ್ನು ತರುವುದನ್ನು ನೋಡಿದರೆ ಹಣಕಾಸಿನ ನೈಜ ಚಿತ್ರವೇ ತಿಳಿಯದೆ ಅನುಮಾನಕ್ಕೆ ಕಾರಣವಾಗಿದೆ. ಸುಮಾರು 15 ಕೋಟಿ ರೂಪಾಯಿಗಳ ಬಡ್ಜೆಟ್ಟನ್ನು ನಮ್ಮ ಒಪ್ಪಿಗೆಗಾಗಿ ಈಗ ಸಭೆಯ ಮುಂದಿಟ್ಟಿದ್ದಾರೆ. ಅಲ್ಲದೆ ಚಾರ್ಜ್ಡ್ ಐಟಂ ಬಡ್ಡಿ, ಸಾಲ ವಗೈರೆ ಬೇರೆ ಇದೆ. ಇದು ಹಿಂದೆ 1956-57ರಲ್ಲಿದ್ದ ಬಡ್ಜೆಟ್ಟಿನಷ್ಟು ಇದೆ. ಇಷ್ಟು ದೊಡ್ಡ ಹಣದ ಬೇಡಿಕೆ ನಮ್ಮ ಮುಂದೆ ವರ್ಷದ ಕೊನೆಯಲ್ಲಿ ನಿಂತಿದೆ. ಇದನ್ನು ನೋಡಿದರೆ ಅವರಿಗೆ ದೂರ ದೃಷ್ಟಿ ಇಲ್ಲ, ಬಹಳ ಅವಸರದಿಂದ ಬಡ್ಜೆಟ್ಟನ್ನು ತಯಾರಿಸಿದ್ದಾರೆ ಎಂದು ತೋರುತ್ತದೆ, ತುರ್ತು ಪರಿಸ್ಥಿತಿಯಲ್ಲಿ ಉಂಟಾಗಬಹುದಾದ ಖರ್ಚಿಗೆ ಹಣವನ್ನು ಸಪ್ಲಿಮೆಂಟರಿ ಬಡ್ಜೆಟ್ ಮೂಲಕ ಕೇಳುವುದು ಯಾವಾಗಲೂ ಅರ್ಥಶಾಸ್ತ್ರದ ನಿಯಮದಂತೆ ಸೂಕ್ತವಾದುದು. ಆದರೆ ಇವತ್ತು ನಮ್ಮ ಮುಂದೆ ಮಂಡಿಸಿರುವ ಬಜೆಟ್ಟಿನಲ್ಲಿ ನೋಡುವುದಾದರೆ ಅನೇಕ ಅಂಶಗಳನ್ನು ವರ್ಷದ ಮೊದಲಿನಲ್ಲೇ ಬಜೆಟ್ಟಿನಲ್ಲಿ ಅಡಕಮಾಡಬಹುದಾಗಿತ್ತು ಎಂದು ತೋರುತ್ತದೆ. ಹಾಗೆ ಮಾಡದೆ ಮನಸ್ಸಿಗೆ ಬೇಕಾದ ಹಾಗೆ ಹಣ ಖರ್ಚು ಮಾಡಿ ಅದಕ್ಕೆ ಒಪ್ಪಿಗೆ ನೀಡಬೇಕೆಂದು ಈ ಸಭೆಯ ಮುಂದಿಡುವುದು ಬಹಳ ಅಪಾಯಕಾರಿ. ಇಂಥ ಆರ್ಥಿಕ ನೀತಿ ದಿವಾಳಿತನಕ್ಕೆ ಹೋಗುವುದರಲ್ಲಿ ಏನೇನೂ ಸಂಶಯವಿಲ್ಲವೆಂದು ಒತ್ತಿ ಹೇಳಬೇಕಾಗಿದೆ. ಹಣ ಖರ್ಚು ಮಾಡಿರುವ ರೀತಿ ನೀತಿ ನೋಡುವುದಾದರೆ ಮೈಸೂರು ದೇಶದ ಬಜೆಟ್ಟು ಕೆಲವರ ಸ್ವತ್ತು ಎಂದು ಕಂಡುಬರುತ್ತದೆ, ಆ ರೀತಿ ಸಿಕ್ಕಾಪಟ್ಟೆ ಖರ್ಚು ಮಾಡಿದ್ದಾರೆ. ಹಣವನ್ನು ದೇಶಾಭಿವೃದ್ಧಿ ಕಾರ್ಯಗಳಿಗೆ ಸಮನಾಗಿ ಹಂಚುವ ನೀತಿ ಗಾಳಿಗೆ ಹೋಗಿದೆ. ಇಷ್ಟು ಬಂದ ಹಾಗೆ ತಮ್ಮ ಕ್ಷೇತ್ರಗಳಲ್ಲಿ ಹಣ ಖರ್ಚು ಮಾಡಿದ್ದಾರೆ. ಇದು ಎಂಥ ಬಜೆಟ್ ಎಂದು ಕೇಳುತ್ತೇನೆ. ಈ ರೀತಿ ಖರ್ಚುಮಾಡಿ ದಿವಾಳಿತನಕ್ಕೆ ದಾರಿ ಮಾಡುವುದಾದರೆ ಸಾವೇಕೆ ಇಲ್ಲಿಗೆ ಬರಬೇಕು ! ಡಿಮ್ಯಾಂಡುಗಳು ಬಂದಾಗ ಯಾವ ರೀತಿ ಖರ್ಚು ಮಾಡುತ್ತಾರೆಂಬುದನ್ನು ಹೇಳುತ್ತೇನೆ. ಒಂದು ಕಡೆ ಮಿತವ್ಯಯವನ್ನು ಸಾಧಿಸುತ್ತೇವೆಂದು ಹೇಳುವುದು, ಇನ್ನೊಂದು ಕಡೆ ಹೊಸ ಉದ್ಯೋಗಗಳನ್ನು ಹೊಸ ಇಲಾಖೆಗಳನ್ನು ಬೇಕಾದವರಿಗೆ ಕೆಲಸ

ಕೊಡಲು ನಿರ್ಮಾಣ ಮಾಡುವುದು ಇದು ಯಾವ ನೀತಿ ? ನಮ್ಮ ಹಣಕಾಸಿನ ಸ್ಥಿತಿ ಶೋಚನೀಯವಸ್ಥೆಯಲ್ಲಿರುವಾಗ ಈ ರೀತಿ ಮಾಡುತ್ತಿದ್ದರೆ ನಮ್ಮ ಹಣಕಾಸಿನ ಪರಿಸ್ಥಿತಿ ಏನಾಗುವುದೋ ಎಂದು ನನಗಾದರೂ ಕೂಡ ಭಯವಾಗುತ್ತಿದೆ. ಈ ಭಯವನ್ನು ನಿವಾರಣೆ ಮಾಡಬೇಕು. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ವಿಮರ್ಶೆ ಮಾಡಲು ಒಂದು ಫೈನಾನ್‌ಷಿಯಲ್ ಎನ್‌ಕ್ವೈರಿ ಅತ್ಯಗತ್ಯವೆಂದು ನಾನು ಭಾವಿಸಿದ್ದೇನೆ. ತುರ್ತಾಗಿ ಹಾಗೆ ಮಾಡಿ ಎಷ್ಟುಮಟ್ಟಿಗೆ ದುಂದು ವೆಚ್ಚವಾಗಿದೆ ಎಂಬುದನ್ನು ತಿಳಿಯಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

10ನೆಯ ಡಿಮ್ಯಾಂಡ್ ನೋಡಿದರೆ 2-3 ಹೊಸ ಇಲಾಖೆಗಳನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ, ಒಂದು ಅಗ್ರಿಕಲ್ಚರಲ್ ಪ್ಲಾನಿಂಗ್ ಸೆಲ್ ಮಾಡಿದ್ದಾರೆ. ಅದಕ್ಕೆ ಒಬ್ಬ ಡೈರೆಕ್ಟರು ಅವರ ಕೈಕೆಳಗೆ ಅನೇಕ ಸಣ್ಣ ಸಣ್ಣ ಅಧಿಕಾರಿಗಳು ಮುಂತಾದವರ ನೇಮಕವಾಗಿದೆ. ಇದೇಕೆ ಎಂದು ಕೇಳುತ್ತೇನೆ. ಈಗಾಗಲೇ ಅನೇಕ ಅಧಿಕಾರಿಗಳಿದ್ದಾರೆ, ಅವರಿಂದಲೇ ಒಂದು ವ್ಯವಸ್ಥಿತ ರೀತಿಯಲ್ಲಿ ಕೆಲಸವನ್ನು ತೆಗೆದುಕೊಳ್ಳುವುದಾದರೆ ಹೊಸದಾಗಿ ಯಾರೂ ಬೇಕಾಗುವುದಿಲ್ಲ. ಈಗಿರುವವರಿಗೆ ಸಾಕಷ್ಟು ಕೆಲಸವಿಲ್ಲ. ಹಾಗಿರುವಾಗ ಹೊಸ ಉದ್ಯೋಗಗಳನ್ನೇಕೆ ಸೃಷ್ಟಿಮಾಡಬೇಕು ? ಬೇಕಾದ ಕೆಲಸಗಳಿಗೆ ಹಣ ಖರ್ಚುಮಾಡದೆ ಅಧಿಕಾರಿಗಳಿಗಾಗಿ ಖರ್ಚು ಮಾಡುವುದು ಸರಿಯಲ್ಲ. ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಗೊಂದಲವಾಗಿ ಸುವ್ಯವಸ್ಥಿತವಾಗಿ ಕೆಲಸ ನಡೆಯದೆ ಸಹಕಾರವಿಲ್ಲದೆ ಆಗಬೇಕಾದ ಕೆಲಸಗಳು ಸಕಾಲದಲ್ಲಿ ಚೆನ್ನಾಗಿ ನಡೆಯುತ್ತಿಲ್ಲ.

ಇದೇ ರೀತಿಯಲ್ಲಿ ಹೊಸ ತಾಲ್ಲೂಕುಗಳನ್ನು ಬೇರೆ ನಿರ್ಮಾಣಮಾಡಿದ್ದಾರೆ, ಸೂಳ್ಯ ಎಂಬ ಹೊಸ ತಾಲ್ಲೂಕು ಸೌತ್ ಕೆನರಾ ಜಿಲ್ಲೆಯಲ್ಲಿ ಮಾಡಿದ್ದಾರೆ. ಇದರ ಅವಶ್ಯಕತೆ ಏನಿತ್ತು ? ಎರಡು ಹೊಸ ತಾಲ್ಲೂಕುಗಳನ್ನೇಕೆ ನಿರ್ಮಿಸಬೇಕಾಗಿತ್ತು ? ಈಗಾಗಲೇ ತಾಲ್ಲೂಕುಗಳಲ್ಲಿ ತಹಸೀಲ್ದಾರರು, ಬಿ.ಡಿ.ಓ. ಮುಂತಾದ ಅನೇಕ ಅಧಿಕಾರಿಗಳಿರುವಾಗ, ಅವರಿಗೇ ಸಾಕಾದಷ್ಟು ಕೆಲಸವಿಲ್ಲದಿರುವಾಗ, ಹೊಸ ತಾಲ್ಲೂಕುಗಳನ್ನು ಮಾಡುವ ನೀತಿಯು ಅರ್ಥವಾಗುವುದಿಲ್ಲ. ಹೇಳುವುದಕ್ಕೂ ಮಾಡುವ ಕೆಲಸಕ್ಕೂ ಹೊಂದಾಣಿಕೆಯಿಲ್ಲ.

11ನೆಯ ಡಿಮ್ಯಾಂಡಿನಲ್ಲಿ ಲೀಗಲ್ ಸರ್ವಿಸಸ್‌ಗಾಗಿ ಫೀಸಿಗೆಂದು 75,000 ರೂಪಾಯಿಗಳನ್ನು ಒದಗಿಸಿದ್ದಾರೆ. ನಮ್ಮ ದೇಶದಲ್ಲಿ ಈಗ ಬೇಕಾದಷ್ಟು ಜನ ಗೌರ್ನಮೆಂಟ್ ಅಡ್ವೋಕೇಟರುಗಳು, ಅಡ್ವೋಕೇಟ್ ಜನರಲ್ಲರು, ಗವರ್ನಮೆಂಟ್ ಪ್ಲೀಡರುಗಳು ಇರುವಾಗ ಇಷ್ಟೊಂದು ಹಣವೇಕೆ ಖರ್ಚುಮಾಡಬೇಕಾಗಿತ್ತು ? ಇದನ್ನು ಖಂಡಿತ ಕಡಿಮೆ ಮಾಡಬಹುದಾಗಿತ್ತು.

13ನೆಯ ಡಿಮ್ಯಾಂಡಿನಲ್ಲಿ ಹೊಸದಾಗಿ ತೆರೆದಿರುವ ಆಫೀಸಿನ ಬಾಡಿಗೆಗಾಗಿ 1,05,905 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಷ್ಟು ಹಣದಲ್ಲಿ ಆಫೀಸು ಕಟ್ಟಡವನ್ನೇ ಕಟ್ಟಬಹುದಾಗಿತ್ತು. ತಿಂಗಳಿಗೆ ಸುಮಾರು 2,800 ರೂಪಾಯಿ ಬಾಡಿಗೆ ಕೊಟ್ಟು ಲಕ್ಷದವರೆಗೆ ಹಣ ಖರ್ಚು ಮಾಡಿರುವ ನೀತಿ ಸರಿಯೇ ? ಇಷ್ಟು ಬಾಡಿಗೆ ಕೊಡುವುದಕ್ಕೆ ಬದಲಾಗಿ ಒಂದು ಕಟ್ಟಡ ಕಟ್ಟಿದ್ದರೆ ದೇಶಕ್ಕೊಂದು ಆಸ್ತಿಯಾಗುತ್ತಿತ್ತು.

9-30 A.M.

ಇನ್ನು ಡಿಮಾಂಡ್ ನಂಬರು 14 ರಲ್ಲಿ ಹೇಳಿರುವ ಹಾಗೆ ಡೈರೆಕ್ಟರ್ ಆಫ್ ಸ್ಟೋರ್ಸ್ ಎಂಬ ಒಂದು ಹೊಸ ಹುದ್ದೆಯನ್ನು ನಿರ್ಮಾಣ ಮಾಡಿದ್ದೀರಿ. ಇದಕ್ಕಾಗಿ ಅಡಿಷನಲ್ ಸ್ಟಾಫ್ 2 ಸೂಪರಿಂಟೆಂಡೆಟ್ಸ್, 20 ಅಸಿಸ್ಟೆಂಟ್ಸ್, 4 ಟೈಪಿಸ್ಟ್‌ಗಳನ್ನು ಈ ಹೊಸ ಇಲಾಖೆಗಾಗಿ ನಿರ್ಮಾಣ ಮಾಡಿದ್ದೀರಿ. ಈ ಕಾರ್ಯ ಮುಂದುವರಿಸಿಕೊಂಡು ಹೋಗುವುದಕ್ಕೆ ಸರಕಾರ ಯಾವ ಮಟ್ಟದಲ್ಲಿ ಹಣ ಖರ್ಚು ಮಾಡುತ್ತಿದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಇನ್ನು ಡಿಮಾಂಡ್ ನಂಬರು 15 ರಲ್ಲಿ ಗೋಡೌನ್ನುಗಳ ಬಾಡಿಗೆಗಾಗಿ ಫಾರ್ಮ್ಸ್ ಪ್ರಿಂಟ್ ಮಾಡುವುದಕ್ಕಾಗಿ ಹೇರಳವಾಗಿ ಹಣ ಖರ್ಚು ಮಾಡಿದ್ದೀರಿ. ಈ ರೀತಿ ಮಾಡಿರುವುದು ದುಬಾರಿ ಹಣ ಖರ್ಚು ಮಾಡುವ ಬಾಬು ಆಗಿದೆ. ಇದರಲ್ಲಿ ಅರ್ಧದಷ್ಟು ಹಣ ಸರಕಾರ ಉಳಿಸಬಹುದಾಗಿತ್ತು. ಈ ರೀತಿ ಸರಕಾರ ಹಣ ಖರ್ಚು ಮಾಡುತ್ತಾ ಹೋದರೆ ಸರಕಾರಕ್ಕೆ 150 ಕೋಟಿ ಏಕೆ 200 ಕೋಟಿ ಕೊಟ್ಟರೂ ಕೂಡ ಹಣ ಖರ್ಚು ಮಾಡುತ್ತಾರೆ. ಮತ್ತು ಇದರಿಂದ ದೇಶಕ್ಕೆ ಉತ್ಪತ್ತಿ ಬರುವುದಿಲ್ಲ. ಎಂದು ಹೇಳಬೇಕಾಗುತ್ತದೆ.

ಇನ್ನು ಡಿಮಾಂಡ್ ನಂಬರು 20 ; ವ್ಯವಸಾಯ ಇಲಾಖೆಯಲ್ಲಿ ಇಂಪ್ರೂವ್ಡ್ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್‌ಗಳನ್ನು ಡಿಮಾನ್‌ಸ್ಟ್ರೇಟ್ ಮಾಡುವುದಕ್ಕಾಗಿ ಒಂದು ಹೊಸ ಇಲಾಖೆ ನಿರ್ಮಾಣ ಮಾಡಿದ್ದೀರಿ. ಈ ಹೊಸ ಇಲಾಖೆಯಲ್ಲಿ ಒಬ್ಬ ಅಗ್ರಿಕಲ್ಚರಲ್ ಇಂಜಿನಿಯರ್, ಸ್ಟೀನೋಗ್ರಾಫರ್, ಫಸ್ಟ್ ಡಿವಿಜನ್ ಕ್ಲಾರ್ಕ್ಸ್, ದಫೇದಾರ್, ಇಬ್ಬರು ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್, ಒಬ್ಬ ಟೈಪಿಸ್ಟ್

(ಶ್ರೀ ಎಸ್. ಶಿವಪ್ಪ)

ಒಬ್ಬ ಗುಮಾಸ್ತ ಒಬ್ಬ ವಾಚಮನ್ ಒಬ್ಬ ಜವಾನ ಈ ರೀತಿ ನೇಮಕ ಮಾಡಲಾಗಿದೆ. ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ತೋರಿಸುವುದಕ್ಕೆ ಒಬ್ಬ ಅಗ್ರಿಕಲ್ಚರಲ್ ಇಂಜಿನಿಯರ್ ಇದ್ದರೆ ಅವನಿಗೆ ನಾಲ್ಕಾರು ಜನ ಗುಮಾಸ್ತರು ಜವಾನರು ವಾಚಮನ್ ಇವರು ಏತಕ್ಕೆ ಬೇಕು ? ಈ ಇಲಾಖೆ ಯಾರಿಗೋಸ್ಕರ ನಿರ್ಮಾಣ ಮಾಡುತ್ತೀರಿ ? ಇದರಲ್ಲಿ ಏನಾದರೂ ಉದ್ದೇಶ ಸಾಧನೆ ಮಾಡುತ್ತೀರಾ ? ಎಂಥ ಕೆಲಸ ವಾಗುತ್ತದೆ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು.

ಇನ್ನು ಚಾಮರಾಜನಗರದಲ್ಲಿ ಒಂದು ವ್ಯವಸಾಯ ಕಾಲೊನಿಯನ್ನು ಗೋಲ್ಡ್‌ಸ್ಮಿಥ್ಸ್ ಸಲು ವಾಗಿ ಮಾಡಲು ಹಣ ಖರ್ಚು ಮಾಡಿದ್ದೀರಿ. ಗೋಲ್ಡ್‌ಸ್ಮಿಥ್ ಕಾಲೊನಿಗೂ ವ್ಯವಸಾಯಕ್ಕೂ ಏನು ಸಂಬಂಧ ನನಗೆ ಗೊತ್ತಿಲ್ಲ. ಕೆಲವು ಸಂಸಾರಕ್ಕೆ ಮನೆ ಕಟ್ಟುವುದಕ್ಕೆ ಹಣ ಕೊಟ್ಟಿದೆ, ಒಂದು ಎಕರೆ ಜಮೀನು ಸಾಗುವಳಿ ಮಾಡುವುದಕ್ಕೆ 300 ರೂಪಾಯಿ ಕೊಟ್ಟಿದ್ದೀರಿ. ಈ ಕಾಲೊನಿ ಮಾಡುವುದಕ್ಕೆ ಹೇರಳವಾಗಿ ಹಣ ಖರ್ಚು ಮಾಡಿದ್ದೀರಿ. ಇಂದು ದೇಶದಲ್ಲಿ ಸಹಸ್ರಾರು ಜನ ಅಕ್ಕಸಾಲಿಗರು ಕೆಲಸ ವಿಲ್ಲದೇ ಇರುವಾಗ್ಗೆ ಚಾಮರಾಜನಗರದಲ್ಲಿ ಮಾತ್ರ ಈ ಕಾಲೊನಿ ಮಾಡುವ ಉದ್ದೇಶವೇನು ? 59 ಸಂಸಾರಕ್ಕೆ ಭೂಮಿ ಕೊಟ್ಟು ಕಾಲೋನಿ ಮಾಡುವುದಕ್ಕೆ 4 ಲಕ್ಷ ರೂಪಾಯಿ ಖರ್ಚು ಮಾಡಿದ್ದು ಏತಕ್ಕೋಸ್ಕರ ? ಈ ಅಚಾರಿಗಳು ನಿಜವಾಗಿಯೂ ವ್ಯವಸಾಯ ಮಾಡುತ್ತಾರೆಯೋ ? ಅಥವಾ ಗೋಲ್ಡ್‌ಸ್ಮಿಥ್ ಹೆಸರಿನ ನೆಪದಲ್ಲಿ ಬೇರೆ ಯಾರಿಗೋಸ್ಕರವಾದರೂ ಈ ಕಾಲೋನಿ ಮಾಡಿದ್ದೀರಾ ಎಂಬ ಒಂದು ಶಂಕೆ ಬರುತ್ತದೆ. ಚಿನ್ನ ಬೆಳ್ಳಿ ಕೆಲಸ ಮಾಡತಕ್ಕಂಥವರಿಗೆ ವ್ಯವಸಾಯದಲ್ಲಿ ಆಸಕ್ತಿ ಇರುವುದಿಲ್ಲ. ಅವರ ವೃತ್ತಿಗೆ ಸಂಬಂಧಪಟ್ಟ ಯಾವುದಾದರೂ ಸಣ್ಣ ಸಣ್ಣ ಕೈಗಾರಿಕೆ ಮಾಡಿ ಅವರಿಗೆ ಉಪಕರಣಗಳನ್ನು ಒದಗಿರುವ ಏರ್ಪಾಡು ಮಾಡಿದ್ದರೆ ಅವರಿಗೆ ಹೆಚ್ಚಿನ ಸಹಾಯ ಮಾಡಿದ ಹಾಗೆ ಆಗುತ್ತಿತ್ತು ಮತ್ತು ಅವರ ಕೈ ಕೆಲಸಕ್ಕೆ ಮರ್ಯಾದೆ ಬರುತ್ತಿತ್ತು. ಈ ಕಾಲೊನಿ ಮಾಡುವುದರಿಂದ ಏನು ಉದ್ದೇಶ ಇಟ್ಟುಕೊಂಡಿದ್ದೀರೋ ಅದು ಸಾಧ್ಯವಾಗಲಾರದು. ಅವರಿಗೆ ಕೊಟ್ಟಿರುವ ಭೂಮಿ ಯಾರಿಗೋ ಹೋಗುತ್ತದೆ ಎಂಬು ಶಂಕೆ ಇದೆ. ಯಾರದೋ ಒಂದು ಒತ್ತಡಕ್ಕೆ ಇದನ್ನು ಮಾಡಿ ದ್ದೀರಿ ಎಂದು ನನಗೆ ಅನಿಸುತ್ತದೆ. ಖಂಡಿತವಾಗಿ ಇದರ ಬಗ್ಗೆ ಸರಕಾರ ವಿಚಾರ ಮಾಡಬೇಕು.

ಇನ್ನು ಡಿಮಾಂಡ್ 24ರಲ್ಲಿ ನ್ಯೂ ಗವರ್ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಬಗ್ಗೆ 28 ಲಕ್ಷ ರೂಪಾಯಿ ಕೇಳಿದ್ದೀರಿ. 30ನೇ ಸೆಪ್ಟೆಂಬರ್ 1965 ನಂತರ ಎನ್. ಜಿ. ಈ. ಎಫ್. ಲಿಮಿಟೆಡ್ ಕಂಪೆನಿ ಆಯಿತು. ಅಲ್ಲಿಂದ ಈಚೆಗೆ ಖರ್ಚು ಮಾಡುವುದಕ್ಕೆ ಹಣ ಬೇಕಾಯಿತು ರಾ-ಮಟೀರಿಯಲ್ಸ್ ಒದಗಿಸಿ ಅಕೌಂಟ್ಸ್ ಫೈನಲೈಸ್ ಮಾಡಬೇಕಾಯಿತು ಎಂದು ಹೇಳುತ್ತೀರಿ. ಸೆಪ್ಟೆಂಬರ್ ನಂತರ ಖರ್ಚು ಮಾಡಬೇಕಾದ ಹಣದ ಬಗ್ಗೆ ಮುಂದಾಲೋಚನೆ ಮಾಡಬಹುದಾಗಿತ್ತು. ಅಕ್ಟೋಬರ್ ತಿಂಗಳಿನಲ್ಲಿ ಖರ್ಚು ಮಾಡಿದ ಹಣದ ಬಗ್ಗೆ ಈಗ ಮಾರ್ಚಿ ತಿಂಗಳಿನಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ ಮೂಲಕ ಏತಕ್ಕೆ ತರಬೇಕಾಗಿತ್ತು ? ಮುಂದಾಲೋಚನೆ ಇರಲಿಲ್ಲವೇ ಇದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಈ ರೀತಿ ಕೊನೆಯ ಹಂತದಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ ತರುವುದಕ್ಕೆ ಕಾರಣವೇನು ಎಂಬುದನ್ನು ಸಭೆಗೆ ತಿಳಿಸ ಬೇಕು ಎಂದು ಹೇಳುತ್ತೇನೆ.

ಇನ್ನು ಡಿಮಾಂಡ್ ನಂಬರು 29 ರಲ್ಲಿ ಬಸವಣ್ಣ ಚಾನೆಲ್ ರಿಪೇರಿಗೋಸ್ಕರ 5 ಲಕ್ಷ ರೂಪಾಯಿ ಕೇಳಿದ್ದೀರಿ. ಇದಲ್ಲದೆ ಬೆಂಗಳೂರು ಸರ್ಕಲ್ ಕೆಲಸಕ್ಕಾಗಿ 92 ಸಾವಿರ ರೂಪಾಯಿ ಖರ್ಚು ಮಾಡಿ ದ್ದೀರಿ. ಬೆಂಗಳೂರಿನಲ್ಲಿ ಮಾತ್ರ ಹಣ ಖರ್ಚು ಮಾಡಿ ಬೇರೆ ಕಡೆ ಮಾಡದೇ ಇರುವುದಕ್ಕೆ ಕಾರಣ ವೇನು ? ಅಂಥ ತುರ್ತು ಪರಿಸ್ಥಿತಿ ಏನು ಇದ್ದಿತು ? ಬೇರೆ ಕಡೆ ಇದೇ ರೀತಿಯಾಗಿ ಕೆಲಸದ ಅವಶ್ಯ ಕತೆ ಇರಲಿಲ್ಲವೇ ಎಂದು ಕೇಳುತ್ತೇನೆ. ನನಗೆ ಅನಿಸುತ್ತದೆ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬೆಂಗಳೂರು ಸರ್ಕಲ್ಲಿಗೆ ಸೇರಿದವರು ಆಗಿದ್ದಾರೆ ಈ ಪರಿಸ್ಥಿತಿಯ ದುರುಪಯೋಗ ಮಾಡಿಕೊಂಡು ಹಣ ಉಪಯೋಗಿಸಿದ್ದಾರೆ. ಸರಕಾರದ ಹಣ ದೇಶದ ಹಣ ತಮಗೋಸ್ಕರ ಖರ್ಚು ಮಾಡಿರುವ ಈ ನಿದರ್ಶನ ನೋಡಿದರೆ ಮೈಸೂರು ಸರಕಾರದ ಖಜಾನೆ ತಮ್ಮ ಸ್ವಂತದ್ದು ಎಂದು ಭಾವನೆ ಮಾಡಿ ಕೊಂಡು ವಿತರಣೆ ಮಾಡಿದ್ದಾರೆ. ಸಭಾಪತಿಗಳವರೇ, ಇದು ಬೆಂಗಳೂರು ಸರ್ಕಲ್ಲಿಗೆ ಸಂಬಂಧಪಟ್ಟ ಮಂತ್ರಿಗಳ ಪ್ರಭಾವ ಆಗಿದೆ ಬೇರೆ ಏನೂ ಅಲ್ಲ ಎಂದು ಒತ್ತಾಯ ಪೂರ್ವಕ ಹೇಳುತ್ತೇನೆ. ಯಾಕೆಂದರೆ, ಇಂಥ ಪರಿಸ್ಥಿತಿ ಇದೇ ರೀತಿಯಾಗಿ ಬೇರೆ ಜಿಲ್ಲೆಗಳಲ್ಲಿದೆ. ಕೆರೆಗಳ ರಿಪೇರಿಯಾಗ ಬೇಕಾಗಿದೆ. ಅನೇಕ ಕಾಮಗಾರಿಗಳು ಬೇರೆ ಕಡೆ ಕೂಡ ಆಗಬೇಕಾಗಿದೆ. ಬೆಂಗಳೂರು ಸರ್ಕಲ್ಲಿಗೆ ಮಾತ್ರ 92 ಸಾವಿರ ರೂಪಾಯಿ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ತೋರಿಸಿಕೊಂಡಿರುವುದು ಇದು ಪಕ್ಷ ಪಾತ ನೀತಿ ಮಂತ್ರಿಗಳು ಅಳವಡಿಸಿಕೊಂಡು ಬಂದಿದ್ದಾರೆ ಎಂಬುದನ್ನು ತಾವು ನೋಡುತ್ತಿದ್ದೀರಿ.

ಇನ್ನು ಡಿಮ್ಯಾಂಡ್ ನಂಬರ್ 31 ರಲ್ಲಿ ಮ್ಯಾಪ್ ತಯಾರ್ಮಾಡುವುದಕ್ಕಾಗಿ ಹಣದ ಬೇಡಿಕೆ ಇದೇ ಪ್ರಾಜೆಕ್ಟುಗಳ ಬೇಸಿಕ್ ಸರ್ವೇ ಮ್ಯಾಪ್ಸ್ ತಯಾರು ಮಾಡುವುದಕ್ಕಾಗಿ ಇದೆ. ಇದಕ್ಕಾಗಿ ಈಗಾಗಲೆ 75 ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಇದಲ್ಲದೆ ಇನ್ನೂ 20 ಸಾವಿರ ರೂಪಾಯಿ ಬೇಕು ಎಂದು ಅಂದಾಜು ಮಾಡಲಾಗಿದೆ. ಇದು ಏನು ಸ್ಪಾಟಿ ಮ್ಯಾಪ್ಸ್ ತಯಾರ್ಮಾಡುವುದಕ್ಕೆ ಉಪಯೋಗಿಸುವ ಇಷ್ಟು ಹಣದಿಂದ ಒಂದೆರಡು ಕಟ್ಟೆಗಳನ್ನು ಅಣೆಕಟ್ಟುಗಳನ್ನು ಕಟ್ಟಿಸಬಹುದಾಗಿತ್ತು. ಬಡಜನರ ಹಣವನ್ನು ಈ ರೀತಿ ಖರ್ಚು ಮಾಡುವುದು ಇದಕ್ಕೆ ವೇಸ್ಟ್‌ಫುಲ್ (wasteful) ಎಕ್ಸ್‌ಪೆಂಡೀಚರ್ ಎಂದು ಅನ್ನಬಹುದು. ಈ ಮ್ಯಾಪ್ಸ್ ಯಾರಿಗೆ ಬೇಕಾಗಿದೆ? ಪ್ರಚಾರ ಕಾರ್ಯದ ಬಾಬಿಗೆ ಈ ರೀತಿ ಹಣ ಖರ್ಚು ಮಾಡುವುದು ಅಂದರೆ ಹಣ ದುರುಪಯೋಗ ಮಾಡುತ್ತಿದ್ದೀರಿ ಎಂದು ಹೇಳಬಹುದು. ಕೆಲಸಗಳ ಪ್ರಚಾರ ಜಾಸ್ತಿಯಾಗಿದೆಯೇ ವಿನಾ ಕೆಲಸ ಏನೂ ಆಗಿಲ್ಲ. ಪ್ರಚಾರ ಮಾಡುವುದಕ್ಕಾಗಿ ಬಣ್ಣ ಬಣ್ಣದ ಚಿತ್ರ ಬರೆಯಿಸಿ ಹಣ ಖರ್ಚು ಮಾಡುವುದು ಅಪಾಯಕರ. ಆದುದರಿಂದ ಈ ರೀತಿ ಪ್ರಚಾರ ಕಾರ್ಯ ಕಡಿಮೆ ಮಾಡಿ. ಪ್ರಾಜೆಕ್ಟುಗಳನ್ನು ತಯಾರು ಮಾಡಿದರೆ ಜನ ನೋಡಿ ಸಂತೋಷಪಡುತ್ತಾರೆ. ಈ ಹಣದಿಂದ ಎರಡು ಮೂರು ಕೆರೆಗಳನ್ನು ಕಟ್ಟಿಸಿದ್ದರೆ ಹೆಚ್ಚಿನ ಪ್ರಯೋಜನವಾಗುತ್ತಿತ್ತು ಎಂದು ಸೂಚನೆ ಮಾಡಲು ಬಯಸುತ್ತೇನೆ.

ಇನ್ನು ಡಿಮಾಂಡ್ ನಂಬರ್ 33 ರಲ್ಲಿ ಎಮೆರ್ಜನ್ಸಿ ಸ್ಟಾಫ್ ಗೋಸ್ಕರ ಹಣ ಖರ್ಚು ಮಾಡಿದ್ದೀರಿ- ಸುಮಾರು 400 ಪೋಸ್ಟ್ಸ್ ಕ್ರಿಯೇಟ್ ಮಾಡಿ ಎಮೆರ್ಜನ್ಸಿ ರಿಲೀಫ್ ಅಸಿಸ್ಟೆಂಟ್ಸ್ ನೇಮಕ ಮಾಡಿದ್ದಾರೆ. ಹಾಗಾದರೆ ಇಷ್ಟು ಜನ ಎಲ್ಲಿ ಕೆಲಸ ಮಾಡುತ್ತಾರೆ? ಅವರು ಏನು ಕೆಲಸ ಮಾಡುತ್ತಾರೆ ಹಣ ಒದಗಿಸಿ ಅವರಿಗೆ ಬರಿ ಸಂಬಳ ಕೊಟ್ಟರೆ ಅದರಿಂದ ಏನು ಪ್ರಯೋಜನವಾಗುತ್ತದೆ? ರಿಲೀಫ್ ಕೆಲಸದಲ್ಲಿ ಚೆಕ್ಕಿಕರ್‌ಸ್ಕಿಲ್ ಏನು ಇದೆ? ಇದರ ಬಗ್ಗೆ ಅಂಕಿಸಂಖ್ಯೆಗಳಿಂದ ವಿವರಣೆ ಸಭೆಗೆ ಕೊಡಬೇಕು ಎಂದು ಕೇಳುತ್ತೇನೆ. ಇದಲ್ಲದೆ ಅವರು ಎಲ್ಲಿ ಇದ್ದಾರೆ ತಿಳಿಸಬೇಕು. ನಮ್ಮ ಕ್ಷೇತ್ರದಲ್ಲಿಯಂತೂ ಇಲ್ಲ. ನಾನಂತೂ ನೋಡಿಲ್ಲ. ಎಮರ್ಜನ್ಸಿ ರಿಲೀಫ್ ಅಸಿಸ್ಟೆಂಟ್ಸ್ ಎಲ್ಲಿ ಕೆಲಸ ಮಾಡುತ್ತಾರೆ ಎಂಬುದು ನನ್ನ ಕಣ್ಣಿಗೆ ಬಿದ್ದಿಲ್ಲ. ಈ ರೀತಿ ತಾವು ಒಂದು ಕಡೆ ಹಣವನ್ನು ಖರ್ಚು ಮಾಡುವುದು, ಮತ್ತೊಂದು ಕಡೆ ಮಿತವ್ಯಯ ಸಾಧನೆ ಮಾಡುತ್ತೇವೆ, ದೇಶ ಕಷ್ಟದ ಪರಿಸ್ಥಿತಿಯಲ್ಲಿದೆ ಎಂದು ಹೇಳಿಕೊಂಡು ಹೊಸ ಹೊಸ ಹುದ್ದೆಗಳನ್ನು ನಿರ್ಮಾಣ ಮಾಡಿರುವುದನ್ನು 5—6 ಕಡೆ ತೋರಿಸಿದ್ದೀರಿ. ಒಂದು ಕಡೆ ಹೊಸ ಹುದ್ದೆಗಳನ್ನು ನಿರ್ಮಾಣ ಮಾಡತಕ್ಕಂಥದ್ದು, ಮತ್ತೊಂದು ಕಡೆ ಹಣವನ್ನು ಮಿಗಿಸುತ್ತೇವೆ ಎಂದು ಹೇಳುವುದನ್ನು ನೋಡಿದರೆ ಒಂದಕ್ಕೊಂದಕ್ಕೆ ಬಹಳ ಅಂತರವಿದೆ. ಕಾರ್ಯ ಮಾಡಿ ತೋರಿಸಬೇಕೇ ವಿನಾ ಬಾಯಲ್ಲಿ ಹೇಳಿದರೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಇವತ್ತು ನಮ್ಮ ಹಣವನ್ನು ಕೇವಲ ಪ್ರದರ್ಶನಕ್ಕಾಗಿ, ಕೇವಲ ಪ್ರಚಾರಕ್ಕಾಗಿ ತಮಗೆ ಬೇಕಾದ ಕ್ಷೇತ್ರಗಳಲ್ಲಿ ಖರ್ಚು ಮಾಡಿರತಕ್ಕ ಅನೇಕ ದುಷ್ಟಾಂತಗಳನ್ನು ತೋರಿಸಿದ್ದೀರಿ ಹಣವನ್ನು ಖರ್ಚು ಮಾಡತಕ್ಕಂಥ ಕಾಲದಲ್ಲಿ ಮೈಸೂರು ದೇಶದ 208 ಕ್ಷೇತ್ರಗಳಿಗೆ ಸರಿಯಾಗಿ ಹಂಚಬೇಕು. ಈ ಹಣ ಹಂಚುವುದರಲ್ಲಿ ತಾರತಮ್ಯವಿದ್ದರೆ ಅದು ಬಹಳ ದೊಡ್ಡ ಅಪರಾಧವಾಗುತ್ತದೆ. ಸ್ಕೇರ್‌ಸಿಟಿ ಕಂಡೀಷನ್‌ಗೋಸ್ಕರ ಒಂದು ಕಡೆ 25 ಲಕ್ಷವನ್ನು, ಇನ್ನೊಂದು ಕಡೆ 18 ಲಕ್ಷವನ್ನು ಖರ್ಚು ಮಾಡಿದ್ದೀರಿ. ಹಣಕಾಸಿನ ಸಚಿವರು ಮತ್ತು ಲೋಕೋಪಯೋಗಿ ಶಾಖೆಯ ಸಚಿವರು ಮೈಸೂರು ದೇಶದಾದ್ಯಂತ ಪ್ರವಾಸ ಮಾಡಿ ಬಂದರು. ಇದಕ್ಕೆ ಮೊದಲು ಒಬ್ಬೊಬ್ಬ ಮಂತ್ರಿಗಳು ಪ್ರವಾಸ ಮಾಡಿ ಬಂದರು. ತಮ್ಮ ಕ್ಷೇತ್ರಗಳಲ್ಲಿ ಸಂಚಾರ ಮಾಡಿ ತಯಾರು ಮಾಡಿದಂಥ ನೋಟ್ ಮತ್ತು ಆಯಾ ಕ್ಷೇತ್ರಗಳ ಬೇಡಿಕೆಗಳು ಏನಿದ್ದವು, ಆಯಾ ಕ್ಷೇತ್ರಗಳ ಅವಶ್ಯಕತೆಗಳು ಏನಿದ್ದವು, ಎಂಬುದರ ಒಂದು ನೋಟನ್ನು ಕೊಟ್ಟರು. ಹಿಂದಿನ ಮಂತ್ರಿಗಳಾದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಹಾಸನ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅಲ್ಲಿಯ ಅವಶ್ಯಕತೆ ಏನಿದ್ದವು ಎಂಬುದರ ಬಗ್ಗೆ ಒಂದು ನೋಟ್ ಮಾಡಿ ಸರ್ಕಾರಕ್ಕೆ ಕಳಿಸಿದ್ದರು. ಅದರ ಗತಿ ಏನಾಯಿತು ಎಂದು ಸರ್ಕಾರದವರನ್ನು ಕೇಳುತ್ತೇನೆ. ಆ ನೋಟ್ ಕಸದ ಬುಟ್ಟಿಗೆ ಹೋಗಿದೆ ಎಂದು ಹೇಳುತ್ತೇನೆ. ಹಾಸನ ಜಿಲ್ಲೆಗೆ ಎಷ್ಟು ಇರಿಗೇಷನ್ ಪಂಪ್‌ಸೆಟ್ಟು ಕೊಟ್ಟಿದ್ದೀರಿ, ಎಷ್ಟು ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದೀರಿ, ಎಷ್ಟು ರಿಲೀಫ್ ವರ್ಕ್ಸ್ ಕಾಮಗಾರಿಗಳನ್ನು ಕೊಟ್ಟಿದ್ದೀರಿ ಎಂಬುದರ ಬಗ್ಗೆ ಅಂಕಿಅಂಶಗಳನ್ನು ಆರ್ಥಿಕ ಸಚಿವರು ಈ ಸಭೆಗೆ ಒದಗಿಸಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ತಾರತಮ್ಯ ಭಾವನೆ ನಿಮ್ಮಲ್ಲಿ ಬೆಳೆಯುತ್ತಿದೆ. ಎಲ್ಲಿಗೆ ಬೇಕೋ ಅಲ್ಲಿ ಕೊಡುತ್ತಿಲ್ಲ. ತಾರತಮ್ಯ ಭಾವನೆಯಿಂದ ನ್ಯಾಯಕ್ಕೆ ಬೆಲೆ ಸಿಕ್ಕುತ್ತಿಲ್ಲ. ಎಲ್ಲಾ ಕ್ಷೇತ್ರಗಳಿಗೂ, ಎಲ್ಲಾ ಸ್ಥಳಗಳಿಗೂ ಸರಿಯಾದ ರೀತಿಯಲ್ಲಿ ಆರ್ಥಿಕ ಸಂಪತ್ತನ್ನು ಹಂಚಬೇಕು. ಕೆಲವು ಜಿಲ್ಲೆಗಳಲ್ಲಿ fresh works ತೆಗೆದುಕೊಳ್ಳತಕ್ಕ ಕಾರ್ಯದ ಬಗ್ಗೆ, ಪಿ.ಡಬ್ಲ್ಯುಡಿ. ಮಂತ್ರಿಗಳು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಒಂದು ಕೆರೆಯ ರಿಪೇರಿ ಮಾಡಿಸಿಲ್ಲ; ಒಂದು ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಂಡಿಲ್ಲ, ಇದಕ್ಕೆ ಕಾರಣ ಏನು ಎಂದು ಸರ್ಕಾರದವರನ್ನು

(ಶ್ರೀ ಎಸ್. ಶಿವಪ್ಪ)

ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ನಿಮಗೆ ಮನಸ್ಸಿಗೆ ಬಂದ ಹಾಗೆ ಹಣ ಖರ್ಚು ಮಾಡುವುದಕ್ಕೆ ಏನು ಹಕ್ಕು ಇದೆ. ಯಾವ ಜಿಲ್ಲೆಯಲ್ಲಿ ದನಗಳಿಗೆ ಮೇವು ಇಲ್ಲದೆ, ಜನಗಳಿಗೆ ಅನ್ನವಿಲ್ಲದೆ ಪರಿತಪಿಸುತ್ತಿದ್ದಾರೋ ಅಂತಹ ಕಡೆ ಯಾವ ಕಾಮಗಾರಿಗಳನ್ನೂ ತೆಗೆದುಕೊಂಡಿಲ್ಲ. ನಮ್ಮ ಹಾಸನ ಜಿಲ್ಲೆಯಲ್ಲಿ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು? ನಮ್ಮ ಜನ ಕಂದಾಯ ಕೊಡುತ್ತಿಲ್ಲವೇನು ? ನಮ್ಮ ಜನ ತೆರಿಗೆ ಕೊಡುತ್ತಿಲ್ಲವೇನು? ತೆರಿಗೆ ವಸೂಲಿ ಮಾಡುತ್ತಿದ್ದಾರೆಯೇ ವಿನಾ ಒಂದೇ ಒಂದು ಕೆರೆಯನ್ನು ತೆಗೆದುಕೊಂಡಿಲ್ಲ. ಮೊನ್ನೆ ಹೊಸದಾಗಿ ಒಂದು ಲಿಸ್ಟ್ ಮಾಡಿದ್ದಾರೆ, ಅದರಲ್ಲಿ ಅನೇಕ ಜಿಲ್ಲೆಗಳಲ್ಲಿ ಹೊಸ ಹೊಸ ಕೆರೆಗಳನ್ನು ತೆಗೆದುಕೊಂಡಿದ್ದಾರೆ, ಆದರೆ ನನ್ನ ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲಿ ಒಂದನ್ನೂ ತೆಗೆದುಕೊಂಡಿಲ್ಲ. ನಾನು ಇವತ್ತಿನ ದಿವಸ ಸರ್ಕಾರದವರಲ್ಲಿ ಹೇಳುತ್ತಿದ್ದೇನೆ, ಈ ಶಾಸನ ಸಭೆ ಮುಗಿಯುವುದರೊಳಗೆ ಹಾಸನ ಜಿಲ್ಲೆಯಲ್ಲಿ ಮತ್ತು ಇತರ ಜಿಲ್ಲೆಗಳಲ್ಲಿ, ಎಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲವೋ ಅಂತಹ ಕಡೆಗಳಲ್ಲಿ ಕಾಮಗಾರಿಗಳನ್ನು ಶಾಸನ ಸದಸ್ಯರ ಒಪ್ಪಿಗೆ ಪಡೆದು, ಅವರ ಅಭಿಮತ ಪಡೆದು ಅವರ ಅಭಿಪ್ರಾಯದ ಮೇರೆಗೆ ಕೆಲಸಗಳನ್ನು ತೆಗೆದುಕೊಳ್ಳಬೇಕು. ಆ ರೀತಿಯಾದರೆ ದೇಶದಲ್ಲಿ ತಾರತಮ್ಯ ಇಲ್ಲದ ರೀತಿಯಲ್ಲಿ ಕೆಲಸ ಮಾಡಿದಂತಾಗುತ್ತದೆ. ಈ ಸಪ್ಲಿಮೆಂಟರಿ ಡಿಮ್ಯಾಂಡ್ಸನಲ್ಲಿ ಇಂತಹ ತಾರತಮ್ಯಗಳು ಇರುವುದರಿಂದ ನೀವು ಮೊದಲೇ ಸಭೆಯ ಅನುಮತಿ ಕೇಳಬೇಕಾಗಿತ್ತು. ಆದರೆ ಅನೇಕ ಅಂಶಗಳು ಕೊನೆಯಲ್ಲಿ ಬಂದಿರತಕ್ಕದ್ದು ಆರ್ಥಿಕ ಪರಿಸ್ಥಿತಿಗೆ ವಿರೋಧವಾಗಿದೆ. ಸಭಾಪತಿಗಳೇ, ಈ ಸಪ್ಲಿಮೆಂಟರಿ ಎಸ್ಟಿಮೇಟ್‌ಗಳನ್ನು ನಾನು ವಿರೋಧ ಮಾಡುತ್ತೇನೆ.

Mr. SPEAKER.—Out of the time available, I suggest half an hour might be sufficient for the reply. The Debate will go on till 12 Noon. As far as possible, I will try to accommodate members of the Opposition. If there are any urgent or imperative demands from Members of the Ruling Party or from independents also, they might tell me. I have included the independent Members in the Opposition.

† ಶ್ರೀ ಸಿದ್ದಯ್ಯ ಕಾಶಿಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಈ ಸಭೆಯ ಮುಂದೆ 44 ಕೋಟಿ ರೂಪಾಯಿಗಳು ಹಾಗೂ 58 ಕೋಟಿ ರೂಪಾಯಿಗಳು ಹೆಚ್ಚುವರಿ ಬೇಡಿಕೆಗಳನ್ನು ಇಟ್ಟಿದ್ದೀರಿ. ಇದು ಅಸೆಂಬ್ಲಿಯ ಇತಿಹಾಸದಲ್ಲಿಯೇ ಹೆಚ್ಚುವರೀ ಬೇಡಿಕೆಗಳ ಬಗ್ಗೆ ಹೆಚ್ಚಿನದಾದುದು ಎಂದರೆ ತಪ್ಪಾಗಲಾರದು ಎಂದು ಹೇಳುತ್ತೇನೆ. ವಿವಿಧ ಖಾತೆಯಿಂದ ರೈತರು ಸಹಾಯ ಪಡೆದು ಹೆಚ್ಚಿನ ಆಹಾರಧಾನ್ಯ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಜಪಾನಿಯರು ತಯಾರು ಮಾಡಿರತಕ್ಕಂಥ ಪವರ್ ಟಿಲ್ಲರ್ಸ್ ತರಿಸಿ ಅವನ್ನು ಅವರ ಉಪಯೋಗಕ್ಕಾಗಿ ಕೊಡಬೇಕೆನ್ನುವ ಉದ್ದೇಶವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ನಾನಾದರೂ ಹೇಳಬೇಕು ಎಂದರೆ, ಈ ವ್ಯವಸಾಯ ಖಾತೆ ಬಗ್ಗೆ ಮೇಲಿಂದ ಮೇಲೆ ಹೇಳುತ್ತಾ ಬಂದಿದ್ದೇನೆ, ಇದು ಸರಿಯಾಗಿ ನಡೆಯುತ್ತಾ ಇಲ್ಲ, ಹೆಚ್ಚಿನ ನೌಕರರು ಇದ್ದರೂ ಕೂಡ ಯಾವ ರೀತಿಯಿಂದಲೂ ಸರಿಯಾಗಿ ಕೆಲಸವನ್ನು ನಿರ್ವಹಿಸುತ್ತಾ ಇಲ್ಲ. ಅಲ್ಲದೆ ಸರ್ಕಾರದವರು ಸಹ ಇವರ ಮೇಲೆ ಸರಿಯಾದ ಕ್ರಮವನ್ನು, ತೆಗೆದುಕೊಳ್ಳದೆ ಇರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಈ ಪವರ್ ಟಿಲ್ಲರ್ಸ್‌ಗಳನ್ನು ಸರ್ಕಾರದವರು ತರಿಸಿ ಅವರೇ ನಡೆಸಬೇಕು ಎಂದರೆ ಕಷ್ಟವಿದೆ. ಈ ಹಿಂದೆ ಕೂಡ ಸರ್ಕಾರದವರು ಟ್ರಾಕ್ಟರ್‌ಗಳನ್ನು ತರಿಸಿ ಅವುಗಳು ರೈತನ ಉಪಯೋಗಕ್ಕೆ ಬಾರದೆ ಇರುವ ವಿಷಯಗಳು ಇದೆ. ಅಲ್ಲದೆ ಟ್ರಾಕ್ಟರ್‌ಗಳ ಸ್ಪೇರ್ ಪಾರ್ಟ್ಸ್ ಸಿಕ್ಕದೆ ಕೆಟ್ಟಿರುವ ಟ್ರಾಕ್ಟರ್‌ಗಳು ಗ್ಯಾರೇಜ್‌ನಲ್ಲಿರುವ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಟ್ರಾಕ್ಟರ್‌ಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ, ಎಷ್ಟರ ಮಟ್ಟಿಗೆ ರೈತನ ಉಪಯೋಗಕ್ಕೆ ಬರುತ್ತಿವೆ ಎನ್ನುವುದನ್ನು ನೋಡಬಹುದು. ಇವುಗಳನ್ನು ನೋಡಿಕೊಳ್ಳಲು ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಿಸಿದ್ದಾರೆ. ಸಿಬ್ಬಂದಿಗಾಗಿ ಅಪಾರವಾದ ಖರ್ಚನ್ನು ಮಾಡುತ್ತಿದ್ದಾರೆ. ಸ್ಟೇಟ್ ಲೆವೆಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ, ತಾಲ್ಲೂಕ್ ಲೆವೆಲ್‌ನಲ್ಲಿ, ಫೀಲ್ಡ್ ಯೂನಿಟ್‌ಗಳ ಈ ವ್ಯವಸಾಯ ಖಾತೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಲಸವಿಲ್ಲದೇ ಇರುವುದರಿಂದ, ಮತ್ತು ಅಲ್ಲಿರತಕ್ಕಂಥ ಅಗ್ರಿಕಲ್‌ಚರ್ ಇಂಜನೀಯರುಗಳು ಅನಾವಶ್ಯಕವೆಂದು ನಾನು ಹೇಳುತ್ತೇನೆ. ಈಗ ಜಪಾನ್ ಟ್ರಾಕ್ಟರ್‌ಗಳಿಗೆ ಹೆಚ್ಚು ಬೇಡಿಕೆಯಿರುವುದರಿಂದ 178 ಟ್ರಾಕ್ಟರ್‌ಗಳು ಮದ್ರಾಸ್‌ನಿಂದ ಬರಬಹದು. ಬಂದ ನಂತರ ಅವುಗಳನ್ನು ಜಿಲ್ಲೆಗಳಿಗೆ, ತಾಲ್ಲೂಕ್ ಗಳಿಗೆ, ಫೀಲ್ಡ್ ಯೂನಿಟ್‌ಗಳಿಗೆ ತಕ್ಷಣ (ಹೈರ್ ಚಾರ್ಜಪ್

ಮುಖಾಂತರ) ಕೊಡುತ್ತೀರೆಂದು ನಂಬಿದ್ದೇನೆ. ಟ್ರಾಕ್ಟರ್‌ಗಳ ವಿಚಾರವಾಗಿ ಸರ್ಕಾರದವರು ಇವತ್ತಿನ ದಿವಸ ನೇರವಾಗಿ ಮೇಲ್ ವಿಚಾರಣೆ ಮಾಡುವುದಕ್ಕಾಗುವುದಿಲ್ಲವಾದ್ದರಿಂದ, ಟ್ರಾಕ್ಟರ್‌ಗಳನ್ನು ರೈತನಿಗೆ ಹೈರ್ ಬೇಸಿಸ್ ಬದಲು, ಸಾಲದ ರೂಪದಲ್ಲಿ ಕೊಟ್ಟು 20 ಕಂತುಗಳಲ್ಲಿ ವಸೂಲು ಮಾಡಲಿಕ್ಕೆ ಪ್ರಯತ್ನ ಪಟ್ಟರೆ, ಹಣ ಕೂಡ ಕಡಿಮೆಯಾಗುತ್ತದೆ ಎಂದು ಕಾಣಿಸುತ್ತದೆ. ಏಕೆಂದರೆ ನಾವು ಈಗಾಗಲೆ ಟ್ರಾಕ್ಟರ್‌ಗಳನ್ನು ಲೋನ್ ಸಿಸ್ಟಮ್ ಮುಖಾಂತರ ಕೊಡುತ್ತಿರುವುದರಿಂದ, ಅವುಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿವೆ. ಒಬ್ಬ ರೈತನು ಕೊಂಡುಕೊಂಡನಂತರ ಅದರ ಮೇಲಿನ ಬೇಡಿಕೆ ಹೆಚ್ಚು ಬರುವುದರಿಂದ ಅವುಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಅಂದರೆ ಸಾಲದ ಮುಖಾಂತರ ಅವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಈ ರೀತಿ ಸರ್ಕಾರದವರು ಮಾಡಿದರೆ ಅನುಕೂಲವಾಗುತ್ತದೆಂದು ಸಲಹೆ ಮಾಡುತ್ತೇನೆ.

[MR. DEPUTY SPEAKER in the Chair]

ಇನ್ನು ಪ್ರೋಕ್ಯೂರ್‌ಮೆಂಟ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇದ್ದೇನೆ. ಈಗಾಗಲೇ ಪ್ರೊಕ್ಯೂರ್‌ಮೆಂಟ್ ಮಾಡುವುದಕ್ಕಾಗಿ ಸಾಕಷ್ಟು ಸಿಬ್ಬಂದಿಯನ್ನು ನೇಮಿಸಿ ಅದರ ಮುಖಾಂತರ ಹೆಚ್ಚಾದ ರೀತಿಯಲ್ಲಿ ಸಂಗ್ರಹ ಮಾಡಬೇಕೆಂದು ಮಾಡಿದ್ದೀರಿ. ಫುಡ್‌ಗ್ರೈನ್ಸ್ ವಸೂಲು ಮಾಡುವ ವಿಚಾರದಲ್ಲಿ ಒಂದೆರಡು ಸಲಹೆ ಕೊಡುತ್ತೇನೆ. ಮೊದಲನೆ ದಿವಸ, ಆಹಾರ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು, ಎಲ್ಲಿ ದೊಡ್ಡ ಮನುಷ್ಯ ಇಂಟರ್ ಫಿಯರ್ ಮಾಡಿಲ್ಲವೋ ಅಲ್ಲಿ ಪ್ರೊಕ್ಯೂರ್‌ಮೆಂಟ್ ಸರಿಯಾಗಿ ಆಗಿದೆ, ಎಂದು. ನೀವು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೀರಿ. ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸತಕ್ಕ ಕಾಲದಲ್ಲಿ ಲೆವಿ ವಸೂಲು ಮಾಡುವಾಗ ನಡೆದಿರುವ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಲೆವಿ ಕೊಡದೇ ಇರತಕ್ಕವರು ಯಾರು ? ಶ್ರೀಮಂತರು. ಸಾಮಾನ್ಯ ರೈತ ತನ್ನಲ್ಲಿ ಇರತಕ್ಕ ಆಹಾರಧಾನ್ಯಗಳನ್ನು ಸಲೀಸಾಗಿ ಕೊಟ್ಟಿರುತ್ತಾನೆ. ಸಾಧ್ಯವಾದಷ್ಟು ಹೆಚ್ಚಿಗೆ ಧಾನ್ಯ ಸಂಗ್ರಹಣೆ ಆಗದೇ ಇದ್ದುದು ಶ್ರೀಮಂತರ ಕಡೆಯಿಂದ. ಡಿಕ್ಲರೇಷನ್ ಸಹ ಕೊಡದೇ ಇರತಕ್ಕವರ ಕಡೆ ತಾಸೀಲ್ದಾರ್ ಆಗಲಿ ಅಸಿಸ್ಟೆಂಟ್ ಕಮೀಷನರ್ ಆಗಲಿ ಹೋಗಿ ಜಪ್ತಿ ಮಾಡಿದಾಗ ಪ್ರಬಲವಾದ ಇನ್‌ಫ್ಲೂಯನ್ಸ್ ಸರ್ಕಾರದ ಮೇಲೆ ತಂದಾಗ ಆತನು ವಾಪಸ್ಸು ಬಂದಿರತಕ್ಕದ್ದು, ಅಷ್ಟೇ ಅಲ್ಲದೆ ಇಂತಹ ಸಂದರ್ಭಗಳಲ್ಲಿ ಕೆಲವು ಪ್ರಾಮಾಣಿಕರಾದ ತಾಸೀಲ್ದಾರ್ ಮತ್ತು ಅಸಿಸ್ಟೆಂಟ್ ಕಮೀಷನರುಗಳನ್ನು ವರ್ಗ ಮಾಡಿರತಕ್ಕ ಸಮಾಚಾರ ಬಂದಿದೆ. ಅಂತಹದು ಆಗದಂತೆ ಆಹಾರ ಮಂತ್ರಿಗಳು ನೋಡಿಕೊಳ್ಳಬೇಕು. ಯಾರೇ ಇರಲಿ, ಅಸಿಸ್ಟೆಂಟ್ ಕಮೀಷನರ್‌ರವರೇ ಇರಲಿ, ಆಹಾರಧಾನ್ಯದ ಬಗ್ಗೆ ಇವೊತ್ತಿನ ದಿವಸ ಅವರ ಮೇಲೆ ದೂರನ್ನು ತರುತ್ತಾರೋ, ಅದು ಸರಿಯೋ ಅಲ್ಲವೋ ಅನ್ನುವ ವಿಚಾರದಲ್ಲಿ ಯೋಗ್ಯ ಕ್ರಮ ಕೈಗೊಳ್ಳಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ರಿಜಸ್ಟ್ರೇಷನ್ ವಿಚಾರ. ತಾವು ಅದರಲ್ಲಿ ಹೇಳುತ್ತಾ ಇದ್ದೀರಿ, ಹೆಚ್ಚಿನ ಕೆಲಸ ರಿಜಸ್ಟ್ರೇಷನ್ ಆಫೀಸಿನಲ್ಲಿ ಇರುವುದರಿಂದ, ಮೇಲ್ವಿಚಾರಣೆ ಕಡಿಮೆಯಾಗಿ, ಹಣ ಬಹಳ ದುರುಪಯೋಗ ಆಗುತ್ತಾ ಇದೆ. ಅದರಸಲುವಾಗಿ ನಾವು ಐದುಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಅಸಿಸ್ಟೆಂಟ್ ಮತ್ತು 14ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಎರಡನೇ ಗ್ರೇಡ್ ಈ ರೀತಿಯಾಗಿ ಕೆಲವು ಪೋಸ್ಟ್ ಕ್ರಿಯೇಟ್ ಮಾಡಿದ್ದೀರಿ ಎಂದು. ರಿಜಸ್ಟ್ರೇಷನ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುತ್ತಾ ಇರತಕ್ಕಂಥ ಲಂಚದ ಪ್ರಭಾವ ಮೇಲಿಂದ ಮೇಲೆ ಹೇಳುತ್ತಾ ಇದ್ದೇನೆ. ಬರೀ ಪೋಲೀಸಿನವರು ಮಾತ್ರ ಅಲ್ಲಲ್ಲಿ ಲಂಚ ಸ್ವೀಕರಿಸುತ್ತಾ ಇದ್ದಾರೆ ಎಂದಲ್ಲ. ಹೆಚ್ಚಿನದಾಗಿ ರಿಜಸ್ಟ್ರೇಷನ್ ಆಫೀಸಿನಲ್ಲಿ ಲಂಚ ಪಡೆಯತಕ್ಕದ್ದು ಇದೆ. ಮೇಲ್ವಿಚಾರಣೆಗಾಗಿ ಇನ್‌ಸ್ಪೆಕ್ಟರ್ ಆಫ್ ಸ್ಟ್ಯಾಂಪ್ಸ್ ನೇಮಿಸಿ ಅವರ ಮುಖಾಂತರ ಇದನ್ನೆಲ್ಲಾ ಹೋಗಲಾಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಅದು ಹೆಚ್ಚು ಸುಧಾರಿಸಿದ್ದು ಕಂಡು ಬರುತ್ತಾ ಇಲ್ಲ. ಲಂಚ ಬಹಳ ವಿಪುಲವಾಗಿದೆ. ಅದಕ್ಕಾಗಿ ಹೇಗೆ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಮಾಡುತ್ತೀರೋ ಅದೇರೀತಿ ಸಬ್‌ರಿಜಸ್ಟ್ರಾರ್ ಆಫೀಸಿನಲ್ಲಿ ನಡೆಯತಕ್ಕಂಥ ತೊಂದರೆಯನ್ನು ನೀಗಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡುತ್ತಾ ಇದ್ದೇನೆ.

ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಸಬ್‌ರಿಜಸ್ಟ್ರಾರ್ ಆಫೀಸಿನಲ್ಲಿ, ಡಾಕ್ಯುಮೆಂಟ್ ರಿಜಸ್ಟರ್ ಮಾಡಿದಾಗ, ಅವುಗಳನ್ನು ನಾವು ಪಡೆಯಬೇಕಾದರೆ, 3-4 ತಿಂಗಳು ಸಮಯ ಇವೊತ್ತಿನ ದಿವಸ ಬೇಕಾಗುತ್ತದೆ. ಒಂದು ಉದಾಹರಣೆ ಹೇಳಬೇಕು ಎಂದರೆ, ಟ್ರ್ಯಾಕ್ಟರುಗಳನ್ನು ಕೊಳ್ಳುವಾಗ ನಾವು ರಿಜಸ್ಟ್ರೇಷನ್ ಮುಖಾಂತರ ಅವರಿಗೆ ಡಾಕ್ಯುಮೆಂಟ್ಸ್ ಕಳುಹಿಸಬೇಕಾಗುತ್ತದೆ. ಅಂತಹ ಹೊತ್ತಿನಲ್ಲಿ ಲೋನ್ ಸ್ಯಾಂಕ್ಷನ್ ಆಗಿ ಟ್ರಾಕ್ಟರ್ ಬಂದಾಗ ಕೂಡ ಡಾಕ್ಯುಮೆಂಟ್ ಕಾಪಿ

(ಶ್ರೀ ಸಿದ್ದಯ್ಯ ಕಾಶೀಮಠ್)

ಇಲ್ಲದೆ ಹೋದರೆ, ಮಾನ್ಯತೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಇರುವುದರಿಂದ, ರೈತನಿಗೆ ಕಷ್ಟವಾಗಿದೆ. ಹಿಂದೆ ಬೊಂಬಾಯಿ ಕರ್ನಾಟಕದಲ್ಲಿ ಯಾವರೀತಿಯಲ್ಲಿ ಕೋಟಾ ಸಿಸ್ಟಂ ಜಾರಿಗೆ ತಂದಿದ್ದರೋ, ಅದೇರೀತಿ 8 ದಿವಸದೊಳಗೆ ಆದರೂ ಕೂಡ ರಿಜಿಸ್ಟ್ರೇಷನ್ ಕಾಫಿ ದೊರೆಯುವಂತೆ ಮಾಡಬೇಕು. ತೀವ್ರಗತಿಯಿಂದ ರಿಜಿಸ್ಟ್ರೇಷನ್ ಕಾಪಿ ದೊರೆಯುವ ಪ್ರಮೇಯ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಹೋಮ್‌ಗಾರ್ಡ್ಸ್ ವಿಚಾರವಾಗಿ ಒಂದು ಮಾತು ಹೇಳಬೇಕು ಎಂದರೆ, ಹಿಂದೆ ಹೋಮ್ ಮಿನಿಸ್ಟರ್ ಭರವಸೆ ಕೊಟ್ಟಿದ್ದರು, ಅದಷ್ಟುಮಟ್ಟಿಗೆ ಹೋಮ್‌ಗಾರ್ಡ್ಸ್ ದಳವನ್ನು ಪ್ರತಿ ತಾಲ್ಲೂಕಿನಲ್ಲಿಯೂ ನಿರ್ಮಾಣ ಮಾಡಿ, ಅದಷ್ಟುಮಟ್ಟಿಗೆ ಪೋಲೀಸ್‌ಗೆ ಸಹಾಯ ಮಾಡಿ ಅಲ್ಲಿನಡೆಯುತಕ್ಕ ದುರ್ವ್ಯವಹಾರಗಳನ್ನು ಕಡಿಮೆ ಮಾಡುತ್ತೇವೆಂದು. ಆಗ ಎಷ್ಟು ಇತ್ತೋ ಈಗಲೂ ಅಷ್ಟೇ ಇದೆ. ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಹೋಮ್‌ಗಾರ್ಡ್ಸ್ ಇಲ್ಲಿ ಮಾಡಿದ್ದೀರಿ. ಆದರೆ ತಾಲ್ಲೂಕು ಮಟ್ಟದಲ್ಲಿ ಅಂಥ ಹುದ್ದೆಯನ್ನು ನಿರ್ಮಾಣ ಮಾಡಿಲ್ಲ. ಪ್ರತಿಯೊಂದು ತಾಲ್ಲೂಕಿಗೆ ಒಂದು ಯೂನಿಟ್ಟು ಮಾಡಬೇಕು. ಇಷ್ಟೇ ಅಲ್ಲದೆ ಅವುಗಳನ್ನು ಅದಷ್ಟುಮಟ್ಟಿಗೆ ಜಿಲ್ಲಾ ಲೆವೆಲ್‌ನಲ್ಲಿ ಸೂಪರಿಂಟೆಂಡೆಂಟ್ ಆಫೀಸ್ ಮಾಡಿ ಹೋಮ್‌ಗಾರ್ಡ್ಸ್ ಮೇಲ್ವಿಚಾರಣೆ ನೋಡಬೇಕು. ಅದೇರೀತಿ ತಾಲ್ಲೂಕು ಆಫೀಸಿನಲ್ಲಿ ಅವರಿಗೆ ಸ್ಥಾನ ಕೊಟ್ಟು ಆ ರೀತಿ ಏರ್ಪಾಡು ಮಾಡಿದರೆ ಅವರು ಹೆಚ್ಚಿನದಾದ ಬಾಡಿಗೆ ಕೊಡತಕ್ಕದ್ದನ್ನು ಕಡಿಮೆ ಮಾಡಬಹುದು ಎಂದು ಸಲಹೆ ಮಾಡುತ್ತೇನೆ.

ಇನ್ನು ತಹಸೀಲ್ದಾರರ ಆಫೀಸ್ ವಿಚಾರ. ಲ್ಯಾಂಡ್ ರೆವಿನ್ಯೂ ಆಕ್ಟ್ ಯೂನಿಫಾರಂ ಮಾಡಿ, ದೇಶಾದ್ಯಂತ ಒಂದೇ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾನು ಹೇಳಬೇಕು ಎಂದರೆ, ಹಳೇ ಮುಂಬಯಿ ಕರ್ನಾಟಕ ಹಾಗೂ ಮದ್ರಾಸಿನಿಂದ ಬಂದಂಥ ಹಾಗೂ ಹೈದರಾಬಾದಿನಿಂದ ಬಂದಂಥ ತಾಲ್ಲೂಕು ಆಫೀಸುಗಳನ್ನು ನೋಡುವಾಗ, ನಾನಾದರೂ ತಿಳಿದುಕೊಂಡಿದ್ದೇನೆ, ಹಳೇ ಮೈಸೂರಿನಲ್ಲಿ ಇರುವ ಆಫೀಸಿನಲ್ಲಿ ಸ್ಟಾಫ್ ಸಂಖ್ಯೆ 20-22 ಇರುವಾಗ, ಬೇರೆ ಕಡೆ ಕೇವಲ 8-10 ಮಂದಿ ಸ್ಟಾಫ್ ಇರತಕ್ಕ ಪದ್ಧತಿ ಇದೆ ಎಂದು ಹೇಳುತ್ತೇನೆ. ಇದೇ ರೀತಿ ಗುಲ್ಬರ್ಗ ರಾಯಚೂರಿನಲ್ಲ ಕೂಡ ಕಡಿಮೆ ಸ್ಟಾಫ್ ಇದೆ. ಎಲ್ಲಿ ನೋಡಿದರೂ ಮೈಸೂರು ಮತ್ತು ಇತರ ಭಾಗಗಳಿಗಿಂತ 50 ಪರ್ಸೆಂಟು ಕಡಿಮೆ ಇರುವುದು ಇದೆ. ಯಾವ ರೀತಿ ಯೂನಿಫಾರಂ ಮಾಡಿದ್ದೀರೋ ಅದೇರೀತಿ ಇವೊತ್ತಿನ ದಿವಸ ಸರಿಯಾದ ಸ್ಟಾಫ್‌ನ್ನು ಎಲ್ಲಾ ಭಾಗಗಳಿಗೂ ಒದಗಿಸಿಕೊಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ಟಿ.ಬಿ. ಟ್ರೀಟ್‌ಮೆಂಟ್ ಬಗ್ಗೆ ತಾವು ಹೇಳುತ್ತಾ ಇದ್ದೀರಿ ಟಿ.ಬಿ. ಟ್ರೀಟ್‌ಮೆಂಟ್ ಎಲ್ಲಾ ಸೆಂಟರ್ಸ್‌ಗಳಲ್ಲಿ ತೆರೆಯಬೇಕು ಎಂದು. ಗದಗಿನ ಮಲ್ಲಸಮುದ್ರದಲ್ಲಿ ಮಹಾತ್ಮ ಟಿ.ಬಿ.ಸ್ಯಾನಿಟೋರಿಯಮನ್ನು ಪ್ರೈವೇಟ್ ಆಗಿ ನಡೆಸುತ್ತಿದ್ದಾರೆ. ಅಲ್ಲಿ ಬಿಲ್ಡಿಂಗ್ ಇದೆ. ಸಾಕಷ್ಟು ಜಾಗ, ನೀರು ಸರಿಯಾಗಿ ಇದೆ. ಆದರೆ ಅಲ್ಲಿ ಪೇಷೆಂಟ್ಸ್ ಇಲ್ಲದೇ ಇರತಕ್ಕ ಪ್ರಮೇಯ ಇದೆ. ಅಲ್ಲಿ ಇರತಕ್ಕ ಕಮಿಟಿಯವರು ಪುಕ್ಕಟೆ ಬಿಲ್ಡಿಂಗ್ ಮತ್ತು ಇತರ ಸಲಕರಣೆಗಳನ್ನು ಸರ್ಕಾರಕ್ಕೆ ಒದಗಿಸುಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದನ್ನು ಸರ್ಕಾರ ವಹಿಸಿಕೊಂಡು ಸರ್ಕಾರದ ಮುಖಾಂತರ ಇವೊತ್ತಿನ ದಿವಸ ಟಿ.ಬಿ. ಪೇಷೆಂಟುಗಳಿಗೆ ಸಹಾಯ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ರಿಲೀಫ್ ವರ್ಕ್ಸ್ ಬಗ್ಗೆ ಹೇಳುವುದಾದರೆ, ಈಗಾಗಲೇ ಸಾಕಷ್ಟು ರೀತಿಯಲ್ಲಿ ಜನಗಳು ತೊಂದರೆಪಡುತ್ತಿದ್ದಾರೆ. 400 ಜನ ರಿಲೀಫ್ ಅಸಿಸ್ಟೆಂಟ್ಸ್ ಮಾಡಿದ್ದೀರಿ ಎಂದು ಹೇಳುತ್ತೀರಿ. ರಿಲೀಫ್ ಅಸಿಸ್ಟೆಂಟ್ಸ್ ಅಪಾಯಿಂಟ್ ಮಾಡಿ ಅವರ ಮುಖಾಂತರ ಇವೊತ್ತಿನ ದಿವಸ ಕೆಲಸ ಮಾಡುವುದು ತಡವಾಗುತ್ತಾ ಇರುವುದರಿಂದ ಆದಷ್ಟು ತೀವ್ರಗತಿಯಿಂದ ಎಲ್ಲೆಲ್ಲಿ ಅಭಾವ ಪೀಡಿತ ಪ್ರದೇಶ ಇದೆಯೋ ಆ ಪ್ರದೇಶಗಳಲ್ಲಿ ಕೆಲಸ ಪ್ರಾರಂಭಿಸಿ ಸಹಾಯವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ನಾನು ಹೇಳುತ್ತೇನೆ. ಅಷ್ಟೇ ಅಲ್ಲದೇ ಬಂಗಾರ ನಿಯಂತ್ರಣದಿಂದ ತೊಂದರೆಗೆ ಒಳಗಾದ ಅಕ್ಕಸಾಲಿಗರಿಗೆ ಕಾಲೋನಿಗಳನ್ನು ಮಾಡಿದ್ದೀರಿ. ಅವರನ್ನು ಕಡ್ಡಾಯವಾಗಿ ಒಕ್ಕಲುತನಕ್ಕೆ ಹಚ್ಚಿದರೆ, ಮುಂದೆ ಬರುವುದಿಲ್ಲ. ಆದ್ದರಿಂದ ಅವರಿಗೆ ಯಾವುದರಲ್ಲಿ ಇಷ್ಟವಿದೆಯೋ ಅಂಥದರಲ್ಲಿ ಟ್ರೈನಿಂಗ್ ಕೊಟ್ಟು ಪ್ರೋತ್ಸಾಹ ಮಾಡಿದರೆ ಸರಿಹೋಗುತ್ತದೆ ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವೊತ್ತಿನ ದಿವಸ ತಂದಿರತಕ್ಕ ಹೆಚ್ಚುವರಿ ಬೇಡಿಕೆ ಸುಮಾರು 58 ಕೋಟಿ ರೂಪಾಯಿ ಇರತಕ್ಕದ್ದನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

10-00 A.M.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ಈ ದಿವಸ ತಂದಿರತಕ್ಕ ಈ 59 ಕೋಟಿ ರೂಪಾಯಿ ಚಿಲ್ಲರೆಯ ಡಿಮ್ಯಾಂಡನ್ನು ನೋಡಿದರೆ ಬರೇ ಒಂದು ಟೋಕನ್ ಡಿಮಾಂಡ್ಸ್ ತರಹ ಇದೆ. ಇದನ್ನೆಲ್ಲಾ ಲೆಕ್ಕಾಚಾರ ಹಾಕಿದರೆ, ಇದು ಹನುಮಂತನ ಬಾಲ ಬೆಳೆದ ಹಾಗೆ ಬೆಳೆಯುತ್ತಾ ಇದೆ. ಇದಕ್ಕೆ ಒಂದು ಇತಿ ಮಿತಿ ಏನೂ ಇಲ್ಲ. ಇದರಲ್ಲಿ ಒಂದು ಸರಿಯಾದ ಅಂಕಿ ಅಂಶ ಕೂಡ ಸಿಕ್ಕುವುದಿಲ್ಲ. ಒಂದು ಕಡೆ ಒಂದು ತರಹ ಕೊಡುತ್ತಾರೆ ಇನ್ನೊಂದು ಕಡೆ ಬೇರೆ ತರಹ ಇದೆ. ಒಂದು ನಿರ್ದಿಷ್ಟವಾದ ಅಂಕಿ ಅಂಶಗಳು ಇದರಲ್ಲಿ ಇಲ್ಲ. ಇದಕ್ಕೆ ಬದಲು ಒಂದು ಸರಿಯಾದ ಅಂದಾಜನ್ನು ಹಾಕಿ ಈ ಸಪ್ಲಿಮೆಂಟರಿಯನ್ನು ಮುಂದಿಟ್ಟಿದ್ದರೆ ಬಹಳ ಚೆನ್ನಾಗಿತ್ತು. ಈ ಮೂರನೇ ಇನ್‌ಸ್ಟಾಲ್‌ಮೆಂಟ್ ಆಗಿ ಇರುವುದನ್ನು ನಾವು ಮೊದಲು ಎಷ್ಟು ಇತ್ತೋ ಅಷ್ಟಕ್ಕೆ ಅಂದಾಜು ಮಾಡಬಹುದು. ಆದ್ದರಿಂದ ಇಷ್ಟು ಬರೇ ಸಂಖ್ಯೆಯಲ್ಲಿ ಸಪ್ಲಿಮೆಂಟರಿಯನ್ನು ಇಡುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಎಂದು ನಾನು ಹೇಳುತ್ತೇನೆ. ಮೊದಲು ಖರ್ಚು ಮಾಡಿ, ಆಮೇಲೆ ಈ ಸಭೆಯ ಮುದ್ರೆಯನ್ನು ಒತ್ತಲು ಇಡುವುದು ನ್ಯಾಯವಲ್ಲ ಮತ್ತು ಸೂಕ್ತವಲ್ಲ; ಅದು ಬರೇ ರ್‍ಯಾಟಿಫಿಕೇಶನ್ ಆಗುತ್ತದೆಯೇ ಹೊರತು ಡಿಮಾಂಡ್ ಆಗುವುದಿಲ್ಲ. ಕಾನೂನು ಪ್ರಕಾರ ಸಭೆಯ ಒಪ್ಪಿಗೆಯನ್ನು ಪಡೆಯಲು ತರಬಹುದು. ಆದರೆ ನ್ಯಾಯವಾಗಿ ಈ ಪ್ರಜಾ ಪ್ರಭುತ್ವ ಸಭೆಯಲ್ಲಿ ಹೇಗೆ ನಡೆಯಬೇಕೋ ಹಾಗೆ ನಡೆಯದೆ, ಪ್ರಜೆಗಳಿಂದ ಚುನಾಯಿತರಾಗಿ ಬಂದಂತಹ ಮೆಂಬರುಗಳು ತಮ್ಮನ್ನು ಆಳತಕ್ಕ ಮುಖಂಡರ ಕೈಯೊಳಗೆ ಅಧಿಕಾರವನ್ನಿತ್ತು ಅವರ ಅಡಿಯಾಳಾಗಿ ತಮ್ಮ ಒಂದು ಒಪ್ಪಿಗೆಯನ್ನು ಕೊಡುತ್ತಾರೆಯೇ ಹೊರತು, ಪ್ರಜಾಪ್ರಭುತ್ವದ ಲಕ್ಷಣಕ್ಕನುಸಾರವಾಗಿ, ತಮ್ಮ ಆತ್ಮ ಸಾಕ್ಷಿಯಾಗಿ, ಅವರ ಒಪ್ಪಿಗೆಯನ್ನು ಕೊಡುವುದಿಲ್ಲ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ನಮ್ಮ ಪಕ್ಷದಲ್ಲೂ ಅನೇಕ ಜನರು ಇದ್ದಾರೆ. ಅವರೆಲ್ಲಾ ಇದಕ್ಕೆ ಪ್ರತ್ಯಕ್ಷವಾಗಿ ವಿರೋಧ ತೋರ್ಪಡಿಸದಿದ್ದರೂ, ಅವರು ಮನಸ್ಸಿನೊಳಗೆ ನೊಂದುಕೊಳ್ಳುತ್ತಾ ಇರುತ್ತಾರೆ. ಇಂತಹ ಒಂದು ಸಂಕಟ ಮತ್ತು ಸಂದಿಗ್ಧ ಪರಿಸ್ಥಿತಿಯಲ್ಲಿ ಇಂತಹ ಮಾಡಬಾರದಂತಹ ಕೆಲಸಗಳನ್ನು ಮಾಡಿ ಸರ್ಕಾರದವರು ಮುಂದೆ ಚರಿತ್ರೆಯಲ್ಲಿ ತೀಕ್ಷ್ಣ ಟೀಕೆಗೆ ಗುರಿಯಾಗುತ್ತಾರೆ; ಮತ್ತು ಇಂತಹ ಅನ್ಯಾಯಗಳನ್ನು ಮಾಡಿ ಪ್ರಜಾಪ್ರಭುತ್ವದ ಒಂದು ವೃಕ್ಷಕ್ಕೆ ಒಂದು ಕೊಡಲ ಯೇಟನ್ನು ಕೊಡುತ್ತಾರೆ ಎಂದು ಈ ಸಭೆಯ ಮುಂದೆ ಹೇಳಲಿಚ್ಛಿಸುತ್ತೇನೆ. ಇದರಲ್ಲಿ ಹಣವನ್ನು ಎಲ್ಲಾ ಖರ್ಚು ಮಾಡಿ ಮಾರ್ಚಿ ಕೊನೆಯಲ್ಲಿ ಸಭೆಯ ಮುಂದೆ ತಂದರೆ ನಮ್ಮ ಮನಸ್ಸಿಗೆ ಎಷ್ಟೊ ಸಂಕಟವುಂಟಾಗುತ್ತದೆಂಬುದನ್ನು ತಾವಾದರೂ ಆಲೋಚನೆ ಮಾಡಬೇಕು. ಈ ತರಹ ಕೋಟಿ ಗಟ್ಟಲೆ ಹಣವನ್ನು ಖರ್ಚು ಮಾಡತಕ್ಕ ಪಕ್ಷದಲ್ಲಿ ಈ ಅಸೆಂಬ್ಲಿ ಕೆಲಸ ಏನಿದೆ ? ಎಂದು ನಾನಾದರೂ ಕೇಳುತ್ತೇನೆ. ಇವತ್ತಿನ ದಿವಸ ನಮ್ಮ ಪ್ರಜಾಪ್ರಭುತ್ವಕ್ಕೆ 18 ವರ್ಷ ವಯಸ್ಸು ಆಗಿರುವುದರಿಂದ ಅದು ಇನ್ನೂ ಚಿಕ್ಕದು. ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗುವುದಕ್ಕೆ ನಮಗೆ ಶಕ್ತಿ ಬೇಕಾದ ಪಕ್ಷದಲ್ಲಿ ಇಂತಹ ಅನಾವಶ್ಯಕವಾದ ಖರ್ಚನ್ನು ಕಡಿಮೆ ಮಾಡಬೇಕು. ಇಂದು ನಿಮ್ಮ ಪಕ್ಷ ಒಂದು ಬೋಲ್‌ಶೆವಿಕ್ ಪಕ್ಷದ ತರಹ ಆಗಿ ಮುಂದುವರಿಯುತ್ತಾ ಹೋಗುತ್ತಿದೆ. ಮಾರ್ಷಲ್ ಅಯೂಬ್‌ಖಾನರು ಹೇಳಿದರು, ಅವರ ರಾಜ್ಯ ಪ್ರಜಾಪ್ರಭುತ್ವಕ್ಕೆ ಇನ್ನೂ ಯೋಗ್ಯವಾಗಿಲ್ಲ ಎಂದು. ಅದೇ ತರಹ ನೀವು ಕೂಡ ಇವತ್ತಿನ ದಿವಸ ಮಾಡುತ್ತಾ ಇದ್ದೀರಿ ಎಂದು ಆಳುವ ಪಕ್ಷಕ್ಕೆ ಹೇಳುತ್ತೇನೆ. ನಾನು ಮಾತ್ರ ಹೇಳುವುದಿಷ್ಟೆ. ನಮ್ಮ ಈ ಪ್ರಜಾಪ್ರಭುತ್ವ ಒಂದು ಶೈಶವಾಸ್ಥೆಯಲ್ಲಿದೆ. ತಾವು ಇದಕ್ಕೆ ಹಾಲನ್ನೆರೆದು ಪೋಷಿಸಬೇಕು. ಇದಕ್ಕೆ ಪ್ರತಿ ಪಕ್ಷದ ಶಕ್ತಿಯನ್ನು ಬೆಳಸಬೇಕು. ಇದು ತಮ್ಮ ಜವಾಬ್ದಾರಿ. ಯಾವ ತಾಯಿಯೂ ತನ್ನ ಸಣ್ಣ ಮಗುವಿನ ಕತ್ತನ್ನು ಹಿಸುಕಿ ಎಸೆದು ಬಿಡುವುದಿಲ್ಲ. ಆ ತಾಯಿಯೂ ಆ ಮಗುವಿಗೆ ಹಾಲು ಕೊಟ್ಟು ಸಾಕುವುದು ಆ ತಾಯಿಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ತಂದೆಯು ಇದು ಗಂಡು ಮಗು ಇದನ್ನು ಸಾಕಿದರೆ, ಬೆಳೆಸಿದರೆ ಮುಂದೆ ನನಗೆ ಎದುರು ನಿಂತುಕೊಳ್ಳುವುದು ಎಂದು ಹೇಳಿ, ಯಾವ ತಂದೆಯೂ ತನ್ನ ಮಗನನ್ನು ಕತ್ತು ಮುರಿಯುವುದಿಲ್ಲ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ನಮ್ಮ ಈ ವಿರೋಧ ಪಕ್ಷದ ಶಕ್ತಿಯನ್ನು ಕುಂಠಿತಗೊಳಿಸುವುದಕ್ಕೆ ಏನೇನು ಕೆಲಸಗಳು ಬೇಕೋ ಅದನ್ನು ಮಾಡುತ್ತಿದ್ದೀರಿ. ಇದೆಲ್ಲಾ ಮಾಡುವುದು ತೀರಾ ಅನ್ಯಾಯ ಮತ್ತು ತಪ್ಪು ಎಂದು ನಾನು ಹೇಳಬೇಕಾಗುತ್ತದೆ. ಆಳುವ ಪಕ್ಷದವರು ಇಂತಹ ಖರ್ಚುಗಳನ್ನು ಮಾಡಿ ಅನಾಚಾರಕ್ಕೆ ತುತ್ತಾಗುತ್ತಾರೆ ಎಂದು ಹೇಳುತ್ತೇನೆ. ನಾನಾದರೂ ಸರ್ಕಾರಕ್ಕೆ ಹೇಳುವುದಿಷ್ಟೆ, ಇಂತಹ ಖರ್ಚುಗಳನ್ನು ದಯವಿಟ್ಟು ಮಾಡಬೇಡಿ. ಇವತ್ತಿನ ಖರ್ಚುಗಳನ್ನು ನೋಡಿದರೆ, ಸರ್ಕಾರ ಕೇವಲ ಹೊಸ ಹೊಸ ಇಲಾಖೆಗಳಿಗೆ, ಅಧಿಕಾರಿಗಳಿಗೆ, ಮತ್ತು ಸ್ಟೆನೋಗ್ರಾಫರ್ಸ್ ಇತರ ಸಿಬ್ಬಂದಿ ಅದು, ಇದು, ಎಂದು ಹೇಳಿ ಜಾಸ್ತಿ ಖರ್ಚು ಮಾಡುತ್ತಿದ್ದಾರೆ. ಇದರಿಂದ ಏನಾಗಿದೆಯೆಂದರೆ, ನೀವು ಒಂದು 'ಪಾರಾಸೈಟ್ ಕ್ಲಾಸ್' ನ್ನು ಉಂಟು ಮಾಡುತ್ತೀರಿ. ಅವರಿಂದ ಏನೇನೊ ಸೌಲಭ್ಯಗಳನ್ನು ಸೌಕರ್ಯಗಳನ್ನು

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಒದಗಿಸಿಕೊಟ್ಟು, ಅವರು ಭೂಮಿಯನ್ನು ಬಿಟ್ಟು ಆಕಾಶದಲ್ಲಿ ಇರುವ ಅಪ್ಸರೆಯರಂತೆ ಕಾಣುವ ಹಾಗೆ ಮಾಡಿದ್ದೀರಿ. ಇದನ್ನೆಲ್ಲಾ ಮಾಡುವುದರಿಂದ ಸರ್ಕಾರ ಏನು ಸಾಧನೆ ಮಾಡಿದಂತಾಗುತ್ತದೆ? ತಾವು 5 ವರ್ಷಕ್ಕೊಮ್ಮೆ ಓಟನ್ನು ಕೇಳಲು ಹೋಗುವಾಗ ತಮ್ಮ ಮನಸ್ಸಿನಲ್ಲಿ ಏನು ಇರುತ್ತದೆ? ಅಂತಹ ಜನರಿಗೆ ನೀವು ಏನು ಅನುಕೂಲ ಮಾಡಿದ್ದೀರಿ? ನೀವೆಲ್ಲರೂ ಬರೀ ಈ ಐ.ಎ.ಎಸ್. ಮತ್ತು ಐ.ಸಿ.ಎಸ್. ಅಧಿಕಾರಿಗಳ ಕೈಗೊಂಬೆಗಳಾಗಿದ್ದೀರಲ್ಲದೆ, ನಿಮ್ಮ ಸ್ವಂತ ಬುದ್ಧಿಶಕ್ತಿಯನ್ನು ಉಪಯೋಗಿಸುತ್ತಿಲ್ಲ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಅವರ ಒತ್ತಡಕ್ಕೆ ಮಣಿದು ಒಂದು ಕಾರ್ಯವನ್ನು ಮಾಡುತ್ತಾರೆಯೇ ವಿನಹ ಜನತೆಯ ಹಿತದೃಷ್ಟಿಯಿಂದ, ಒಬ್ಬ ರೈತನ ಹಿತದೃಷ್ಟಿಯಿಂದ ಮಾಡುತ್ತಿಲ್ಲ. ನಮ್ಮ ಪ್ರಜಾಪ್ರಭುತ್ವ ಚಿರ ಕಾಲ ಬಾಳಬೇಕಾದರೆ ನಮ್ಮ ದೇಶದ ಜನತೆಯ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅವರಿಗೆ ಸೌಕರ್ಯವನ್ನು ಕಲ್ಪಿಸಬೇಕೇ ಹೊರತು ಇಂತಹ ಒಂದು ಪಾರಾಸೈಟ್ ಕ್ಲಾಸನ್ನು ಉಂಟುಮಾಡಬಾರದು. ಇನ್ನೂ ಉಳಿದ ಅನೇಕ ಮುಂದುವರಿದ ದೇಶಗಳನ್ನು ನೋಡುವುದಾದರೆ ಅವುಗಳು ಹೇಗೆ ಮುಂದುವರಿದುವು! ತಮ್ಮ ತಮ್ಮ ಕೈಗಾರಿಕೆಗಳನ್ನು ಬೆಳೆಸಿಕೊಂಡು, ತಮ್ಮ ಉತ್ಪಾದನೆಯನ್ನು ಬೆಳಸಿಕೊಂಡು ತಮ್ಮ ಒಂದು ಎಕನಾಮಿಕ್ ಸ್ಟೆಬಿಲಿಟಿಯನ್ನು ನಿರೂಪಿಸಿ, ಅರ್ಥ ಐಶ್ವರ್ಯವನ್ನು ಸಂಪಾದನೆ ಮಾಡಿಕೊಂಡಿದ್ದಾರೆ. ಆ ದಾರಿಯಲ್ಲಿ ನಾವು ಕೂಡಾ ಮುಂದುವರಿಯಬೇಕು. ಈಗ ಏನಾಗಿದೆ ಎಂದರೆ, ಬರೇ ಆಫೀಸುಗಳನ್ನು, ಬಂಗಲೆಗಳನ್ನು, ಮತ್ತು ಅದಕ್ಕೆ ಬೇಕಾದ ಹೊಸ ಹೊಸ ಮಾದರಿಯ ಫರ್ನಿಚರುಗಳನ್ನು ಮಾಡಿಕೊಳ್ಳುತ್ತಿದ್ದಾರೆ.

Sri SANJEEVANATH AIKALA (Surathkal).—Sir, I draw the kind attention of the Chair. We are discussing the matter relating to an expenditure of nearly 58 crores. There are no Cabinet Ministers present in the House.

Sri M. MALLIKARJUNASWAMY (Deputy Minister for Health and Labour).—I am noting down points, Sir.

Sri SANJEEVANATH AIKALA.—It may be so. But does it not amount to showing scant courtesy to the Chair? Already my friend Sri C. J. Muckannappa has made it very clear that even when discussions on money matters are going on in the House, no Cabinet Minister is in the House. Even the Chief Minister does not seem to care for the opinion of the Members of this House. Sir, I request you to send for at least one Cabinet Minister. Till Ministers come here, this matter should not proceed, Sir.

Sri M. MALLIKARJUNASWAMY.—Speaker's TEA is there........

Sri C. J. MUCKANNAPPA.—May I suggest to the Hon'ble Speaker that he may send for at least one Cabinet Minister—there are fifteen Ministers. There is no dearth for Ministers. May I request that the Chair may give a direction to the Treasury Bench that there should be at least one Cabinet Minister present in the House?

Sri SANJEEVANATH AIKALA.—It is not only discourtesy to the Members, but to the Chair and to the House itself. I therefore suggest that the Debate should not proceed until the Cabinet Ministers arrive.

Mr. DEPUTY SPEAKER.—I hope the Treasury Benches will make that much of arrangements to respect the views of the Members.

ನಾವು ಈ ಸಪ್ಲಿಮೆಂಟರಿ ಡಿಮಾಂಡನ್ನು ನೋಡುವುದಾದರೆ, ಬರೀ ಬಾಡಿಗೆಯನ್ನು ಲಕ್ಷಗಟ್ಟಲೆ ರೂಪಾಯಿ ಕೊಡುತ್ತಿದ್ದೀರಿ. ಬಾಡಿಗೆ ಕೊಡುವಾಗ ಯಾರ ಬಂಗಲೆಗಳನ್ನು ಗೊತ್ತುಮಾಡುತ್ತಿದ್ದೀರಿ ಎಂದರೆ, ಸಾಹುಕಾರರದು ಮತ್ತು ತಮಗೆ ಬೇಕಾದವರದು. ಅನೇಕ ಕಟ್ಟಡಗಳು ಸರ್ಕಾರದಲ್ಲಿ

ಕೆಲಸ ಮಾಡಿದಂಥ ಅಧಿಕಾರಿಗಳದು. ಈಗಿನ ಕಾಲದಲ್ಲಿ ಬರುವ ಸಂಬಳ ಹೊಟ್ಟೆ ಬಟ್ಟೆಗೆ ಸಾಲದೆ ಇರುವಾಗ ಲಕ್ಷಗಟ್ಟಲೆ ಖರ್ಚು ಮಾಡಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ದುಡ್ಡು ಎಲ್ಲಿಂದ ಬಂತು ? ಇದಕ್ಕೆ ಮೂಲ ಬಂಡವಾಳವೇನಾದರೂ ಇತ್ತೆ ? ಅಥವಾ ಅನ್ಯಾಯವಾಗಿ ಆರ್ಜಿಸಿದಂಥ ಹಣದಿಂದ ಕಟ್ಟಿಸಿರುವ ಕಟ್ಟಡವೇ ? ಇದನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡಬೇಕು. ಸರ್ಕಾರದವರು ಇಂಥದಕ್ಕೆ ಉತ್ತೇಜನ ಕೊಟ್ಟರೆ ಅವರೇ ಲಂಚರುಷುವತ್ತುಗಳಿಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುವುದಿಲ್ಲವೇ ? ಆದುದರಿಂದ ಈ ಕಟ್ಟಡಗಳಿಗೆ ದುಡ್ಡು ಎಲ್ಲಿಂದ ಬಂತು, ಅವರ ವ್ಯಕ್ತಿತ್ವ ಏನು ಇತ್ತು ಎನ್ನುವುದನ್ನೆಲ್ಲ ಕೂಲಂಕಷವಾಗಿ ಪರೀಕ್ಷೆ ಮಾಡಬೇಡವೇ ? ಸರ್ಕಾರದವರು ಈ ವಿಷಯ ಗಳನ್ನೆಲ್ಲ ಸರಿಯಾಗಿ ಪರಿಶೀಲನೆ ಮಾಡದೆ ಇದ್ದರೆ ರಾಷ್ಟ್ರದಲ್ಲಿ ದುಷ್ಟ ಶಕ್ತಿಗಳೂ, ದುಷ್ಟ ವ್ಯಕ್ತಿಗಳೂ ಬೆಳೆಯುವುದಕ್ಕೆ ಸರ್ಕಾರವೇ ಸಹಕಾರಿಯಾದಂತೆ ಆಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರ ದವರು ಲಕ್ಷ ಕೊಡಬೇಕು.

Sri C. J. MUCKANNAPPA.—Sir, the Chair's direction is flouted; Neither the Deputy Minister nor the Parliamentary Secretary has taken cognisance of it. The Chair has to exercise its powers as the supreme authority. When the Lok Sabha Speaker in a similar situation remarked the Ministers there came running. Here none of them is taking care. It is a discourtesy to this House. I think it is better the Chair adjourns the House.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸರ್ಕಾರದಲ್ಲಿ ಅಧಿಕಾರಿಗಳನನ್ನು ನೇಮಕ ಮಾಡು ವುದರಲ್ಲಿ ತಮಗೆ ಬೇಕಾದವರನ್ನು ನೇಮಕ ಮಾಡಿಕೊಂಡು ಸರ್ಕಾರವನ್ನು ನಡೆಸುವುದು ಬೇಡ. ತೆರಿಗೆದಾರರ ದೃಷ್ಟಿಯಿಂದ ಮತ್ತು ರೈತರ ದೃಷ್ಟಿಯಿಂದ ಸರ್ಕಾರವನ್ನು ನಡೆಸಬೇಕು. ಆಗ ಮಾತ್ರ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಸಾಧ್ಯ. ನಮ್ಮ ದೇಶದಲ್ಲಿ ಗುಪ್ತರ ಸಾಮ್ರಾಜ್ಯವಿತ್ತು. ಗೋಲ್ಡನ್ ಏಜ್ ಆಫ್ ಗುಪ್ತಾಸ್ ಎಂದು ಹೇಳುತ್ತಿದ್ದರು. ಈ ಕಾಂಗ್ರೆಸ್ ರಾಜ್ಯದಲ್ಲಿ ನಡೆಯುವ ಆಡಳಿತಕ್ಕೂ ಗುಪ್ತರ ಕಾಲದ ಆಡಳಿತಕ್ಕೂ ಹೋಲಿಸಿ ನೋಡಿದರೆ ನಮ್ಮ ಮುಂದಿನ ಚರಿತ್ರೆಕಾರರು ಎಷ್ಟು ಅವಹೇಳನ ಮಾಡುತ್ತಾರೆ ಎನ್ನುವುದನ್ನಾದರೂ ಸರ್ಕಾರ ನಡೆಸುವವರು ಮನಸ್ಸಿಗೆ ತಂದು ಕೊಳ್ಳಬೇಡವೇ ಎಂದು ಕೇಳಲು ಇಷ್ಟಪಡುತ್ತೇನೆ.

ಇನ್ನು ಕೆಲವು ಬಾಬುಗಳನ್ನು ನೋಡಿದರೆ ಅವುಗಳ ಮೇಲೆ ಚರ್ಚೆ ಮಾಡುವುದಕ್ಕೆ ಸಹ ಯೋಗ್ಯತೆ ಇಲ್ಲದೆ ಇರವಂಥವುಗಳಾಗಿವೆ. ಉದಾಹರಣೆಗೆ ರಿಜಿಸ್ಟ್ರೇಷನ್ ಇಲಾಖೆಯಲ್ಲಿ 'ಅಂಡರ್ ವಾಲ್ಯುಯೇಷನ್' ಚೆಕ್ ಮಾಡುವುದಕ್ಕೆ ಒಂದು ಸಿಬ್ಬಂದಿ ವರ್ಗವನ್ನು ಮಾಡಿದ್ದಾರೆ. ಅದನ್ನು ಸಾಮಾನ್ಯವಾಗಿ ಅನೇಕವೇಳೆ ಈ ಸಭೆಯಲ್ಲಿ ಹೇಳಿದ್ದೇವೆ. ಸಾಹುಕಾರರ ಕೈವಾಡದಿಂದ ರಿಜಿಸ್ಟರ್ ಮಾಡತಕ್ಕ ಕಾಲದಲ್ಲಿ ಸಾವಿರಾರು ರೂಪಾಯಿ ಬೆಲೆಬಾಳುವ ಆಸ್ತಿಯನ್ನು ನೂರಾರು ರೂಪಾಯಿ ಗಳಿಗೆ ಬರೆಸಿಕೊಂಡು, ಸರ್ಕಾರಕ್ಕೆ ದ್ರೋಹಮಾಡಿ ಅವರ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಮಾನ್ಯ ಸಿದ್ದಯ್ಯ ಕಾಶೀಮಠ ಅವರು ಹೇಳಿದಂತೆ 'ಮಾಲ್ ಪ್ರಾಕ್ಟಿಸ್' ಇರುವುದನ್ನು ಸರ್ಕಾರದ ಗಮನಕ್ಕೆ ತಂದರೂ ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ನಾವು ಹೇಳುವುದು ನ್ಯಾಯವಾಗಿದ್ದರೂ ಸರ್ಕಾರ ಅದಕ್ಕೆ ಗಮನವನ್ನು ಕೊಡುತ್ತಿಲ್ಲ. ಈಗಲಾದರೂ ಕೂಡ ದಯ ವಿಟ್ಟು ಇಂಥ 'ಮಾಲ್ ಪ್ರಾಕ್ಟೀಸ್' ಸಬ್ ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ನಡೆಯದಂತೆ ನೋಡಿಕೊಳ್ಳ ಬೇಕೆಂದು ಹೇಳುತ್ತೇನೆ.

Sri SANJEEVANATH AIKALA.—For replying to the debate the hon'ble Minister will have to depend upon the proceedings reported and he has no time. He has to reply immediately.

(*The Hon'ble Finanee Minister entered the House*).

Mr. DEPUTY SPEAKER—Arrangements are made. The Finance Minister is already here.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ವಾಹನಗಳನ್ನು ಕೊಳ್ಳುವುದರಲ್ಲಿ ನಮ್ಮ ರಾಜ್ಯದಲ್ಲಿ ವಿಶೇಷ ದುಡ್ಡು ಪೋಲಾಗುತ್ತಿದೆ. ಯಾವ ಇಲಾಖೆಯನ್ನು ತೆಗೆದುಕೊಂಡರೂ ಅಲ್ಲಿ ಒಂದು ಜೀಪ್ ಒಂದು ವ್ಯಾನ್, ಅದಕ್ಕೆ ಡ್ರೈವರು, ಅದಕ್ಕೆ ಸ್ಪೇರ್‌ಪಾರ್ಟ್‌ಗಳು ಮತ್ತು ಇತರ ರೂಪದಲ್ಲಿ ಹೇರಳ ವಾದ ಹಣ ಖರ್ಚಾಗುತ್ತಿದೆ. 1956 ನೆ ಇಸವಿಯಿಂದೀಚೆಗೆ ಕರ್ಣಾಟಕ ಸಾಮ್ರಾಜ್ಯವಾದ ಮೇಲೆ

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಎಷ್ಟು ಜೀಪ್, ಎಷ್ಟು ವ್ಯಾನ್, ಮತ್ತು ಎಷ್ಟು ವಾಹನಗಳನ್ನು ತೆಗೆದುಕೊಂಡಿದ್ದಾರೆ, ಅವುಗಳ ರಿಪೇರಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಡ್ರೈವರುಗಳ ಸಂಬಳ, ಕಂಟಿನ್‌ಜೆನ್ಸಿ ಚಾರ್ಜಸ್, ಆಯಿಲ್, ಫ್ಯೂಯಲ್, ಇವುಗಳಿಗೆಲ್ಲ ಎಷ್ಟು ಖರ್ಚಾಗಿದೆ ಎನ್ನುವುದನ್ನು ನೋಡಿದರೆ ನಮ್ಮ ಎದೆ ಒಡೆದು ಹೋಗುತ್ತದೆ. ಕೆಲಸವಿಲ್ಲದ ಅಧಿಕಾರಿಗಳು ಜೀಪ್ ಅಥವಾ ಇತರ ವಾಹನಗಳನ್ನು ತೆಗೆದು ಕೊಂಡು ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳತಕ್ಕ ನಿದರ್ಶನ ಗಳು ಬಹಳ ಇವೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ವಾಹನಗಳ ಮೇಲೆ ಹೆಚ್ಚು ಖರ್ಚುಮಾಡಿ ನಮ್ಮ ದೇಶದ ಆದಾಯವನ್ನು ಹಾಳು ಮಾಡಬಾರದು ಎಂದು ಹೇಳಲು ಇಷ್ಟಪಡುತ್ತೇನೆ.

ಅಡ್ವರ್ಟೈಸ್‌ಮೆಂಟಿನ ಮೇಲೆ ಲಕ್ಷಗಟ್ಟಲೆ ಹಣವನ್ನು ಖರ್ಚುಮಾಡುತ್ತಿದ್ದಾರೆ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಒಂದು ನೀತಿ ನಿಯಮವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ಕೇರಳ ರಾಜ್ಯದಲ್ಲಿ ಒಂದು ಕುದುರೆ ಯನ್ನು ಹರಾಜುಮಾಡಬೇಕಾದ ಸಂದರ್ಭದಲ್ಲಿ ಆ ಬಗ್ಗೆ ಅಡ್ವರ್ಟೈಸ್‌ಮೆಂಟ್ ಚಾರ್ಜಸ್ 500 ರೂಪಾಯಿಗಳನ್ನು ಖರ್ಚ ಮಾಡಿದರಂತೆ. ಕುದುರೆಯನ್ನು ಹರಾಜುಮಾಡಿದಾಗ ಕೇವಲ 15 ರೂಪಾಯಿ ಬಂತಂತೆ. ಈ ರೀತಿಯಾಗಿ ಆಗಬಾರದು. ನಮ್ಮ ದೇಶದಲ್ಲಿ ಲಕ್ಷಗಟ್ಟಲೆ ಈ ರೀತಿ ದುರ್ವಿನಿಯೋಗವಾಗುತ್ತಿದೆ ಎಂದು ತಿಳಿಯುತ್ತೇನೆ. ಅಡ್ವರ್ಟೈಸ್‌ಮೆಂಟ್‌ಗಾಗಿ ಖರ್ಚುಮಾಡುವ ಹಣ ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

Sri M. MALLIKARJUNASWAMY.—Advertisement is the lifeline of modern trade and commerce.

Mr. DEPUTY SPEAKER.—Please do not bring in other Governments here.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀ[illegible]ವರಿ ಬಾಬುಗಳಮೇಲೆ ಕೋಟಿಗಟ್ಟಲೆ ಹಣವನು ಖರ್ಚು ಮಾಡುತ್ತಿದ್ದಾರೆ. ಆದರೆ ಇದರಲ್ಲಿ[illegible] ಬಹಳ ಅನ್ಯಾಯಗಳಾಗುತ್ತಿವೆ. ಹಿಂದೆ 1962-63 ನೆ ಇಸವಿಗೆ ಮೊದಲು 20 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಎಲ್ಲ ಕೆಲಸಗಳನ್ನೂ ಸೇರಿಸುತ್ತಿದ್ದರು. ಈಚೆಗೆ ಒಂದು ಲಕ್ಷ ರೂಪಾಯಿ ಒಳಗೆ ಇರುವ ಕೆಲಸಗಳನ್ನು ಸೇರಿಸದೆ ಬಿಡುತ್ತಿದ್ದಾರೆ. ಇದಕ್ಕೆ ಕಾರಣವೇನು ಎಂದರೆ ನೆಪ್ಪೋಟಿಸಂ, ಫೇವರೆಟಿಸಂ ಮತ್ತು ಡಿಸ್ಕ್ರಿಮಿ ನೇಷನ್. ಒಟ್ಟಾಗಿ ಲಕ್ಷಗಟ್ಟಲೆ ಹಣವನ್ನು ಚೀಫ್ ಎಂಜಿನಿಯರಿಂಗ್, ಅಥವಾ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಕೊಡುವುದು ಅಥವಾ ಸರ್ಕಾರದವರೇ ಅದನ್ನು ಇಟ್ಟುಕೊಳ್ಳುವುದರಿಂದ ತಮಗೆ ಬೇಕಾದವರಿಗೆ ಕೆಲಸ ಕೊಟ್ಟು ಬೇಡದವರಿಗೆ ಕೆಲಸ ಕೊಡದೆ ಇರುತ್ತಾರೆ. ಈ ರೀತಿಯಾಗಿ ಮಾಡುವುದು ನ್ಯಾಯವೇ, ಇದು ಪ್ರಜಾಪ್ರಭುತ್ವವೇ ಎಂದು ಕೇಳುತ್ತೇನೆ. 20 ಸಾವಿರಕ್ಕೆ ಮೇಲ್ಪಟ್ಟ ಎಲ್ಲವನ್ನೂ ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ನೀರಾವರಿ ವಿಷಯದಲ್ಲಿ ಮಾನ್ಯ ಶಿವಪ್ಪನವರು ಹೇಳಿದಂತೆ ಹಾಸನ ಜಿಲ್ಲೆಯಲ್ಲಿ ಯಾವ ಹೊಸ ಕೆಲಸವನ್ನೂ ತೆಗೆದುಕೊಂಡಿಲ್ಲ. ಅಲ್ಲಿ ಸಾವಿರಾರು ಕೆರೆಗಳಿದ್ದರೂ ಯಾವ ಕೆಲಸವನ್ನೂ ತೆಗೆದು ಕೊಳ್ಳದೆ ಹೋದರೆ ಅಲ್ಲಿರುವ ಜನರು ಈಗಿನ ಕಷ್ಟಪರಿಸ್ಥಿತಿಯಲ್ಲಿ ಹೇಗೆ ಜೀವನ ಮಾಡಬೇಕು ? ಹೂಳು ತೆಗೆಯುವುದಕ್ಕೆ, ಮಣ್ಣು ತೆಗೆಯುವುದಕ್ಕೆ ಅವಕಾಶವಿದ್ದು ಅದರಿಂದ ಮುಂದಿನವರ್ಷ ಬೆಳೆ ಬರುವುದಕ್ಕೆ ಅವಕಾಶವಿರುತ್ತದೆ. ಆದರೂಕೂಡ ಸರ್ಕಾರದವರು ಉದಾಸೀನ ಮನೋಭಾವದಿಂದ ಕಣ್ಣು ಮುಚ್ಚಿಕೊಂಡಿದ್ದಾರೆ. ನಮ್ಮ ಅಕ್ಕಪಕ್ಕದ ಕ್ಷೇತ್ರಗಳಲ್ಲಿ ಬೇಕಾದಷ್ಟು ಕೆಲಸವಾಗಿದೆ, ಅದೇ ನಮ್ಮ ಕ್ಷೇತ್ರಗಳಲ್ಲಿ ಏನೂ ಕೆಲಸವಾಗಿಲ್ಲ. ಇಂಥ ಡಿಸ್ಕ್ರಿಮಿನೇಷನ್ ಮನೋಭಾವ ಹೇಗೆ ಬರು ತ್ತದೆ ಎಂದು ಕೇಳುತ್ತೇನೆ. ವಿರೋಧ ಪಕ್ಷದ ಸದಸ್ಯನಾಗಿದ್ದ ಮಾತ್ರಕ್ಕೆ ಅವನ ಕ್ಷೇತ್ರದಲ್ಲಿ ಕೆಲಸ ವನ್ನು ತೆಗೆದುಕೊಳ್ಳದೆ ಹೋದರೆ ಪ್ರಜಾಪ್ರಭುತ್ವವನ್ನು ಬೆಳೆಸುವುದಾದರೂ ಹೇಗೆ ಎನ್ನುವುದನ್ನು ಹೇಳಿದರೆ ಸಾಕು. ಎಲ್ಲ ಕೆಲಸಗಳನ್ನೂ ಮಾಡುವುದಾದರೆ ನಾವೂ ನಿಮ್ಮ ಕಡೆಗೆ ಬರುತ್ತೇವೆ. ಆದರೆ ನಿಮ್ಮಲ್ಲಿ ಅಂತರ್‌ಜಗಳ ಬರುವುದಿಲ್ಲ, ಹಾಗೆ ಆಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಭರವಸೆಯನ್ನು ಹೇಳಿ ವಿರೋಧಪಕ್ಷವನ್ನು ಬೆಳೆಸುವುದರಿಂದ ದೇಶದಲ್ಲಿ ಆಡಳಿತ ಸುವ್ಯವಸ್ಥಿತವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಬಟ್ಟಿನಲ್ಲಿ ಸಪ್ಲಿಮೆಂಟರಿ ಬೇಡಿಕೆಗಳನ್ನು ತರುವ ಪದ್ಧತಿಯನ್ನು ಸಾಧ್ಯವಾದಮಟ್ಟಿಗೂ ನಿಲ್ಲಿಸಬೇಕು. ಸರ್ಕಾರಕ್ಕೆ ಬಜೆಟ್ಟಿನಲ್ಲಿರುವ ಹಣ ಸಾಲದೆ ಹೋಗುವಂಥ ಅನಿವಾರ್ಯ ಸಂದರ್ಭಗಳಲ್ಲಿ

ಮಾತ್ರ ಈ ಬೇಡಿಕೆಗಳನ್ನು ತರಬೇಕು. ಸಪ್ಲಿಮೆಂಟರಿ ಬೇಡಿಕೆಗಳನ್ನು ಹೆಚ್ಚಾಗಿ ತರುವುದರಿಂದ ಹಣಕಾಸಿನಮೇಲೆ ಹತೋಟಿ ಇಲ್ಲ ಎನ್ನುವುದು ಗೊತ್ತಾಗುತ್ತದೆ ಮತ್ತು ಮನಬಂದಂತೆ, ಸ್ವೇಚ್ಛೆಯಾಗಿ ಹಣ ಖರ್ಚು ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ಅದಕಾರಣ ಈ ತರಹ ಪದ್ಧತಿ ಮುಂದುವರಿಯಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಭಾಧ್ಯಕ್ಷರೇ, ಇದು ಸಪ್ಲಿಮೆಂಟರಿ ಬೇಡಿಕೆಗಳ ಮೂರನೆಯ ಕಂತು. ನಾನು ಸಪ್ಲಿಮೆಂಟರಿ ಡಿಮ್ಯಾಂಡ್ ಈ ಸಭೆಯಲ್ಲಿ ಮೊದಲವೆ ಮತ್ತು ಎರಡನೆ ಬಾರಿ ಬಂದಾಗ ಆಡಿಟ್ ರಿಪೋರ್ಟ್ ಎಂದೇನು ಹೇಳುತ್ತಾರೆ ಅದರ ಬಗ್ಗೆ ಸರ್ಕಾರದ ಗಮನಕ್ಕೆ ಕೆಲವು ವಿಚಾರಗಳನ್ನು ತಂದೆ. ಇವರು ಈ ವರ್ಷದ ಕೊನೆಯೊಳಗೆ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಂಡು ಕೆಲವು ಇಲಾಖೆಗಳು ಖರ್ಚು ಮಾಡುವುದಕ್ಕೆ ಶಕ್ತಿ ಇಲ್ಲದೇ 31ನೇ ತಾರೀಖು ಮಧ್ಯರಾತ್ರಿ ಸರೆಂಡರ್ ಮಾಡುವುದಕ್ಕೆ ಹೊರಟಿದ್ದಾರೆ. ಬೇರೆ ಇಲಾಖೆಗಳ ಕೆಲಸಗಳನ್ನು ಕುಂಠಿತ ಮಾಡಿದ್ದಾರೆ. ಹೀಗಿರುವಾಗ ಈ ರೀತಿ ಹಣಕಾಸನ್ನು ಕೇಳುವುದು. ಈ ಸಪ್ಲಿಮೆಂಟರಿ ಗ್ರ್ಯಾಂಟನ್ನು ಪಾಸ್‌ಮಾಡಿ ಎಂದು ಕೇಳುವುದು ಖಂಡಿತವಾಗಿ ಸರಿಯಾದುದಲ್ಲ. ರಾಜ್ಯದ ಹಣಕಾಸಿನ ಬಗ್ಗೆ ಯಾವುದೇ ತರಹ ಹತೋಟಿಯನ್ನೂ ಇವರು ಇಟ್ಟಿಲ್ಲ. ಈಗಿನ ಹಣಕಾಸಿನ ಸಚಿವರು ಈ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆ ಮಾಡುತ್ತೇನೆ, ಖರ್ಚು ಅಧಿಕವಾಗಿದ್ದರೆ ಆಗ ಮಾತ್ರ ಈ ರೀತಿ ಸಪ್ಲಿಮೆಂಟರಿ ಡಿಮ್ಯಾಂಡನ್ನು ಕೇಳುತ್ತೇನೆಂದು ಹೇಳಿದರು. 1965-66ನೇ ಇಸವಿ ಕೊನೆಗೊಳ್ಳಲು ಇನ್ನೂ 15 ದಿವಸಗಳಿವೆ. ಅಷ್ಟರೊಳಗೆ ಇವರು ಕೇಳತಕ್ಕಂಥ ಹಣ 31ನೇ ತಾರೀಖಿನ ರಾತ್ರಿಯೊಳಗೆ ಪೂರ್ತಿಯಾಗಿ ವೆಚ್ಚವಾಗಬೇಕು, ಇಲ್ಲದಿದ್ದರೆ ಆ ಹಣವನ್ನೆಲ್ಲಾ ಸರೆಂಡರ್ ಮಾಡಬೇಕು. ಯಾವ್ಯಾವ ಕೆಲಸ ಎಷ್ಟೆಷ್ಟರ ಮಟ್ಟಿಗೆ ಪ್ರೋಗ್ರೆಸ್ ಆಗಿದೆಯೆಂಬುದನ್ನು ತಿಳಿಸಬೇಕಾಗಿತ್ತು. ಇನ್ನು ಎಕ್ಸ್‌ಪ್ಲನೇಟರಿ ನೋಟಿನಲ್ಲಿ new service ಎಂದು ಹೇಳುತ್ತಾರೆ. ಇದನ್ನು ಎಷ್ಟರಮಟ್ಟಿಗೆ ಇವರು ಸಾಧಿಸಿದ್ದಾರೆಂಬುದನ್ನು ನಾವು ನೋಡಬೇಕು. ಫಿಸಿಕಲ್ ಟಾರ್ಜೆಟ್ ಏನೂ ಸಾಧನೆ ಮಾಡಲಿಕ್ಕಾಗಲಿಲ್ಲ. ಅದರ ಬಗ್ಯೆ ಎಕ್ಸ್‌ಪ್ಲನೇಟರಿ ನೋಟಿನಲ್ಲಿ ಏನೂ ಇಲ್ಲ. ನಾನು ಸರ್ಕಾರದವರಿಗೆ ಈಗ ಒಂದು ಮಾತನ್ನು ಹೇಳುತ್ತೇನೆ. ಇವರು ಸಮಯಕ್ಕೆ ಸಮೀಪದಲ್ಲಿ ಸರಿಯಾಗಿ ಈ ರೀತಿ ಇಂತಹ ಸಪ್ಲಿಮೆಂಟರಿ ಗ್ರ್ಯಾಂಟನ್ನು ಇಲ್ಲಿ ತಂದು ಕೇವಲ ಅರ್ಧ ಅಥವಾ ಮುಕ್ಕಾಲು ಘಂಟೆಯಲ್ಲಿ ಇದನ್ನು ಒಪ್ಪಿಬಿಡಬಹುದು ಎಂದು ಹೇಳಿದರು.

ಇಲ್ಲಿ ಎಲ್ಲಾ ಟೋಕನ್ ಗ್ರ್ಯಾಂಟ್ ಇಟ್ಟಿದ್ದಾರೆ. ಇವರ ಖರ್ಚು ವೆಚ್ಚ ಎಷ್ಟಕ್ಕೆ ಹೋಗುತ್ತದೆಂದರೆ ಸುಮಾರು 100 ಕೋಟಿ ರೂಪಾಯಿಗಳ ಹತ್ತಿರತ್ತಿರ ಹೋಗುತ್ತದೆ. ಇದರ ಪ್ರಕಾರ 58 ಕೋಟಿ ರೂಪಾಯಿಗಳಾಗುತ್ತದೆ. ಈಗಿರತಕ್ಕ ಬಡ್ಜೆಟ್ ಬೇರೆ 156 ಕೋಟಿ ರೂಪಾಯಿಗಳು. ಅಂದ ಮೇಲೆ ಈ 100 ಕೋಟಿ ರೂಪಾಯಿಗಳನ್ನು ರಿಸರ್ವ್ ಬ್ಯಾಂಕಿಗೆ ಕೊಡುವ ಸಾಲ, ಕೇಂದ್ರ ಸರ್ಕಾರಕ್ಕೆ ಕೊಡುವ ಬಡ್ಡಿ, ಹೊಸ ಸರ್ವಿಸ್, ಇವರು ಕೊಡತಕ್ಕ ಮನೆಗಳು, ಸ್ಪಿಲ್ಲೋವರ್‌ವರ್ಕ್ಸ್ ಇವುಗಳಿಗೆ ಒದಗಿಸಿರುವ ವಿಧಾನವನ್ನು ನೋಡಿದರೆ ಅದನ್ನು ಲೆಕ್ಕ ಹಾಕಿದರೆ ನಿಜವಾಗಿ ನಮ್ಮ ಈ ತರುಣ ಹಣಕಾಸಿನ ಸಚಿವರು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೆಟ್ಟಗೆ ಮಾಡುತ್ತಾರೆಯೇ ಎಂಬ ಶಂಕೆ ನನಗುಂಟಾಗಿದೆ. ಇವರು ಮೂರನೇ ಸಾರಿ ಜನ್ಮ ಎತ್ತಿದರೂ ಈ ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೆಟ್ಟಗೆ ಮಾಡುವುದಕ್ಕಾಗುವುದಿಲ್ಲ. ಇವರು ಎಲ್ಲಾ ನಾನೇ ಮಾಡುತ್ತೇನೆಂದು ಹೇಳತಕ್ಕ ಒಂದು ಹುಂಬತನ ಬಿಟ್ಟರೆ ಸಾಕು. ಇಲ್ಲದಿದ್ದರೆ ಇವರು ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ ಎಂಬುದಾಗಿ ನಾನು ಬರೆದು ಕೊಡುತ್ತೇನೆ. ಮುಂದೆ ಬರತಕ್ಕ ಆದಾಯದಲ್ಲಿ ಸುಮಾರು 57-58 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀವೆಂದು ಹೇಳುತ್ತಾರೆ. ಇವರ ಕೈಲಿ 156 ಕೋಟಿರೂಪಾಯಿಗಳ ಬಡ್ಜೆಟ್ಟನ್ನು ಕೊಟ್ಟರೆ, 1966ನೇ ಮಾರ್ಚ್ 31ಕ್ಕೆ ಆ ಕ್ಚ್ಯುಯಲ್ಲಾಗಿ ಎಷ್ಟು ಖರ್ಚಾಗುತ್ತದೆ ಎಂದು ಹೇಳುವುದಕ್ಕೆ ಇವರ ಕೈಲಿ ಆಗಲಿಲ್ಲ.

Mr. DEPUTY SPEAKER.—"Humbatana" is not a desirable word. "Humbam" is different—Humbatana is different.

Sri C. J. MUCKANNAPPA.—I do not want to use that word. ಸ್ವಲ್ಪ ಅಹಂಕಾರ, ಸ್ವಲ್ಪ ಕೆಚ್ಚು ಎನ್ನತಕ್ಕ ಅರ್ಥ ಬರತಕ್ಕದ್ದಾಗಿದೆ, ಅಷ್ಟೆ. ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು. ಈಗ ದೆಹಲಿಯಲ್ಲ ಒಂದು ಮನೆಯನ್ನು ಕಟ್ಟುತ್ತಿದ್ದಾರೆ. ಅದೇಕೆ? ಅಲ್ಲಿ ಮನೆ ಇಲ್ಲದಿದ್ದರೆ ನಮಗೆ ಸಾಧ್ಯವಾಗುತ್ತಿರಲಿಲ್ಲವೇ? ಈಗ್ಗೆ 18 ವರ್ಷಗಳಿಂದಲೂ ಮೈಸೂರಿನವರು ಅಲ್ಲಿಗೆ ಹೋಗಿ ಬರುತ್ತಿರಲಿಲ್ಲವೇ? ಈಗಲೇ ಅದಕ್ಕಾಗಿ ಲಕ್ಷಾಂತರ ರೂಪಾಯಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಳನ್ನು ಖರ್ಚು ಮಾಡತಕ್ಕ ಪ್ರಮೇಯವೇನಿತ್ತು? ಅಲ್ಲಿಗೆ ಹೋಗತಕ್ಕಂಥಾವರು ಮಜಾ ಮಾಡು ವುದಕ್ಕೆ ಅಲ್ಲಿ ಮನೆ ಬೇಕೇ? ಅಲ್ಲಿ ಅದಕ್ಕಾಗಿ ಖರ್ಚು ಮಾಡಿರತಕ್ಕ ಹಣವನ್ನು 6-7 ಕೆರೆಗಳನ್ನು ಕಟ್ಟಿಸುವುದೋ, ಪಿಕಪ್, ಚಾನಲ್‌ಗಳು, ಫೀಡರ್ ಚಾನಲ್‌ಗಳನ್ನು ಕಟ್ಟಿಸುವುದಕ್ಕೆ ಉಪಯೋಗಿಸಿ ದ್ದರೆ ಎಷ್ಟು ಆಹಾರೋತ್ಪನ್ನಕ್ಕೆ ಅನುಕೂಲವಾಗುತ್ತಿತ್ತು ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಅಲ್ಲಿನ ರಾಜ ಮಹಾರಾಜರುಗಳು ಪಂಜಾಬ್, ಒರಿಸ್ಸಾ, ಬಿಹಾರ ಪ್ರಾಂತ್ಯಗಳಿಗೆ ಸಂಬಂಧಪಟ್ಟಂತೆ ಮನೆಗಳನ್ನು ಕಟ್ಟಿಸಿದ್ದಾರೆಂದು ಇವರೂ ಸಹ ಮೈಸೂರಿನವರದು ಒಂದು ಮನೆ ಅಲ್ಲಿರಬೇಕೆಂದು ಕಟ್ಟಿಸಲಿಕ್ಕೆ ಹೊರಟಿರುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಇವರು ತಿಂಗಳಿಗೆ 15-20 ಜನ 20 ಸಾರಿ ದೆಹಲಿಗೆ ಹೋಗಿ ಅಲ್ಲಿದ್ದುಕೊಂಡು ಬರುವುದಕ್ಕಾಗಿ ಇಷ್ಟು ಹಣ ಖರ್ಚು ಮಾಡಬೇಕಾಗಿತ್ತೇ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸಿನ ಶಾಖೆಯ ಸಚಿವರು).—ನೀವೂ ಅಲ್ಲಿಗೆ ಹೋದರೆ ಅಲ್ಲಿಯೇ ಇಳಿದುಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅಲ್ಲಿಗೆ ಹೋದರೆ ಎಲ್ಲಿ ಇಳಿದುಕೊಂಡಿರಬೇಕೆಂಬುದು ಬೇರೆ ವಿಷಯ. ಈ ವರ್ಷ ನಮ್ಮ ರಾಜ್ಯ ಹಣಕಾಸಿನ ಸ್ಥಿತಿಗತಿಗಳು ಏನೂ ಚೆನ್ನಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಒಂದುವೇಳೆ ಆ ರೀತಿ ಮಾಡದೇ ಇದ್ದರೆ ಮೈಸೂರಿನವರು ಅಲ್ಲಿ ಏನೂ ಮಾಡಲಿಲ್ಲವೆಂದು ಆಕ್ಷೇಪಣೆಯನ್ನು ಈ ಮಾನ್ಯ ಸದಸ್ಯರೇ ಮಾಡುತ್ತಾರೆ. ಬಾಕಿಯವರು ಮಾಡಿದ್ದಾರೆ, ಇವರು ಮಾತ್ರ ಮಾಡಲಿಲ್ಲವೆಂದು ಹೇಳುವವರೂ ಇವರೇ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರಿನವರು ಅಲ್ಲಿ ಅಂಥಾದನ್ನು ಮಾಡುವುದಕ್ಕೆ ಹಣಕಾಸಿನ ಸ್ಥಿತಿಗತಿಗಳು ಈ ವರ್ಷ ಅಷ್ಟು ಚೆನ್ನಾಗಿಲ್ಲ. ಇನ್ನೂ ಸ್ವಲ್ಪಕಾಲ ತಡೆಯಬೇಕಾಗಿತ್ತು. ಆದರೆ ದೆಹಲಿಯಲ್ಲಿ ಇವರು ಹೋಗಿ ಇಳಿದುಕೊಳ್ಳಲು ತಕ್ಕ ಸೌಕರ್ಯವನ್ನು ಮಾಡಿಕೊಳ್ಳಬೇಡಿ, ಈ ರೀತಿ ಮನೆ ಮುಂದೆ ಕಟ್ಟಬೇಡಿ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ದೆಹಲಿಯಲ್ಲಿ ಮನೆ ಕಟ್ಟುತ್ತಾ ಇರುವುದಕ್ಕೆ ದುಡ್ಡು ಇದೆಯೆಂದು ಹೇಳುತ್ತಾರೆ. ಆದರೆ ಫೀಡರ್ ಚಾನಲ್, ಲಿಫ್ಟ್ ಇರ್ರಿಗೇಷನ್ ಇತ್ಯಾದಿಗಳಿಗೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ಆ ರೀತಿ ಖರ್ಚು ಮಾಡಿ ರತಕ್ಕ ಹಣವನ್ನು ಯಾವುದಾದರೂ ಮೈನರ್ ಇರ್ರಿಗೇಷನ್ ವರ್ಕ್‌ಗಾದರೂ ಡೈವರ್ಟ್ ಮಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಖರ್ಚಾಗಿ ಹೋಗಿದೆಯಲ್ಲಾ!

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏಕೆ ಖರ್ಚು ಮಾಡಿದಿರಿ? ಹೀಗೆ ಕೋಟ್ಯಾಂತರ ರೂಪಾಯಿ ಗಳನ್ನು ಖರ್ಚು ಮಾಡುವಾಗ ಈ ಸಭೆಯನ್ನು ಗಣನೆಗೆ ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಾಗಲಿಲ್ಲ. ಈ ರೀತಿ ಹಣವನ್ನು ಖರ್ಚುಮಾಡಿ ದೊಡ್ಡದಾಗಿ ಅಂಕಿ ಅಂಶಗಳನ್ನು ತೋರಿಸಿ ಇವರು ಹಾಗೂ ಸರ್ಕಾರದ ಸೀಲನ್ನು ಹಾಕಿಸಿಕೊಂಡು ಮಾರ್ಚ್ 28ನೇ ತಾರೀಖಿನ ದಿವಸ ಆ ಬಗ್ಗೆ ಒಂದು ಅಪ್ರೋಪ್ರಿಯೇಷನ್ ಮಸೊದೆಯನ್ನು ತರುವುದು ನ್ಯಾಯವೇ? ಹಣಕಾಸಿನ ಮೇಲೆ ಇವರಿಗೆ ಹತೋಟಿ ಇಲ್ಲದಿದ್ದರೆ ನಿಜವಾಗಿ ಪುರೋಭಿವೃದ್ಧಿಯಾಗುತ್ತದೆಯೇ? ಇದು ನ್ಯಾಯ್ಯವಲ್ಲ.

ಇನ್ನು ಈ ವರ್ಷದ ಬಡ್ಜೆಟ್ಟಿನಲ್ಲಿಯೂ ಎಂದಿನಂತೆ ಒಂದು ಹೊಸ ಸರ್ವಿಸ್ ಎಂಬುದಾಗಿ ಕ್ರಿಯೇಟ್ ಮಾಡಿದ್ದಾರೆ. ಡಿಮ್ಯಾಂಡ್ ನಂಬರ್ ಎಂಟರಲ್ಲಿ ಏತಕ್ಕೆ ಇಷ್ಟು ಅಧಿಕಾರಿಗಳು ಬೇಕು. ಅವರು ಏನು ಮಾಡುವುದಕ್ಕೆ ಬೇಕು, ಸೆಕ್ರೆಟೇರಿಯಟ್ಟಿನಲ್ಲಿ ಸೆಕ್ರೆಟರಿಗಳಿಲ್ಲವೇ, ಅವರು ಏನು ಕೆಲಸಗಳನ್ನು ಮಾಡುತ್ತಿದ್ದಾರೆ? ಇವರಿಗೆ ಮುಂಜಾಗೃತಿ ಕೊಡುವುದಕ್ಕಾಗಲಿಲ್ಲವೇ, ಬರೀ ರಾಜಕೀಯ ಮಾಡುವುದಕ್ಕೆ ಇದ್ದಾರೆಯೇ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಡಿಮ್ಯಾಂಡ್ ನಂಬರ್ ಎಂಟರಲ್ಲಿ, Creation of five posts, creation of 14 posts, abolition of five temporary posts of Inspectors of Registration-creation of five posts of Inspectors of Stamps. The extra expenditure on account of the reorganisation exceeds Rs. 30,000 per annum and therefore, constitutes "New Service" ಎಂದು ಹೇಳಿದೆ. ಈ ಪದದ ವ್ಯಾಖ್ಯಾನ ಮಾಡಿದರೆ "ಹೊಸಸೇವೆ" ಎಂದು ಹೇಳಬಹುದು. ಇದಕ್ಕೆ ಇವರ ಲಿಮಿಟೇಷನ್ ಎಂಬುದೆ ಇಲ್ಲ. ಇವರಿಗೆ ಯಾರು ಕೌನ್ಸಿಲ್ ಆಫ್ ಅಡ್ವೈಜರ್ಸ್ ಎಂಬುದೇ ಗೊತ್ತಿಲ್ಲ. ಅವರು ಎಲ್ಲೋ ಸರ್ಕಾರದ ಪರ್ಮನೆಂಟ್ ಎಗ್ಜಿಕ್ಯೂಟಿವ್ ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಬುದ್ಧಿವಾದವನ್ನು ಹೇಳುತ್ತಾ ಇಲ್ಲವೆಂದು ನನಗೆ ಕಾಣುತ್ತದೆ. ಕಾಲಕಾಲಕ್ಕೆ ಯಾವ್ಯಾವ ಕೆಲಸ ಮಾಡಬೇಕು, ಇವರು ಎಲ್ಲಿ

ಎಡವಿದ್ದಾರೆ, ಎಲ್ಲಿ ಮುಗ್ಗರಿಸಿದ್ದಾರೆಂಬುದನ್ನು ಅರಿತುಕೊಂಡು ಎಷ್ಟು ಖರ್ಚು ಮಾಡಬೇಕು, ಎಷ್ಟು ಹುದ್ದೆಗಳನ್ನು ಹೊಸದಾಗಿ ಕ್ರಿಯೇಟ್ ಮಾಡಬೇಕು, ಯಾವ್ಯಾವ ಹುದ್ದೆಗಳನ್ನು ತೆಗೆದು ಹಾಕಬೇಕು ಎಂಬ ಬಗ್ಗೆ ಇವರಿಗೆ ಯಾವ ಒಂದು ಮುಂದಾಲೋಚನೆಯೇ ಇಲ್ಲವೆಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ.

ಇದೇ ಡಿಮ್ಯಾಂಡಿನಲ್ಲಿ ಏನೋ ಹೆಚ್ಚಿಗೆ ಹಣವನ್ನು ಖರ್ಚು ಮಾಡಬೇಕೆಂದು ಕೇಳಿದ್ದಾರೆ. ಇದರಲ್ಲೂ ಇಂದ್ರಜಾಲ, ಮಹೇಂದ್ರಜಾಲ ನಡೆದಿದೆ. 100 ರೂಪಾಯಿಗಳನ್ನು ಮಾತ್ರ ಕೇಳಿದ್ದಾರೆ. ಅದರ ಕೆಳಗೆ ನೋಡಿದರೆ ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಹೇಳಿದ್ದಾರೆ. ಇದು ನ್ಯಾಯವಲ್ಲ ಮತ್ತು ಶೋಭಾಯಮಾನವಾಗಿಲ್ಲ. ಶ್ರೀಮಾನ್ ಕೇಶವಮೂರ್ತಿಗಳು ಇತ್ತೀಚೆಗೆ ಕಾಂಗ್ರೆಸ್ಸಿಗೆ ಸೇರಿದರೆ ಒಳ್ಳೆಯದಾಗುತ್ತದೆಂದು ಒಂದು ಹೆಜ್ಜೆ ಮುಂದಕ್ಕೆ ಬರುತ್ತಿದ್ದಾರೆ. ಇವರಿಗೇನಾಗಿದೆ ಎಂದರೆ ರಾಜ್ಯದಲ್ಲಿ ಯಾರೂ ಉಳಿಯಬಾರದು, ಇವರ ಒಂದೇ ಜಾತಿ, ಒಂದೇ ಕಾಂಗ್ರೆಸ್ ಜಾತಿ ಅಥವಾ ಪಕ್ಷ ಉಳಿಯಬೇಕೆಂದು ಪ್ರಯತ್ನ ನಡೆಸಿದ ಹಾಗೆ ಇದರಿಂದ ಕಾಣುತ್ತದೆ. ಸರ್ಕಾರದ ಬೊಕ್ಕಸ ಇವರ ಕೈಲಿದೆಯೆಂದು ಸಿಕ್ಕಾಪಟ್ಟೆ ಸ್ವೇಚ್ಛೆಯಾಗಿ ಕೆಲಸಗಳನ್ನು ಮಾಡಿಕೊಂಡು ಹೋಗೋಣವೆಂದು ಇವರು ಮಾಡುತ್ತಿರುವ ಪ್ರಯತ್ನಗಳು ಖಂಡಿತವಾಗಿ ನ್ಯಾಯವಲ್ಲ. ಈಗ ಬೇಕಾದರೆ ನೋಡಿ ಕಲ್ಕತ್ತಾ, ಮತ್ತು ಪಶ್ಚಿಮಬಂಗಾಳದ ಪರಿಸ್ಥಿತಿಯನ್ನು ತೆಗೆದುಕೊಂಡರೆ ಅಲ್ಲಿ ತುರಂಗವಾಸದಲ್ಲಿದ್ದಂತಹವರನ್ನು ಕಂಡು ಯಾವರೀತಿ ಶ್ರೀ ನಂದಾ ಅವರು ಮತ್ತು ಶ್ರೀ ಸುಬ್ರಹ್ಮಣ್ಯಂ ಅವರು ದೆಹಲಿಯಿಂದ ಅಲ್ಲಿಗೆ ಓಡಿಹೋಗಿ ಶರಣಾಗತರಾಗಿ ಡಿ. ಎ. ಆರ್. ನಿಬಂಧನೆಗಳನ್ನು ವಾಪಸ್ಸು ತೆಗೆದುಕೊಳ್ಳಲು ಒಪ್ಪಿದ್ದಾರೆಂಬುದನ್ನು ನೋಡಿದರೆ ಸಾಕು. ಹೀಗೆ ಇವರೂ ಸಹ ಜನತೆಗೆ ಮಣಿಯಬೇಕು. ಜನರಿಗೆ ಮನ್ನಣೆ ಕೊಡದೇ ಹೋದರೆ ಇವರ ಆಡಳಿತದಬಗ್ಗೆ ನಿಜವಾಗಿ ಜನ ಉದ್ರೇಕಗೊಳ್ಳುವುದು ಖಂಡಿತ. ಅದಕ್ಕೋಸ್ಕರವೇ ಸರ್ಕಾರದ ಬೊಕ್ಕಸದ ಮೇಲೆ ಜನ ಕಣ್ಣಿಟ್ಟಿದ್ದಾರೆ. ಆದರಿಂದ ಸರ್ಕಾರದವರು ಬಹಳ ಬುದ್ಧಿವಂತಿಕೆಯಿಂದ ಅತಿರೇಖವಾಗಿ ಖರ್ಚುಮಾಡತಕ್ಕ ಹಣವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು ಈಗ ಇವರು ಇಲ್ಲಿ ಮಂಡಿಸಿರತಕ್ಕ ಎಂಟನೇ ಡಿಮ್ಯಾಂಡ್ ಪ್ರಕಾರ ಏನು ಖರ್ಚುಮಾಡುತ್ತಾರೋ ಅದಕ್ಕೆ ತೀವ್ರವಾದಂಥ ವಿರೋಧವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ.

10-30 A.M.

ಇನ್ನು ಡಿಮ್ಯಾಂಡ್ ನಂಬರ್ ಇಲ್ಲದೇ ಇರುವ (ಅನಾಮಧೇಯ) ಈ ಡಿಮ್ಯಾಂಡ್ ಯಾವುದು, ಇದರಲ್ಲಿ 1,98,85,500 ರೂಪಾಯಿಗಳನ್ನು ಕೇಳಿದ್ದಾರೆ. ಈ ಅನಾಮಧೇಯ ಡಿಮ್ಯಾಂಡಿಗೆ ಯಾರು ಜವಾಬ್ದಾರರು ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಡಿಮ್ಯಾಂಡ್ ನಂಬರ್ ಎಂಟು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಂಟನೇ ಡಿಮ್ಯಾಂಡ್ ಇಲ್ಲಿ ಬರುವುದಿಲ್ಲ. ಇದು ಇರಲಿ, ಆ ಮೇಲೆ ನೋಡೋಣ. ಈಗ ಇದರಲ್ಲಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಿಂದ ತಂದ ಹಣಕ್ಕೆ 1,98,85,500 ರೂಪಾಯಿಗಳನ್ನು ಬಡ್ಡಿ ಕೊಟ್ಟಿದ್ದೇವೆ ಎಂದು ಹೇಳಿ ಈಗ ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಅದನ್ನು ತಂದಿದ್ದಾರೆ. ನೀವು ಕೇಂದ್ರ ಸರ್ಕಾರದಿಂದ ತಂದ ಹಣದಿಂದ ದೇಶಕ್ಕೆ ಮಾಡಿದ ಕಲ್ಯಾಣ ಏನು ? ಅದು ಎಲ್ಲೆಲ್ಲಿ ಯಾವರೀತಿ ಖರ್ಚಾಯಿತು ? ನೀವು ಖರ್ಚು ಮಾಡುವುದರಲ್ಲಿ ಏನಾದರೂ ಹಿಡತವಿದೆಯೇ ? ಜನ ಏನು ಮಾತನಾಡಿಕೊಳ್ಳುತ್ತಾರೆಂದರೆ ಮೈಸೂರು ರಾಜ್ಯ ಸಾಲ ತರುವುದಕ್ಕೆ ಲಾಯಕ್ಕಾದ ರಾಜ್ಯ, ಬಡ್ಡಿ ಕೊಡುವುದಕ್ಕೆ ಲಾಯಕ್ಕಾದ ರಾಜ್ಯ, ಮೈಸೂರಿನ ಜನತೆ ಇದನ್ನು ಬಡ್ಡಿ ಮಕ್ಕಳ ರಾಜ್ಯ ಎಂದು ಕರೆಯುತ್ತಾರೆ. ಇದಕ್ಕೆ ನಿದರ್ಶನ ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿರುವ ಅಂಕಿ ಸಂಖ್ಯೆಗಳೇ ತೋರಿಸುತ್ತವೆ. ನಮ್ಮನ್ನು ಬಡ್ಡಿಮಕ್ಕಳು ಮಾಡಬೇಡಿ. ಈ ರಾಜ್ಯದಲ್ಲಿ ನಮ್ಮನ್ನು ಉತ್ತಮವಾದ ಪ್ರಜೆ, ಸ್ವತಂತ್ರವಾದ ಪ್ರಜೆಗಳನ್ನಾಗಿ ಮಾಡಿ.

SRI T. N. MADAPPA GOWDA (Nagamangala).—Sir, on a point of order. ಬಡ್ಡಿಮಕ್ಕಳು ಎನ್ನುವುದು ಅನ್‌ಪಾರ್ಲಿಮೆಂಟರಿ ಅಲ್ಲವೇ ?

MR. DEPUTY SPEAKER.—It is not unparliamentary. That word is a different word.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ರಾಜ್ಯ ಸಾಲ ಸೋಲ ಮಾಡಿ, ದುಡಿದದ್ದನ್ನೆಲ್ಲಾ ಸಾಯೋತನಕ ಬಡ್ಡಿಗೆ ಕೊಡುತ್ತಾರೆಯೋ ಅವರಿಗೆ ಬಡ್ಡಿ ಮಕ್ಕಳು ಎಂದು ಹೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಕಾಲದಲ್ಲಿ ಎಲ್ಲರೂ ಬಡ್ಡಿ ಮಕ್ಕಳೇ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೋಸ್ಕರ ನಮ್ಮನ್ನು ಆ ಮಟ್ಟಕ್ಕೆ ಇಳಿಸಬೇಡಿ. ಕೋಟ್ಯಾಂತರ ರೂಪಾಯಿಗಳ ಬಡ್ಡಿಯನ್ನು ಕೊಡತಕ್ಕ ಮಟ್ಟಕ್ಕೆ ನಮ್ಮನ್ನು ಇಳಿಸಬೇಡಿ. ನಮ್ಮ ರಾಜ್ಯ ಸರ್ಕಾರದವರು ಪ್ರತಿ ವರ್ಷ ಕೊಡತಕ್ಕಂಥ ಬಡ್ಡಿ 18 ಕೋಟಿ ರೂಪಾಯಿಗಳವರೆಗೆ ಏರಿದೆ. ಇನ್ನು ಮುಂದಾದರೂ ಸರ್ಕಾರದವರು ಖರ್ಚನ್ನ ಕಡಿಮೆ ಮಾಡಬೇಕು ; ಮತ್ತು ಖರ್ಚು ವೆಚ್ಚ ಮಾಡುವ ಹುದ್ದೆಗಳನ್ನು ನಿರ್ಮಾಣ ಮಾಡುವುದರಲ್ಲಿ ಸರ್ಕಾರದ ಹತೋಟಿ ಇರಬೇಕೆಂದು ಸರ್ಕಾರದವರೇ ಹೇಳುವಾಗ ಈ 1,35,14,500 ರೂಪಾಯಿಗಳ ಬಡ್ಡಿಯನ್ನು ಕೊಡತಕ್ಕ ಹಣ ಯಾವ ಡಿಪಾರ್ಟ್‌ಮೆಂಟಿಗೆ ಕೊಟ್ಟಿರತಕ್ಕ ಸಾಲ ? ಈ ರೀತಿ ನೀವು ಹಣವನ್ನು ಖರ್ಚು ಮಾಡಿದರೆ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಹಣ ಮಾತ್ರ ಖರ್ಚಾಗುತ್ತದೆ. ಆ ಸಾಲದ ಹಣಕ್ಕೆ ಕೇಂದ್ರ ಸರ್ಕಾರಕ್ಕೆ ಎಷ್ಟು ಬಡ್ಡಿಯನ್ನು ಕೊಡುತ್ತಿದ್ದೀರೋ ಅಷ್ಟು ಹಣವನ್ನು ನೀವು ದುಡಿಯುತ್ತಿದ್ದೀರಾ ? ನಿಜವಾಗಿಯೂ ಕೂಡ ಈ ಹಣಕಾಸಿನ ಮೇಲೆ ಹಿಡಿತವಿರಬೇಕು ಎಂದು ನಾನು ಸರ್ಕಾರದವರಿಗೆ ಹೇಳುತ್ತೇನೆ.

ಇನ್ನು ಈ ಸಪ್ಲಿಮೆಂಟರಿ ಎಸ್ಟಿಮೇಟಿನ ಪುಟ 8 ರಲ್ಲಿ ಎಕ್ಸ್‌ಪ್ಲನೇಟರಿ ನೋಟಿನಲ್ಲಿ ನ್ಯೂ ಸರ್ವೀಸ್ ವಿಷಯ ಹೇಳಿದ್ದಾರೆ. ಒಂದು ಕಡೆ ನಾವು ನೌಕರರನ್ನು ರಿಟ್ರೆಂಚ್ ಮಾಡುತ್ತೇವೆ, ಅದರಿಂದ 7 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡತ್ತೇವೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಕೋಟಿ ಕೋಟಿಗಟ್ಟಲೆ ಹಣವನ್ನು ವೆಚ್ಚ ಮಾಡುತ್ತಾರೆ. ಎಷ್ಟು, ಹುದ್ದೆಗಳು, ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ, ಇದನ್ನೆಲ್ಲಾ ನೋಡಿದರೆ ಇವರು ಯಾರನ್ನೂ ಯಾವ ಒಂದು ಪಿಳ್ಳೆಯನ್ನೂ ಕೂಡ ಸರ್ಕಾರಿ ನೌಕರರನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಈ ರೀತಿ ಮಾಡಿದರೆ 7 ಕೋಟಿಯಲ್ಲ 7 ಲಕ್ಷ ರೂಪಾಯಿಗಳನ್ನು ಕೂಡ ಇವರು ಉಳಿಸುವುದಕ್ಕೆ ಸಾಧ್ಯವಿಲ್ಲ. ದಿನೇ ದಿನೇ ಹುದ್ದೆಗಗನ್ನು ನಿರ್ಮಾಣ ಮಾಡಿಕೊಂಡು ಹೋಗುತ್ತಿದ್ದಾರೆ. ಈಗ 10 ನೇ ಡಿಮ್ಯಾಂಡಿನಲ್ಲಿ ಹೇಳಿರುವ ಹಾಗೆ ನ್ಯೂಸರ್ವೀಸ್ ಸಿಬ್ಬಂದಿಗೆ ಸಂಬಳ ಕೊಡುವುದಕ್ಕಾಗಿ 20,80,200 ರೂಪಾಯಿಗಳನ್ನು ಕೇಳಿದ್ದಾರೆ. ಸಂಬಳಕ್ಕಾಗಿ ಖರ್ಚು ಮಾಡತಕ್ಕ ಅಧಿಕಾರಿಗಳನ್ನು ನಿರ್ಮಾಣ ಮಾಡುತ್ತಾರೆಯೇ ಹೊರತು, ಆಹಾರವನ್ನು ಬೆಳೆಯುತಕ್ಕ ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡುವುದಿಲ್ಲ. ಇವೊತ್ತಿನದಿವಸ ನೀವು ಅಧಿಕಾರಿಗಳ ತಂಡವನ್ನು ನಿರ್ಮಾಣ ಮಾಡುತ್ತಿದ್ದೀರೆಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇಲ್ಲದೇ ಹೋದರೆ ಸಿವಿಲ್ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ನಿಮ್ಮನ್ನು ಅಧಿಕಾರದಿಂದ ಕೆಳಗಡೆ ಇಳಿಸುತ್ತಾರೆ. ಹೆಚ್ಚು ಹುದ್ದೆಗಳನ್ನು ಸೃಷ್ಟಿ ಮಾಡುವ ಹವ್ಯಾಸಕ್ಕೆ ಹೋಗಬೇಡಿ. ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಸ್ವಲ್ಪ ಬಿಗಿಯಾಗಿರಿ, ಅದನ್ನು ಸ್ವಲ್ಪ ಹಿಡಿತದಲ್ಲಿ ಇಟ್ಟುಕೊಳ್ಳಿರಿ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀವು ಪ್ರತಿನಿತ್ಯ ಎಕಾನಮಿ ಮಾಡುತ್ತೇವೆ, ನೌಕರರನ್ನು ರಿಟ್ರೆಂಚ್ ಮಾಡುತ್ತೇವೆ, ಎಂದು ಹೇಳುತ್ತೀರಿ, ಆದರೆ ಅಧಿಕಾರಿಗಳನ್ನು ಮಾತ್ರ ಬೆಳೆಸುತ್ತಾ ಹೋಗುತ್ತೀರಿ, ಏತಕ್ಕೆ ಅಧಿಕಾರಿಗಳನ್ನು ನಿರ್ಮಾಣ ಮಾಡುವುದಕ್ಕೆ ತಾವು ಮನಸ್ಸು ಕೊಟಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಅದಕ್ಕೋಸ್ಕರವಾಗಿ ಪಂಜಾಬಿನಲ್ಲಿ ಪಂಜಾಬಿ ಸುಭಾ ರಚನೆಯಾಗುವ ಹಾಗೆ ನಮ್ಮ ಮೈಸೂರಿನಲ್ಲಿ ಮೈಸೂರು ರಾಜ್ಯ ಎರಡಾಗಬೇಕು. ಇದು ಎರಡು ರಾಜ್ಯ ಆಗದೇ ಹೋದರೆ ಉಳಿಗಾಲವಿಲ್ಲ. ನಾನು ಇದನ್ನು ಪದೇ ಪದೇ ಹೇಳುತ್ತಿದ್ದೇನೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸ ಕಾರ್ಯಗಳಿಗೆ ಬೆಂಗಳೂರು ಡಿವಿಜನ್ನಿಗೆ ಇಟ್ಟಿರುವ ಹಣವನ್ನು, ಗುಲ್ಬರ್ಗ ಡಿವಿಜನ್ನಿಗೆ ಇಟ್ಟಿರುವ ಹಣವನ್ನು, ಹಾಸನ ಡಿವಿಜನ್ನಿಗೆ ಇಟ್ಟಿರುವ ಹಣ, ಬೆಳಗಾವ್ ಡಿವಿಜನ್ನಿಗೆ ಇಟ್ಟಿರುವ ಹಣ, ಮೈಸೂರು ಡಿವಿಜನ್ನಿಗೆ ಇಟ್ಟಿರುವ ಹಣವನ್ನು ನೋಡಿದರೆ ಹಳೆಯ ಮೈಸೂರನ್ನು ಕಡೆಗಾಣಿಸಿದ ಹಾಗೆ ತೋರುತ್ತದೆ. ಮೈಸೂರು ಸಂಸ್ಥಾನವನ್ನು ಇಂಡಸ್ಟ್ರಿಯಲ್ ಮ್ಯಾಪಿನಿಂದ ಹೇಗೆ ವೈಪ್ ಔಟ್ ಮಾಡುತ್ತಿದ್ದೀರೋ ಹಾಗೆಯೇ ಹಳೆಯ ಮೈಸೂರನ್ನು ಇರಿಗೇಷನ್ ಮ್ಯಾಪಿನಿಂದ ವೈಪ್ ಔಟ್ ಮಾಡುತ್ತಿದ್ದೀರಿ. ಗುಲ್ಬರ್ಗದಲ್ಲಿ ಎಷ್ಟು ಕೆರೆಕಟ್ಟೆಗಳನ್ನು ಕಟ್ಟಿಸಿದ್ದೀರಿ ? ಅಲ್ಲಿಗೆ ಸಾಲಕ್ಕಾಗಿ ಎಷ್ಟು ಹಣವನ್ನು ಒದಗಿಸಿದ್ದೀರಿ ? ಹಳೆಯ ಮೈಸೂರಿಗೆ ಎಷ್ಟು ಅನ್ಯಾಯ ನಡೆದಿದೆ ಎನ್ನುವುದನ್ನು ಅಂಕಿ ಅಂಶಗಳಿಂದಲೇ ತೋರಿಸುತ್ತವೆ. ಅದಕ್ಕೋಸ್ಕರವಾಗಿ ನಾನು 1966 ನೇ ಇಸವಿಯಿಂದಲೂ ಬಜೆಟ್ಟಿನ ಎಲ್ಲಾ ಅಂಕಿ ಅಂಶಗಳನ್ನು ಕೂಡಿಟ್ಟಿದ್ದೆ ಅದನ್ನು ನನ್ನ ಸ್ನೇಹಿತರೊಬ್ಬರು ತೆಗೆದು ಕೊಂಡು ಹೋಗಿದ್ದರು, ಅವರು ಇವೊತ್ತಿನ ದಿವಸ ಇಲ್ಲ, ಅವರು ಗತಿಸಿ ಹೋದರು. ನಾನು ಹೇಳುತ್ತೇನೆ, ಮೈಸೂರು ರಾಜ್ಯದ ಕನ್ನಡ ಮಾತನಾಡತಕ್ಕ ಜನ ಎರಡು ರಾಜ್ಯ ಆಗಬೇಕು ಎಂದು ಹೇಳುವುದರಲ್ಲಿ ಏನೇನೂತಪ್ಪಿಲ್ಲ ಸರ್ಕಾರದವರು ಈ ದಿವಸ ಇದಕ್ಕೆ ನಾಂದಿಯನ್ನು ಹಾಕಿದ್ದಾರೆ. ಪಂಜಾಬು ಸುಭಾದ ಹಾಗೆ ಇಲ್ಲಿಯೂ ವಿಭಜನೆ ಮಾಡಿದರೆ ಇದೂ ಒಂದು ವಯಬಲ್ ಯೂನಿಟ್ಟಿನ ತರಹ ಆಗುತ್ತದೆ. ಅಡ್ಮಿನಿಸ್ಟ್ರೇಟಿವ್ ಯೂನಿಟ್ಟು ಸುಮಾರು ಒಂದೂ ಕಾಲು ಅಥವಾ ಒಂದೂವರೆ ಕೋಟಿಯಷ್ಟು ಆಗುವ ಜನಸಂಖ್ಯೆಯ ಮೇಲೆ ರಾಜ್ಯ ನಿರ್ಮಾಣ ಮಾಡಿದರೆ ಆಗ ಇವೊತ್ತಿನ ದಿವಸ

ಆಗುತ್ತಿರುವ ಹಳೆಯ ಮೈಸೂರು ಭಾಗದವರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗುತ್ತದೆ ಮತ್ತು ಈಗ ಆಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟಿದಂತಾಗುತ್ತದೆ. ಇದರಿಂದ ಕನ್ನಡಿಗರು ಒಂದಾಗಿ ಬಾಳಲು ಒಂದು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದರಲ್ಲಿ ಪಿ. ಡಬ್ಲ್ಯು. ಡಿ ಬಾಬಿಗಾಗಿ ಏನು ವೆಚ್ಚ ಮಾಡಿದೆ ಎನ್ನುವುದನ್ನು ಇದರಲ್ಲಿ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಮಾನ್ ದೊಡ್ಡ ಮೇಟಿಯವರಿಗೆ ಈಗ ತಾನೇ ಬೌರಿಂಗು ಅಸ್ಪತ್ರೆಯಿಂದ ಹೊರಕ್ಕೆ ಬಂದಿರುವುದರಿಂದಾಗಿ ಅವರಿಗೆ ಹೃದಯ ದೌರ್ಬಲ್ಯ ಜಾಸ್ತಿಯಾಗಿದೆ. ಅವರನ್ನು ಕೂಡಿಕೊಂಡು ನಾವು ಒಂದು ಕರ್ಣಾಟಕ ಮಾಡಬೇಕೆಂದು ಹೇಳಿದಂತೆ ಆ ಕರ್ಣಾಟಕವಾಗಲಿಲ್ಲ. ಆದುದರಿಂದ ನಾನು ಹಿಂದೆ ಇಲ್ಲಿ ಪದೇ ಪದೇ ಹೇಳುತ್ತಿದ್ದಂತೆ ಎರಡು ಕನ್ನಡ ರಾಜ್ಯಗಳನ್ನು ನಿರ್ಮಾಣ ಮಾಡುವ ಕಾಲ ಈಗ ಪ್ರಾಪ್ತವಾಗಿದೆ. ಅದರಂತೆ ಮಾಡಲಿ ಎಂದು ರಜತಾದ್ರಿಯಲ್ಲಿರುವ ಪರಮಾತ್ಮ ಶ್ರೀ ಮುಕ್ಕಣ್ಣನನ್ನು ಪಾರ್ಥಿಸೋಣ. ದೊಡ್ಡ ಮೇಟಿಯವರು ಹೇಳುವಂತೆ ಅಲ್ಲಿಯ ಜೋಳ ಅಲ್ಲಿನ ಜನಕ್ಕೆ ಇಲ್ಲಿನ ಜೋಳ ಇಲ್ಲಿನ ಜನ ತಿನ್ನುವುದಕ್ಕೆ ಅನುಕೂಲವಾಗುವಂತೆ ಎರಡು ಸಣ್ಣ ರಾಜ್ಯಗಳನ್ನು ಮಾಡುವುದು ಸೂಕ್ತ ಎಂದು ಸೂಚನೆ ಮಾಡುತ್ತೇನೆ. ಈಗ ನಮ್ಮ ಮುಂದೆ ಇಟ್ಟಿರುವ ಸಪ್ಲಿಮೆಂಠರಿ ಗ್ರ್ಯಾಂಟು ಎನ್ನುವುದು ಗಾತ್ರದಲ್ಲಿ ಹೇಗಿದೆ ಎಂದರೆ, ನಮಗೆ ಕೊಟ್ಟಿರುವ 66-67 ನೇ ಸಾಲಿನ ಬಡ್ಜೆಟ್ಟಿನ ಗಾತ್ರದಲ್ಲಿ ಮುಕ್ಕಾಲು ಭಾಗದಷ್ಟು ಇದೆ, though it is small in size ಇದರಿಂದ ನಾನು ಮೊದಲೇ ಹೇಳಿದ ಹಾಗೆ ಸರಕಾರಕ್ಕೆ ಸರಿಯಾಗಿ ಹಣಕಾಸಿನ ಹತೋಟಿ ಮಾಡಲು ಆಗಲಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಇದರಲ್ಲಿ ಹಾಕಿರುವಂತೆ ಹೆಚ್ಚು ಹಣ ಖರ್ಚುಮಾಡಿ ಅದು ಜನತೆಯಲ್ಲಿ ಸದ್ವಿನಿಯೋಗವಾಗಲು ಪ್ರಯತ್ನ ಮಾಡಬೇಕು. ಇವೊತ್ತು ತಾವು ಕೇಳುವಂತೆ ಇಲ್ಲಿ ನಾವು ಇಷ್ಟು ಹಣವನ್ನು ನಿಮಗೆ ಕೊಟ್ಟರೂ ಇದು ಮಾರ್ಚಿ 31ನೇ ತಾರೀಖಿನೊಳಗೇ ಖರ್ಚಾಗಬೇಕು. ಹಾಗೆ ಮಾಡಲು ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಹಾಗೆ ಖರ್ಚು ಮಾಡದೇ ಹೋದರೆ 1965ನೇ ಇಸವಿ ಆಡಿಟ್ಟು ರಿಪೋರ್ಟಿನಲ್ಲಿ ಹೇಳಿರುವಂತೆ ಬೇರೆ ಬೇರೆ ಖಾತೆಗಳಿಗಾಗಿ ಕೊಟ್ಟ ಹಣದಲ್ಲಿ ಸುಮಾರು ಎರಡು ಕೋಟಿಯಷ್ಟು ಹಣವನ್ನು ಸರೆಂಡರು ಮಾಡಿದ್ದಾರೆ. ಅಧಿಕಾರಿಗಳಿಗೆ ಖರ್ಚು ಮಾಡುವುದಕ್ಕೆ ಆಗಲಿಲ್ಲ. ಆದುದರಿಂದ ಇಲ್ಲಿ ತಂದಿರುವ ಸಪ್ಲಿಮೆಂಟರಿ ಗ್ರ್ಯಾಂಟುಗಳ ಬೇಡಿಕೆಗಳನ್ನು ಬಹಳ ಮನನೊಂದು ಒಂದುತರಹ ಪೇಚಿಗೆ ಸಿಕ್ಕಿಕೊಂಡು ಇದನ್ನು ವಿರೋಧಮಾಡಬೇಕಾಗಿ ಬಂಧಿದೆ. ಆದುದರಿಂದ ನಮ್ಮ ಹಣಕಾಸಿನ ಸಚಿವರು ಇದನ್ನೆಲ್ಲಾ ಸ್ವಲ್ಪ ನೆನಪಿನಲ್ಲಿಟ್ಟುಕೊಂಡು ಆಯಾ ವರ್ಷದಲ್ಲಿ ಕೊಟ್ಟ ಹಣವನ್ನು ಆಯಾವರ್ಷದಲ್ಲೇ ಖರ್ಚುಮಾಡುವಂತೆ ಸರಿಯಾದ ಆದೇಶವನ್ನು ಅಧಿಕಾರಿಗಳಿಗೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair].

† Sri SANJEEVANATH AIKALA.—Mr. Speaker, it is the fag end of the year the Hon'ble the Finance Minister has come forward with a demand totalling Rs. 58 crores and odd which includes both charged as well as voted items.

I will first go to Demand No. 10 wherein Government has created a new taluk in South Kanara District. There was a good and legitimate demand for the formation of two or three more taluks in South Kanara, *viz.* Moodibidri, Brahmawar and Ajeka. But leaving them all Government has constituted only the Sullia Taluk which has got only 57 villages with a population 64,000. Moodibidri has got 64 villages with a population of 94,000. So also, Brahmawar and Ajeka are equally viable units. The Sullia Taluk is not a viable unit and because of political pressure this taluk was formed and that too in the middle of the year when there is no necessity. With an eye on the elections to come this taluk night have been formed.

Now, I come to Demand No. 20 wherein Government has advanced money to purchase 175 power tillers. These are to be purchased directly from the Japanese Government. Out of 191, 16 are to be given to the Central Government and 6 to the Andhra Pradesh Government. There is

(SRI SANJEEVANATH AIKALA)

a very good demand for them not only in South Kanara but in other districts also. When there is such a huge demand for them, I see no reason why Government should purchase them and give some of them to the Central Government and other State Governments. Even in the allotment, some discrimination has been made. 480 applications have been forwarded from South Kanara, whereas only 12 power tillers have been allotted to that district. It is a district which is predominantly an agricultural district where we grow three crops and we require a good number of them because there is a shortage of buffaloes which can be used for cultivation.

Coming to Demand No. 33, in order to work out a scheme of 25 lakhs if you have to spend nearly Rs. 6 lakhs on the establishment alone, I do not know what sort of relief we can give to the scarcity areas. The salary of staff in every Department is so huge that hardly any money is left to give any relief in the scarcity areas.

Again in Demand No. 46, most of the money is allotted to works in progress. Out of Rs. 24 lakhs, more than 20 lakhs have been set apart to the works in progress for which budgetted amount has already been provided.

When the works are estimated, they should be properly estimeted. Item No. 2, 4, 7, 9, 11, require more money in addition to the money already provided in the budget for the current year. What I mean to say is when the budget was prepared, proper estimation should have been done. This shows the lack of proper imagination and lack of knowledge. Some of these estimates are prepared by Technicians and Engineers. They could have forethought that so much of money is required for completion of such and such a work. I have already pointed out the reasons as to why a special treatment is being given to the District of South Kanara. What is being spent there, is for major works like Harbour, West Coast Road, and Bridges. Money is being spent by the Government of India. Whatever is spent is given by the Government of India. Therefore, to say that the Government of Mysore is spending a lot of money in South Kanara is not correct. Even in respect of minor irrigation, the Government of Mysore has not shown much progress. The Chief Minister said on an occasion that the demands of the district will be met. But it is not so, because we require large amounts of money for undertaking minor irrigation works. Even the undertaking or improvement of minor irrigation is not in proportion to the revenue receipts of this District which pays sales Tax, Land Revenue, Surcharge, and all other taxes that the Government levy. This District is the first District, which is not in arrears. In the matter of spending especially for the developmental works, the Government lags very much behind. This is patently clear in the matter of developmental works especially in relation to minor irrigation works. I wish that the Government should spend atleast 50 per cent of what it receives from this District for the developmental works. With these words I conclude. Thank you, Sir.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು 65—66ನೇ ಸಾಲಿನ ಅನುಪೂರಕ ಅನುದಾನಗಳ ಮೂರನೆಯ ಕಂತು ಒಂದನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಅಕ್ಟೋಬರ್ 65ರಲ್ಲಿ ಒಂದು ಕೋಟಿ 17ಲಕ್ಷ 72ಸಾವಿರದ 847 ರೂಪಾಯಿಗಳಷ್ಟು ಹಣವನ್ನು ಮೊದಲನೆ ಅನುಪೂರಕ ಅನುದಾನಗಳ ಕಂತಿನಲ್ಲಿ ಸರ್ಕಾರದವರು ಪಡೆದರು. ನಂತರ 66ನೇ ಫೆಬ್ರವರಿಯಲ್ಲಿ 3ಕೋಟಿ 27ಲಕ್ಷ 87ಸಾವಿರದ 302 ರೂಪಾಯಿಗಳು ಈ ಸಭೆ ಅಂಗೀಕಾರ ನೀಡಿತು. ಈಗ ಒಟ್ಟು 58,80,71,995 ರೂಪಾಯಿನಷ್ಟು ಹೆಚ್ಚುವರಿ ಬೇಡಿಕೆಯನ್ನು ಈ ಅನುಪೂರಕ ಅನುದಾನಗಳ ಬಗ್ಗೆ ಸಚಿವರು ಮಂಡಿಸಿದ್ದಾರೆ. ನಮ್ಮ ಒಟ್ಟು ರೆವಿನ್ಯೂ ಹುಟ್ಟುವಳಿ ಪುನರ್ವಿಮರ್ಶಿತ ಅಂದಾಜಿನ ಪ್ರಕಾರ 65—66ರಲ್ಲಿ 71 ಕೋಟಿ 19 ಲಕ್ಷಗಳಷ್ಟು ಇದೆ. ಅದರಲ್ಲಿ ಈ ವರ್ಷ ಎಂದರೆ 66—67ನೇ ಸಾಲಿಗೆ 98 ಕೋಟಿ ರೂಪಾಯಿನಷ್ಟು ಆಗುತ್ತದೆ. 65—66ನೇ ಸಾಲಿನದು ನಾವು ಈಗ ಈ ಅನುಪೂರಕ ಅನುದಾನಗಳ ಪ್ರಕಾರ 58 ಕೋಟಿ 80ಲಕ್ಷದಷ್ಟು ಹಣವನ್ನು ಕೊಡಬೇಕು ಅಥವಾ ತೆಗೆದುಕೊಳ್ಳಬೇಕು. ಈಗ ತಮ್ಮ ಭಾಷಣದ ಇಂಗ್ಲೀಷ್ ಪ್ರತಿಯ 60ನೇ ಪ್ಯಾರಾವನ್ನು ತಾವು ಗಮನಿಸಬೇಕು. ಅದರಲ್ಲಿ ಬರುವ ವರ್ಷ 10.88 ಕೋಟಿ ಕೊರತೆಯಿಂದ ಆರಂಭವಾಗುತ್ತದೆ ಮತ್ತು 9.26 ಕೋಟಿ ಕೊರತೆಯಿಂದ ಮುಕ್ತಾಯವಾಗುತ್ತದೆ ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಈ ಅನುಪೂರಕ ಅನುದಾನದ ಪಟ್ಟಿಯು ಹಿನ್ನೆಲೆಯಲ್ಲಿ ತಾವೀಗ ಮಂಡಿಸಿರತಕ್ಕ ಮುಂದಿನ ವರ್ಷದ ಆಯವ್ಯಯದ ಮೇಲೆ ಏನು ಪರಿಣಾಮವಾಗುತ್ತದೆ ಎಂಬ ವಿಷಯವನ್ನು ಮಾನ್ಯ ಸಚಿವರು ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಭದ್ರತಾ ಪತ್ರಗಳನ್ನು ಮಾರುವುದರಿಂದ ಏನೂ ಅಪಾಯವಿಲ್ಲ, ಅದು ಇಲ್ಲದೇ ನಡೆಯುತ್ತದೆ, ನಾವು ಬೇಕಾದಷ್ಟು ಆಸ್ತಿಗಳನ್ನು ರೂಢಿಸಿಪ್ಪೇವೆ ಎಂಬ ಒಂದು ಹೊಸ ಸಿದ್ಧಾಂತವನ್ನು ಮಾನ್ಯ ಸಚಿವರು ಸಭೆಯ ಮುಂದೆ ಮೊನ್ನೆ ಇಟ್ಟರು. ಇವತ್ತು ದೇಶದ ಹಣಕಾಸಿನ ಸ್ಥಿತಿ ಚೆನ್ನಾಗಿಲ್ಲ ಎನ್ನುವುದನ್ನು ಈ ಸಭೆಯಲ್ಲಿ ಇದ್ದವರೆಲ್ಲರೂ ಒಪ್ಪುತ್ತಾರೆ. ರೂಪಾಯಿನ ಮೌಲ್ಯ 100 ಪೈಸೆ ಇಂದ, 17ರಿಂದ 11ಪೈಸೆಗೆ ಬಂದು ಮುಟ್ಟುತ್ತಾ ಇದೆ ಎಂಬುದನ್ನು ನಾವು ಮನಗಂಡಿದ್ದೇವೆ. ಹಣದ ಉಬ್ಬರ ಮಿತಿಮೀರಿ ಅಪಾಯಕಾರೀ ಪರಿಸ್ಥಿತಿಯನ್ನೂ ಕೂಡ ಮುಟ್ಟಿದೆ. ಹಿಂದೆ ಎಂದೂ ಮುಟ್ಟಿರಲಾರದ ಅಪಾಯಕಾರೀ ಪರಿಸ್ಥಿತಿಯನ್ನು ಮುಟ್ಟಿದ್ದೇವೆ. ಬಹುಶಃ ಕೇಂದ್ರಸರ್ಕಾರದವರಿಗೆ ಸಾಲಗಳ ಬಡ್ಡಿಗಾಗಿ 100ಕೋಟಿ ರೂಪಾಯಿಗಳನ್ನು ಕನಿಷ್ಠ ಕೊಡಬೇಕಾಗುತ್ತದೆ. ನಾನೇನೋ ಶ್ರೀಮಾನ್ ನಿಜಲಿಂಗಪ್ಪನವರು ರಾಜ್ಯಕ್ಕೆ ಬಹಳ ದೊಡ್ಡ ಕೊಡುಗೆಯನ್ನೇ ತರುವುದಕ್ಕೆ ದೆಹಲಿಗೆ ಹೋಗಿದ್ದಾರೋ ಏನೋ ಎಂದು ಮಾಡಿದ್ದೆ. ಅವರು ಯಾವಾಗಲೂ ಹೇಳುತ್ತಾರೆ ಬಹುಷಃ ಚಿಕ್ಕಂದಿನಿಂದ ಅಭ್ಯಾಸ ಮಾಡಿದ್ದಾರೆ ಎಂದು ಕಾಣುತ್ತದೆ. 'ಸಂಶಯಾತ್ಮಾ ವಿನಶ್ಯತಿ. ಎಂದು ಹೇಳುತ್ತಾಇರುತ್ತಾರೆ. ಹಾಗಾದರೆ ಮೊನ್ನೆ ಶ್ರೀಮಾನ್ ನಿಜಲಿಂಗಪ್ಪನವರನ್ನು ಯಾರು ಕರೆಯಿಸಿದ್ದರು ? ಅವರು ದೆಹಲಿಯಲ್ಲಿ ಮಾತನಾಡಿದಂತಹ ಗಹನವಾದ ವಿಷಯ ಯಾವುದು ? ಅವರು ಪತ್ರಿಕೆಗಳಲ್ಲಿಕೊಟ್ಟಿರತಕ್ಕ ಹೇಳಿಕೆ ವಿಷಯ ನಿಜವೇ ? ಅಥವಾ ಅಕೌಂಟೆಂಟ್ ಜನರಲ್ ಅದೇಶದ ಪ್ರಕಾರ ಪ್ಲಾನಿಂಗ್ ಕಮಿಷನ್ ಅವರು ರಿಸರ್ವ್ ಬ್ಯಾಂಕ್‌ನವರು, ಸೆಂಟ್ರಲ್ ಗವರ್ನಮೆಂಟಿನವರು ಏನಾದರೂ ನೋಟೀಸ್ ಕೊಟ್ಟು ನೀವು ತಕ್ಷಣ ನಿಮ್ಮ ಕಾರ್ಯಕಲಾಪಗಳು, ಎಲ್ಲಾ ಬೇಡಿಕೆಗಳು ಒಟ್ಟು ಸಪ್ಲಿಮೆಂಟರಿ ಬಡ್ಜೆಟ್ ಮಾಡಿ ಈ 42 ಕೋಟಿ 61ಲಕ್ಷ ರೂಪಾಯಿಗಳನ್ನು ಕೊಡದೇ ಹೋದರೆ ತತ್‌ಕ್ಷಣ ನಿಮ್ಮ ಮೇಲೆ ಏನಾದರೂ ಕಾರ್ಯಕ್ರಮತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೋಏನೋ ಗೊತ್ತಿಲ್ಲ.

11-00 A.M.

ಏಕೆ ಹೋಗಿದ್ದರೋ ಗೊತ್ತಿಲ್ಲ, ಬಹುಶಃ ಹೊಸಪೇಟೆಯಲ್ಲಿ ಜಾಗವನ್ನಾರಿಸಿದ್ದೇವೆ ಎಂದು ತಿಳಿಸುವುದಕ್ಕೆ ಕರೆಸಿದ್ದರೋ ಅಥವಾ ಯಾರಡಿ ವರದಿಕೊಟ್ಟಿದ್ದಾರೆ, ನಿಜವಾಗಿ ರಾಜ್ಯದ ಪರಿಸ್ಥಿತಿ ಹೇಗಿದೆ ಎಂದು ವಿಚಾರಮಾಡುವುದಕ್ಕೆ ಕರೆಸಿದ್ದರೋ ಅಥವಾ ನೀರಾವರಿ ಯೋಜನೆಗಳನ್ನು ಅಭಾವ ಪ್ರದೇಶಗಳಲ್ಲಿ ಕೈಗೊಳ್ಳಲು 20ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ತಿಳಿಸಲು ಕರೆಸಿದ್ದರೋ ಅಥವಾ ಯಾವುದೋ ಕೈಗಾರಿಕೆಗೆ ಹಣ ಕೊಟ್ಟಿರಬಹುದು ಎಂದೂ ಅದನ್ನು ತೆಗೆದುಕೊಂಡು ಬರುವುದಕ್ಕೆ ಹೋಗಿದ್ದಾರೆ, ಅದನ್ನಿಲ್ಲಿ ಸೇರಿಸಿರಬಹುದು ಎಂದೂ ಮೊದಲು ನಾನು ತಿಳಿದಿದ್ದೆ. ಆದರೆ ವಾಸ್ತವಸ್ಥಿತಿ ಬೇರೆ ಇದೆ, ಈ ಹಣ ನಾವು ಕೊಡಬೇಕಾಗಿದೆ. ಅಕೌಂಟೆಂಟ್ ಜನರಲ್ ಅಡ್‌ಜಸ್ಟ್‌ಮಾಡಿದ್ದಾರೆ, ಖೋತ ಇದೆ ಎಂದು ಹೇಳುವುದು ನಿಜ. ಈ ವಿಚಾರದಲ್ಲಿ ಅನುಮಾನವಿದೆ, ಅದನ್ನು ಮಾನ್ಯ ಸಚಿವರು ಪರಿಹರಿಸಬೇಕು.

ಸ್ವಾಮಿ, 18 ವರ್ಷಗಳ ಹಿಂದೆ ಅಠಾರ ಕಛೇರಿ ಎಂದಿತ್ತು, ಅಗ 18 ಬಾಬುಗಳಿದ್ದುವು, ಈಗ ಬಹುಶಃ ನೂರೆಂಟು ಬಾಬುಗಳಿವೆಯೆಂದು ಕಾಣುತ್ತದೆ. ಈ ಯೋಜನಾ ಅವಧಿಯಲ್ಲಿ ತಲೆಗಿಂತ ಮುಂಡಾಸ ದೊಡ್ಡದು ಎಂಬಂತೆ ಆ ರೀತಿಯಲ್ಲಿ ಅಠಾರ ಕಛೇರಿ ಸಿಬ್ಬಂದಿವರ್ಗ ಬಹಳ

(ಶ್ರೀ ಎಸ್. ಗೋಪಾಲ ಗೌಡ)

ವಾಗಿ ಬೆಳೆದಿದೆ. ಇದಕ್ಕೆ ಒಬ್ಬರು ಮಹಾಶಯರು ಹೇಳಿದರು-ನನ್ನನ್ನೂ ಒಂದು ಡೈರೆಕ್ಟರೆಂದು ನೇಮಿಸಿ ಒಂದು ಸಿಬ್ಬಂದಿ ಕೊಟ್ಟರೆ ಸಾಕು, ಕೆಲಸ ಬೇಕಾಗಿಲ್ಲ, ಹೆಸರಿಲ್ಲದಿರುವ ಖಾತೆ ಎಂದು ಬೇಕಾದರೂ ಕರೆಯಬಹುದು, ನಾನು ಬೇಕಾದಷ್ಟು ಫೈಲುಗಳನ್ನು ಸೃಷ್ಟಿಮಾಡುತ್ತೇನೆ ಎಂದು. ಈ ರೀತಿ ಬೇಕಾದಷ್ಟು ಹೊಸ ಇಲಾಖೆಗಳನ್ನು ತೆರೆದು ಸಮುದ್ರದ ಪಕ್ಕದಲ್ಲಿರುವ ಮರಳನ್ನು ಲೆಕ್ಕ ಮಾಡಿ ಎಂದು ಹೇಳುವ ಹಾಗಿದೆ ಈಗ ಮಾಡುತ್ತಿರುವುದು ಜನರಲ್ ಅಡ್ಮಿನಿಸ್ಟ್ರೇಷನ್ ಈ ರೀತಿ ಇದೆ.

ಸರಕಾರ ಮಾಡಿರುವುದೇನೆಂಬುದನ್ನು ಶಿವಪ್ಪನವರು ಹೇಳಿದ್ದಾರೆ. ಅಗ್ರಿಕಲ್ಚರಲ್ ಪ್ಲಾನಿಂಗ್ ಸೆಲ್ ಎಂದು ಒಂದು ಇಲಾಖೆ ಮಾಡಿದ್ದಾರೆ. ಈಗಾಗಲೆ ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿದ್ದೇವೆಂಬುದನ್ನು ಮರೆಯಬಾರದು, ಅದು ಈ ಮಾರ್ಚಿ ಆಖೈರಿಗೆ ಮುಗಿಯಬೇಕು. ಅಗ್ರಿಕಲ್ಚರಲ್ ಪ್ಲಾನಿಂಗ್ ಸೆಲ್ಲಿಗೆ ಒಬ್ಬ ಡೈರೆಕ್ಟರನ್ನು ನೇಮಿಸಿದ್ದಾರೆ, ಒಬ್ಬ ಎಕನಾಮಿಸ್ಟ್, ಒಬ್ಬ ಸ್ಟ್ಯಾಟಿಸ್‌ಟೀಷಿಯನ್ ಇದ್ದಾರೆ, ಎನ್. ಜಿ. ಒ. ಗಳಲ್ಲಿ ಒಬ್ಬ ಸ್ಟೆನೋಗ್ರಾಫರು, ಒಬ್ಬ ಜೂನಿಯರ್ ಅಸಿಸ್ಟೆಂಟ್, ಕ್ಲಾಸ್ ಫೋರ್‌ನವರು ಇಬ್ಬರು ಇದ್ದಾರೆ. ಅವರೇನು ಕೆಲಸ ಮಾಡುವರೆಂಬುದನ್ನು ಹೇಳಿದ್ದಾರೆ. ಕೆಲಸ ಬಹಳವಿದೆ, ಈ ಸೆಲ್‌ನವರು ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಪ್ಲಾನ್‌ಗೆ ಸಂಬಂಧಪಟ್ಟ ಕೆಲಸದ ವಿಚಾರದಲ್ಲಿ ಗೈಡ್ ಮಾಡುವುದು, ಇರುವ ಅಧಿಕಾರಿಗಳೊಡನೆ ಕೋಆರ್ಡಿನೇಟ್ ಮಾಡುವುದು ಮುಂತಾದ ಕೆಲಸಮಾಡುತ್ತಾರೆ. ಹಾಲಿ ಇದಕ್ಕಾಗಿ ಕೆಲವರಿರುವಾಗ ಇವರೇಕೆ ಮತ್ತೆ ನೇಮಕವಾಗಬೇಕಾಗಿತ್ತು ? ಈ ಹೊಸ ಹುದ್ದೆಗಳಿಂದ ದೇಶ ಉದ್ಧಾರವಾಗುತ್ತದೆಯೇ ? ಇದರಿಂದ ಇನ್ನುಮೇಲೆ ಸುಸೂತ್ರವಾಗಿ ಕೆಲಸ ದೇಶದಲ್ಲಾಗುತ್ತದೆಂದು ಭಾವಿಸಿದ್ದೀರಾ ? ಇದನ್ನೆಲ್ಲಾ ಈ ದಿವಸ ಪುನರ್ವಿಮರ್ಶೆಮಾಡುವ ಕಾಲ ಸನ್ನಿಹಿತವಾಗಿದೆ.

ಮಾಡಬೇಕಾಗಿರುವುದೇನೆಂಬುದನ್ನು ಮಾನ್ಯ ಸಚಿವರು ಹೇಳಿದರು. ಹೋದ ಮಹಾತ್ಮ ಗಾಂಧಿಯವರ ಜಯಂತಿಯ ದಿನ ಭೂ ಸುಧಾರಣಾ ಕಾನೂನಿನ ಉದ್ಘಾಟನೆಯನ್ನು ಮಾಡಿದೆವು, ಮುಂದಿನ ಅಕ್ಟೋಬರಿನ ವೇಳೆಗೆ ಸಿದ್ಧತೆ ಮಾಡಿಕೊಳ್ಳುತ್ತೇವೆ, ಪರಿಹಾರ ಕೊಡುವ ಪ್ರಶ್ನೆ ಈ ಸಲ ಬರುವುದಿಲ್ಲ ಎಂದು ಹೇಳಿದ್ದರು. ಆದರೆ ಇಲ್ಲಿ ಕಛೇರಿಯಲ್ಲಿ ಕುಳಿತು ಕೆಲಸಮಾಡುವುದಕ್ಕೆ, ಭೂ ಸುಧಾರಣಾ ಕಾನೂನನ್ನು ಜಾರಿಗೆ ತರುವುದಕ್ಕೆ ಎಷ್ಟು ಜನ ಸ್ಪೆಷಲ್ ಆಫೀಸರುಗಳು ನೇಮಕವಾಗುತ್ತಿದ್ದಾರೆ, ಸಿಬ್ಬಂದಿ ಎಷ್ಟು ಕೇಳುತ್ತಿದ್ದಾರೆ ಎಂಬುದನ್ನು ನೋಡಬಹುದು. ತಾಲ್ಲೂಕು ಮಟ್ಟದಲ್ಲಿ ಟ್ರಿಬ್ಯೂನಲ್ ನೇಮಿಸಿ ಸಾಮಾನ್ಯವಾಗಿ ಅಲ್ಲಿಗೆ ಮುನ್ಸಿಫರನ್ನು ಹಾಕಬೇಕು, ಬೇರೆ ಕೆಲಸಗಳನ್ನು ಮಾಡಬೇಕು. ಅದೆಲ್ಲಾ ಮಾಡದೆ ಇಲ್ಲಿ ರೆವೆನ್ಯೂ ಇಲಾಖೆ ಇಲ್ಲವೇನೋ ಒಂದು ಹೊಸ ವ್ಯವಸ್ಥೆ ಮಾಡಬೇಕೇನೋ ಎಂಬಂತೆ ಒಂದು ರೀತಿಯಲ್ಲಿ ಹೊಸ ಅಧಿಕಾರಿಗಳ ನೇಮಕವಾಗುತ್ತಿದೆ, ಈ ರೀತಿ ಭೂ ಸುಧಾರಣೆ ಷುರುವಾಗಿದೆ. ಸೆಕ್ರೆಟೇರಿಯೆಟ್ಟಿನಲ್ಲಿರುವ ಅಧಿಕಾರಿಗಳು ಸಾಲದೆಂದು ತೋರುತ್ತದೆ.

ಇನ್ನೊಂದು ಇನಾಂಗಳ ರದ್ದಿಯಾತಿ ಕಾನೂನನ್ನು ಜಾರಿಗೆ ತಂದು ಎಷ್ಟೋ ಕಾಲವಾಯಿತು, ಅಧಿಕಾರಿಗಳ ವಿಳಂಬ ನೀತಿಯಿಂದ ಇನ್ನೂ ಇನಾಮುಗಳು ರದ್ದಾಗಿಲ್ಲ. ಈಗ 1965ನೆಯ ಇಸವಿ ಜನವರಿಯಲ್ಲಿ ಇನ್ನೊಬ್ಬರು ಇನಾಂ ಡೆಪ್ಯುಟಿ ಕಮೀಷನರನ್ನು ನೇಮಿಸಲು ಆಜ್ಞೆ ಹೊರಡಿಸಿದ್ದಾರೆ. ಇದರ ಅವಶ್ಯಕತೆಯೇನಿತ್ತು ? ಈಗಾಗಲೆ ನಮ್ಮ ಆದಾಯದಲ್ಲಿ ಅರ್ಧವನ್ನು ಸಿಬ್ಬಂದಿಗೆ ಕೊಡಲಾಗುತ್ತಿದೆ, ಹೀಗೆ ಅನ್‌ಪ್ರೊಡಕ್ಟಿವ್ ಆಗಿರುವುದಕ್ಕೆ ಬೇಕಾದಷ್ಟು ಖರ್ಚು ಮಾಡುತ್ತಿರುವಾಗ ಮತ್ತೆ ಬೇರೆಯವರನ್ನು ನೇಮಿಸಿ ಒದಗಿಸುವ ಹಣವನ್ನೆಲ್ಲಾ ಸಿಬ್ಬಂದಿಗೇ ಹಂಚಬೇಕೆಂಬ ಅಭಿಪ್ರಾಯವಿದೆಯೇ ? ಈ ಹಣವನ್ನು ಕುಡಿಯುವ ನೀರಿನ ಸೌಕರ್ಯವಿಲ್ಲದಿರುವ ಗ್ರಾಮಗಳಿಗೆ ಅಥವಾ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಅಥವಾ ಬಡವರಿಗೆ ಸಹಾಯಮಾಡುವುದಕ್ಕೆ ಉಪಯೋಗಿಸಬಾರದಾಗಿತ್ತೇ ? ಹಾಗೆ ಮಾಡದೆ ಇಷ್ಟೊಂದು ಹೊಸಹೊಸ ವಿಭಾಗಗಳನ್ನು ತೆರೆದು ನೌಕರರನ್ನು ಹೆಚ್ಚಿಸುವುದು ಬಹಳ ವಿಷಾದಕರ ಎಂದು ಹೇಳಬೇಕಾಗಿದೆ. ಇದು ದೇಶದ ಉದ್ಧಾರಕ್ಕಾಗಲಿ ಅಥವ ಆಡಳಿತವನ್ನು ಸುಧಾರಿಸುವುದಕ್ಕಾಗಲಿ ಯಾವ ದೃಷ್ಟಿಯಿಂದಲೂ ಸಹ ಸಹಾಯಕವಾಗಿಲ್ಲ. ಒಂದು ವಿಷಚಕ್ರದಲ್ಲಿ ಬಹುಶಃ ಸರಕಾರಿ ಯಂತ್ರ ಈ ದಿವಸ ಸಿಕ್ಕಿದೆಯೆಂದು ಕಾಣುತ್ತದೆ.

ಎಂಟನೆಯ ಡಿಮ್ಯಾಂಡ್ ಆದಮೇಲಿರುವ ಡಿಮ್ಯಾಂಡ್‌ಗೆ ನಂಬರನ್ನು ಕೊಟ್ಟಿರುವುದಿಲ್ಲ, ಅದರ ಹೆಸರು ಗೊತ್ತಾಗಿಲ್ಲ, ಎಂಟನೆಯ ಡಿಮ್ಯಾಂಡು ರಿಜಿಸ್ಟ್ರೇಷನ್ನಿಗೆ ಸಂಬಂಧಪಟ್ಟದೆ, ಒಂಭತ್ತನೆಯದು ಲೆಜಿಸ್ಲೇಚರಿಗೆ ಸಂಬಂಧಿಸಿದೆ. ಇದನ್ನು ತಿಳಿಸಬೇಕು. ಎಂಟನೆಯ ಡಿಮ್ಯಾಂಡಿನಲ್ಲಿ 100 ರೂಪಾಯಿಗಳ ಟೋಕನ್ನು ಗ್ರಾಂಟನ್ನು ಕೇಳಿದೆ. ಸ್ಟ್ಯಾಂಪ್ಸ್ ರಿಜಿಸ್ಟ್ರೇಷನ್‌ನಲ್ಲಿ ಇದು ಬರುತ್ತದೆ. ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್

ಎಂದು ಒಬ್ಬನನ್ನು ನೇಮಕ ಮಾಡುತ್ತೀರಿ. ಇಂಡಿಯಾ ದೇಶದಲ್ಲಿ ಎಲ್ಲ ಕಡೆ ನಿಮ್ಮ ಸಹೋದರರೇ ಇದ್ದು ಈ ಆಡಳಿತ ವ್ಯವಸ್ಥೆಯು ಪರಂಪರೆಯು ಇಲ್ಲಿಗೆ ಬಂದಿದೆ. ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಇದು ಏನು ಹುದ್ದೆ ನೋಡಿ. ಒಂದು ರೆವೆನ್ಯೂ ಇಲಾಖೆಯಲ್ಲಿ ಮೊದಲು ನೂರಾರು ಇಲಾಖೆಗಳು ಇರುತ್ತಿದ್ದವು. ಈಗ ಒಂದು ಇಲಾಖೆಯಲ್ಲಿ ಒಂದೊಂದು ಬಾಬಿಗೆ ಎಷ್ಟು ಜನ ಡೈರೆಕ್ಟರುಗಳು, ಟೆಕ್ನಿಕಲ್ ಅಡ್ವೈಜರ್ಸ್ ಲೀಗಲ್ ಅಡ್ವೈಜರ್ಸ್ ಇದ್ದಾರೆ ಇದು ಏನು ಸ್ವಾಮಿ! ಇನ್ನು ಕಮಿಷನರ್ ಆಫ್ ಸ್ಟ್ಯಾಂಪ್ಸ್. ಸ್ಟ್ಯಾಂಪ್‌ಗಳಿಗೆ ಒಬ್ಬ ಕಮಿಷನರ್.

ಶ್ರೀ ರಾಮಕೃಷ್ಣ ಹೆಗಡೆ.—ಈ ಎಲ್ಲ ಹುದ್ದೆಗಳಿಗೆ ಬೇರೆ ಬೇರೆ ಅಧಿಕಾರಿ ಇದ್ದಾರೆ ಎಂದು ತಿಳಿದುಕೊಳ್ಳಬಾರದು. ಒಂದು ಖಾತೆಗೆ ಒಬ್ಬ ಮುಖ್ಯ ಅಧಿಕಾರಿ ಇರಬೇಕಾಗುತ್ತದೆ. ಒಂದು ಹೆಸರಿನಿಂದ ಕರೆಯಬೇಕಾಗುತ್ತದೆ. ಆದರೆ ಅವರು ಬೇರೆ ಬೇರೆಯಾಗಿ ಇರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕೋರ್ಟಿನಲ್ಲಿ ಸ್ಟ್ಯಾಂಪ್ ಪೇಪರ್ ಸಿಕ್ಕುವುದಿಲ್ಲ, ಆದರೆ ಹೇಳುತ್ತೀರಿ ಕಮಿಷನರ್ ಆಫ್ ಸ್ಟ್ಯಾಂಪ್ಸ್ ಎಂದು. ಹೀಗೆ ಎಷ್ಟು ಬಾಬುಗಳಿವೆ? ಒಂದು ಇಲಾಖೆಯಲ್ಲಿ ನೂರು ಬಾಬುಗಳಿರುತ್ತವೆ. ಪೋಡಿ ಕೆಲಸ ಇರುತ್ತದೆ. ಪಹಣಿ ಕೆಲಸ ಇರುತ್ತದೆ, ಪೋಡಿ ಕೆಲಸಕ್ಕಾಗಿ ಕಮಿಷನರ್, ಪಹಣಿಗಾಗಿ ಒಬ್ಬ ಕಮಿಷನರ್ ಕಂದಾಯ ಜಮಾ ಮಾಡುವುದಕ್ಕೆ ಒಬ್ಬ ಕಮಿಷನರ್ ಬೇಡವೇ? ಈ ರೀತಿ ಮಾಡಿದರೆ ಒಂದು ಗ್ರಾಮಕ್ಕೆ ನೂರು ಜನ ಕಮಿಷನರ್ ನೇಮಕ ಮಾಡಬೇಕಾಗಬಹುದು. ಈಗ ಮೈನರ್ ಇರಿಗೇಷನ್ನಿಗೆ ಒಬ್ಬ ಚೀಫ್ ಎಂಜಿನಿಯರ್ ಇದ್ದಾರೆ. ಹಿಂದೆ ಎಂಜಿನಿಯರ್ ಇಲಾಖೆಗೆ ಒಬ್ಬ ಚೀಫ್ ಎಂಜಿನಿಯರ್ ಇದ್ದರು. ಆಗ್ಗೆ ಇರಿಗೇಷನ್ನಿಗೆ ಎಷ್ಟು ಜನ ಇದ್ದರು? ಇರಿಗೇಷನ್ ಇಲಾಖೆ ಈಗ ಹನುಮಂತಪ್ಪ ಕೈಯಲ್ಲಿ ಇದೆ ಎಂದು ಎಷ್ಟೋ ಕಡೆ ಕೋಟಿ ಕೋಟಿ ರೂಪಾಯಿ ಕೊಡುತ್ತಿದ್ದಾರೆ. ಈ ಯೋಜನೆಗಳಿಗೆ ಕಿವಿ, ಕಾಲು, ಕೈ ಇಲ್ಲ. ಈ ಯೋಜನೆಗಳ ಮೂಲಕ ಖಾತೆ ದೊಡ್ಡದಾಗಿದೆ. ನಿಜವಾಗಿಯೂ ಹೇಳಬೇಕಾದರೆ ಒಂದು ಸರಿಯಾದ ರೀತಿಯಲ್ಲಿ ಬೆಳವಣಿಗೆ ಇಲ್ಲ. ಅಲ್ಲಿ ಕೆಲಸ ಇರಬಹುದು. ಈಗ ಇರತಕ್ಕಂಥ ಸಿಬ್ಬಂದಿಗೆ ಕೆಲಸ ಎನ್‌ಟ್ರಸ್ಟ್ ಮಾಡಿ ಕೆಲಸ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಪ್ಲಾನಿಂಗ್ ಕಮಿಷನ್ ಅವರು ಹೇಳಿದ್ದಾರೆ, ಯಾರೋ ಸಲಹೆ ಮಾಡಿದ್ದಾರೆ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಎಸ್ಟ್ಯಾಬ್ಲಿಷಮೆಂಟ್ ಇಟ್ಟುಕೊಳ್ಳುವುದು ನಮ್ಮಂಥ ಬಡ ದೇಶಕ್ಕೆ ಒಂದು ದೊಡ್ಡ ಬಿಳಿ ಆನೆಯಾಗುತ್ತದೆ, ಇದು ಲಗ್ಷರಿ ಆಗುತ್ತದೆ ಎಂದು ಹೇಳುತ್ತೇನೆ. ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಸಹಸ್ರಾರು ಸಂಖ್ಯೆಯಲ್ಲಿ ಸಾವಿರಾರು ರೂಪಾಯಿ ಸಂಬಳ ಕೊಟ್ಟು ಅದಕ್ಕೆ ಹಣ ಒದಗಿಸಿ ದೇಶ ಕಾಪಾಡುವುದಕ್ಕೆ ಸಾಧ್ಯವಿದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. ಅದು ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ನಾನು ಇಷ್ಟಪಡುತ್ತೇನೆ.

ಇನ್ನು ಹೆಸರು ಇಲ್ಲದೇ ಇರತಕ್ಕಂಥ ಡಿಮಾಂಡ್ ಬಗ್ಗೆ ನಾನು ಹೇಳುತ್ತೇನೆ. 1965–66ನೇ ಇಸವಿಯ ಬಜೆಟ್ಟಿನಲ್ಲಿ ಬಡ್ಡಿ ಕೊಡುವುದಕ್ಕಾಗಿ 627 ಲಕ್ಷ ರೂಪಾಯಿ ಹಣ ಒದಗಿಸಿದ್ದೀರಿ. ಅದು ಸಾಲದೇ ಬರುತ್ತದೆ ಎಂದು 1,35,14.500 ರೂಪಾಯಿ ಕೊಡಿ ಎಂದು ಈ ಡಿಮಾಂಡಿನಲ್ಲಿ ಕೇಳಿದ್ದೀರಿ. ಅಂದರೆ ಒಟ್ಟು 7,62,14,500 ರೂಪಾಯಿ ಬಡ್ಡಿ ನಾವು ತೆರಬೇಕಾಯಿತು.

ಇನ್ನೊಂದು ವಿಷಯ. ಜಪಾನಿನಿಂದ ವಿದ್ಯುಚ್ಛಕ್ತಿ ಮೇಲೆ ನಡೆಯತಕ್ಕ ಟ್ರಾಕ್ಟರ್ಸ್ ಕೊಳ್ಳುವ ವಿಷಯ. ನಮ್ಮ ದೇಶದಲ್ಲಿ ನಡೆಯತಕ್ಕ ಕೃಷಿಯನ್ನು ಆಧುನೀಕರಣಗೊಳಿಸಬೇಕು ಎಂಬುದು ಆವಶ್ಯಕವಾಗಿದೆ. ಯಾಂತ್ರೀಕರಣ ಮಾಡುವುದು ವಿದ್ಯುತ್ ಶಕ್ತಿಯಿಂದ ಕೆಲಸ ಮಾಡುವುದು ಒಳ್ಳೆಯದು. ಈ ರೀತಿ ಯಾಂತ್ರೀಕರಣ ಮಾಡುವುದರಿಂದ ಎಲ್ಲ ಕೆಲಸಗಳನ್ನು ಮಾಡಲು ಸಾಧ್ಯವೇ ನಮ್ಮ ದೇಶದಲ್ಲಿ ಜನ ಸಂಖ್ಯೆ ಜಾಸ್ತಿ ಇದೆ. 20 ಲಕ್ಷ ಜನ ಅಗ್ರಿಕಲ್ಚರಲ್ ಲೇಬರರ್ಸ್ ಇದ್ದಾರೆ. ಅವರು ಒಂದು ಹಿಡಿ ಜೋಳ ಸಂಪಾದನೆ ಮಾಡುವುದಕ್ಕೆ ಹತ್ತು ಮನೆ ಭಿಕ್ಷೆ ಬೇಡುವ ಸ್ಥಿತಿಯಲ್ಲಿದ್ದಾರೆ. ಅವರಿಗೆ ಕೆಲಸವಿಲ್ಲ. ವರ್ಷದಲ್ಲಿ 365 ದಿವಸ ಕೆಲಸ ಕೊಡುವ ಗ್ಯಾರಂಟಿ ಇಲ್ಲ. ಅವರು ಬದುಕಿರಬೇಕು. ಅವರಿಗೆ ಡೋಲ್ ಕೊಡುವುದಿಲ್ಲ. ಹಾಗಾದರೆ ಈ 20 ಲಕ್ಷ ಜನ ಹೇಗೆ ಬದುಕಬೇಕು! ದೇಶದಲ್ಲಿ ವಿದ್ಯುತ್ ಶಕ್ತಿ ಉತ್ಪಾದನೆಯಾಗುತ್ತಿದೆ. ಕೋಟ್ಯಾಂತರ ರೂಪಾಯಿ ಬುಲ್‌ಡೋಜರ್ಸ್‌ಗಳಿಗೆ ಖರ್ಚುಮಾಡಿದ್ದೀರಿ. ಆದರೆ ಅವು ಸರ್ವೀಸ್‌ನಲ್ಲಿರದೆ ಸಿಕ್ ಆಗಿರುತ್ತವೆ. ರಿಪೇರಿ ಮಾಡುವುದಿಲ್ಲ. ಅವುಗಳನ್ನು ಕೊಂಡು ಆಂಧ್ರಕ್ಕೆ ಕೊಟ್ಟದ್ದಾಯಿತು. ಇದರ ಬಗ್ಗೆ ವಿಚಾರಮಾಡಬೇಕು. ಆದರೆ ಈ ಕೃಷಿ ಕೂಲಿಕಾರರನ್ನು ಏನು ಮಾಡಬೇಕು! ಫರ್ಟಿಲೈಜರ್ಸ್ ಕೊರತೆ ಇದೆಯೆಂದು ಈ ಕೃಷಿ ಕೂಲಿಕಾರರನ್ನು ಗೊಬ್ಬರಕ್ಕೆ ಹಾಕುತ್ತೀರಾ! ಪ್ರತಿಯೊಂದಕ್ಕೂ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡುವ ಯಂತ್ರಗಳನ್ನು ಉಪಯೋಗಿಸಿದರೆ ಸಾಮಾನ್ಯವಾಗಿ ಈ ಕೂಲಿಕಾರರಿಗೆ ಕೆಲಸವಿಲ್ಲದೆ ಅವರು ಹೊರೆಯಾಗಿ ಬಿಡುತ್ತಾರೆ. ಅವರ ಬಗ್ಗೆ ಏನು ಯೋಚನೆ ಮಾಡಿದ್ದೀರಿ! ಈ ಹೆಡಿನಲ್ಲಿ ಎಷ್ಟು ಹಣ ಇಟ್ಟಿದ್ದೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಯಾಂತ್ರೀಕರಣಕ್ಕೆ

(ಶ್ರೀ ಎಸ್. ಗೋಪಾಲ ಗೌಡ)

ವಿರೋಧವಾಗಿಲ್ಲ. ವಿದ್ಯುಚ್ಛಕ್ತಿಯ ಬಳಕೆಗೆ ನನ್ನ ವಿರೋಧ ಇಲ್ಲ. ಈ ಯಂತ್ರಗಳ ಬಳಕೆಗೆ ವಿದ್ಯುಚ್ಛಕ್ತಿಯನ್ನು ಯಾರು ಯಾರಿಗೆ ಕೊಡುತ್ತಿದ್ದೀರಿ ? ಯಾವ ದರದಲ್ಲಿ ಕೊಡುತ್ತಿದ್ದೀರಿ ? ಆ ವ್ಯವಸಾಯಗಾರರು ಯಾರು ? ಯಾವ ದಿಕ್ಕಿನಲ್ಲಿ ನಮ್ಮ ವ್ಯವಸಾಯ ಪದ್ಧತಿಯನ್ನು ತೆಗೆದುಕೊಂಡು ಹೋಗಬೇಕು ? ಇದನ್ನು ಪ್ಲಾನಿಂಗ್ ಕಮಿಷನ್ ಅವರು ತೀರ್ಮಾನ ಮಾಡಿದ್ದಾರೆಯೇ ಇದನ್ನು ರಾಜ್ಯ ಸರಕಾರ ತೀರ್ಮಾನ ಮಾಡಿದೆಯೇ ಎಂಬದನ್ನು ತಿಳಿದುಕೊಳ್ಳಬೇಕು ಎಂದು ಹೇಳಲು ಇಷ್ಟಪಡುತ್ತೇನೆ. ಇದಕ್ಕಾಗಿ ತಾವು.

State level :

Designation	*No. of posts*
Agricultural Engineer	1
Stenographer	1
I Dn. Clerk	1
Defedar	1

District level :

Asst. Agricultural Engineer	1
I Dn. Clerk-*cum*-Store Keeper	1
II Dn. Clerk	1
II Dn. Clerk-*cum*-Typist.	1
Peon	1
Jeep Driver	1
Watchman	1

Field Units :

Units for each District each consisting of	1
Implements Demonstrator Helpers	2

ಇವರುಗಳನ್ನು ನೇಮಿಸಿರುವುದು ನಮ್ಮ ರಾಜ್ಯದ ಹಣಕಾಸಿನ ಮೇಲೆ ಒಂದು ಹೊರೆಯಾಗಿದೆ. ಮುಚ್ಚುಬಿಸಿಯಿಂದ 175 ಯಂತ್ರಗಳನ್ನು ತರಿಸಿದ್ದಾರೆ. ಇವುಗಳನ್ನು ನೋಡಿಕೊಳ್ಳುವುದಕ್ಕೆ ಇವರುಗಳು ಇರುತ್ತಾರೆ. ಇವುಗಳನ್ನು ಪ್ರಚಾರ ಮಾಡುವುದಕ್ಕೆ ಒಂದು ಯೂನಿಟ್‌ನ್ನು ಮಾಡಿದ್ದಾರೆ. ಕಮಲಾ ತ್ರೀರಿಂಗ್ ಸರ್ಕಸ್ ರೀತಿಯಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಇವನ್ನು ತೆಗೆದುಕೊಂಡು ಹೋಗುತ್ತಾರೆ.

ಮನೆಗಳನ್ನು ಕಟ್ಟುವ ಬಗ್ಗೆ ನನಗೆ ಸಂತೋಷವಾಯಿತು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲ ಈ ರಾಜ್ಯ ಸರ್ಕಾರದವರು ಹರಿಜನರಿಗೆ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಪ್ರಯತ್ನಪಟ್ಟು ಅದು ಸಾಧ್ಯವಾಗದೆ, ಮೂರನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲ ಒಂದು ಕೋ-ಆಪರೇಟಿವ್ ಸೊಸೈಟಿಯನ್ನು, ಅಂದರೆ, ಷೆಡ್ಯೂಲ್ಡ್ ಕ್ಯಾಸ್ಟ್ ಹೌಸಿಂಗ್ ಕಾರ್ಪೊರೇಷನ್ ಸ್ಥಾಪನೆ ಮಾಡಿದರು. ಬಹುಶಃ ಅದಕ್ಕೆ ಚೇರ್‌ಮನ್ ನೇಮಕವಾಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದಕ್ಕಾಗಿ ಮೂರುವರೆ ಕೋಟಿ ರೂಪಾಯಿ ಖರ್ಚಾಗುತ್ತದೆ. ಹರಿಜನ ಗಿರಿಜನರಿಗೆ ಮೂರನೆ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷ ಕೊನೆಯ ತಿಂಗಳು ಮನೆ ಕಟ್ಟಲು ನಮ್ಮ ರಾಜ್ಯ ಸರ್ಕಾರದವರು ಒಂದು ಕಾರ್ಪೊರೇಷನ್ ಪ್ರಾರಂಭ ಮಾಡಿರುವುದು ಸಂತೋಷದ ವಿಷಯ. ಇದಕ್ಕಾಗಿ ಹಣ ಒದಗಿಸಿರುವುದನ್ನು ನೋಡಿ ಸಂತೋಷ ವ್ಯಕ್ತಪಡಿಸುತ್ತೇನೆ. ಇನ್ನು ಮೇಲಾದರೂ ಹರಿಜನರು, ಗಿರಿಜನರು ಗುಡಿಸಲನ್ನು ವ್ಯವಸ್ಥಿತವಾಗಿ ಕಟ್ಟಿಕೊಳ್ಳುವುದಕ್ಕೆ, ಸರಿಯಾಗಿ ಬದುಕುವುದಕ್ಕೆ ಸರ್ಕಾರದವರು ಸಹಾಯ ಮಾಡುತ್ತಾರೆಂದು ಆಶಿಸಬಹುದಾಗಿದೆ.

ಕೊನೆಯದಾಗಿ ಈ ಸಾಲದ ವಿಷಯವನ್ನು ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಇದರ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ಇಟ್ಟಿದ್ದೇನೆ ಎಂದು ಹಣಕಾಸಿನ ಸಚಿವರು ಹೇಳಿದರು, ನನಗೆ

ಮಾತ್ರ ಸ್ಪಷ್ಟವಾದ ಚಿತ್ರ ಕಂಡುಬರಲಿಲ್ಲ. ಲೋನ್ ಬೇರಿಂಗ್ ಇಂಟರೆಸ್ಟ್, ಇದನ್ನು ಕೊಟ್ಟೇ ತೀರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಕೊಡುವುದಕ್ಕಾಗುವುದಿಲ್ಲವೆಂದರೆ ಭದ್ರಾವತಿ ಕಾರ್ಖಾನೆ ಮಾರಿ ಕೊಡಿ ಎಂದು ಹೇಳುತ್ತಾರೆ. ಇದು ಮನೆ ಕಟ್ಟಿ ಅದಕ್ಕೆ ಹೆಚ್ಚು ಬೆಲೆ ಬಂತು ಎಂದು ಮತ್ತೆ ಅದನ್ನು ಮಾರಿದಂತಾಗುತ್ತದೆ. ಅಲ್ಲದೆ ಹೆಣ್ಣಿನವರು ಆಸ್ತಿ ಎಷ್ಟು ಇದೆ ಎಂದು ಕೇಳಿದರೆ ವಿಧಾನಸೌಧ ನನ್ನದೇ, ಅದರ ಹಿಂದಿರುವ ಕಟ್ಟಡಗಳು ನನ್ನದೇ ಎಂದು ಹೇಳಿದರೆ ಅಮೇಲೆ ಬಹಳ ಕಷ್ಟವಾಗುತ್ತದೆ. ಕೊನೆಗೆ ಮೋಸ ಹೋಗುವವರು ನಾವೇ. Ways and means Advances from the Reserve Bank of India 39,40,00,000—Loans: 3,04,35,500 Loans from the National Co-operative Development Corporation: 4,12,000—Total: 42,61,05,500 ಗಳನ್ನು ನಾವು ಕೊಡಬೇಕೆಂದು ಹೇಳಿದ್ದಾರೆ.

The balance of expired loans remaining unpaid at the end of September 1965 is Rs. 13,24,888. It is expected that a sum of Rs. 6.00 lakhs would be paid during the year. As there is only on a provision of Rs. 3.00 lakhs in the Budget, an additional allotment of Rs. 3.00 lakhs is required.

The Budget provision both for the payment of Ways and Means Advances and the overdraft to the Reserve Bank of India is Rs. 60.00 Crores. Acccording to the procedure of gross budgeting, provision will have to be made to the total repayments not taking into account the receipts. The Ways and Means Advances repaid to the Reserve Bank of India including the overdraft amounts to Rs. 66.35 crores to end of January 1966. The total transactions to end of March 1966 may be of the Order of Rs. 99.40 crores which includes *re* payment of Rs. 19.40 crores towards clearance of ways and means advances outstanding by disposal of Securities. Additional appropriation of Rs. 39.40 crores is, therefore, necessary.

ಇದರ ಮೇಲೆ ನಾನು ವಿಮರ್ಶೆ ಮಾಡಬೇಕಾದ್ದು ಅಗತ್ಯವಿಲ್ಲವೆಂದು ತಿಳಿಯುತ್ತೇನೆ.

1965—66ನೇ ಸಾಲಿನ ಹಣಕಾಸಿನ ಸ್ಥಿತಿ, ವಸೂಲಿ ಸ್ಥಿತಿ ಏನಿತ್ತು, ಅದರ ಬಗ್ಗೆ ಶ್ರೀಮಾನ್ ಜತ್ತಿಯವರು ಈ ಸದನದ ಮುಂದೆ ಮಂಡಿಸುತ್ತಾ 1964—65 ಸಾಲಿನ ಆಯವ್ಯಯದ ಅಂದಾಜು ಪಟ್ಟಿ ಎಷ್ಟು ಅವಾಸ್ತವಿಕವಾಗಿತ್ತು, ಎಷ್ಟು ನಿಜಾಂಶಗಳನ್ನು ಅದು ಮರೆಮಾಚಿತ್ತು, ವಾಸ್ತವ ಸ್ಥಿತಿಯನ್ನು ಜನತೆಯ ಮುಂದೆ ಇಟ್ಟಿರಲಿಲ್ಲ ಎಂಬುದು ಈ ಒಂದು ಅನುಪೂರಕ ಅನುದಾನದ ಅಂದಾಜುಗಳ ಪಟ್ಟಿ ಬಯಲು ಮಾಡುತ್ತದೆ. ಅದರ ಆಧಾರದ ಮೇಲೆ ನಮ್ಮ ಹಣಕಾಸಿನ ಸಚಿವರು ಮುಂದಿನ ಪರಾಭವ ಸಂವತ್ಸರದ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಎಷ್ಟರಮಟ್ಟಿನ ಟೊಳ್ಳು, ಎಷ್ಟರಮಟ್ಟಿನ ಒಂದು ಅವ್ಯವಸ್ಥೆ ಎಷ್ಟರಮಟ್ಟಿನ ಅಭದ್ರತೆ ಇದೆ, ಮತ್ತು ಅಭದ್ರತೆಯ ಮೇಲೆ ಅವ್ಯವಸ್ಥೆಯ ಮೇಲೆ ಈ ಒಂದು ಸಾಲ ಮತ್ತು ಬಡ್ಡಿಗಳ ಮೇಲೆ ಈ ಸದನವು ಹೊಸ ವರ್ಷದ ಉಳಿತಾಯದ ಆಯುವ್ಯಯ ಸ್ಥಿತಿಯನ್ನು ಮಾನ್ಯಸಚಿವರು ನಿಲ್ಲಿಸಿದ್ದಾರೆ. ಅದು ಎಷ್ಟು ಭದ್ರವಾಗಿರಬಲ್ಲದು, ನಮ್ಮ ಬೇಡಿಕೆಗಳನ್ನು ಈ ಆಯುವ್ಯಯ ಎಷ್ಟರಮಟ್ಟಿಗೆ ಪೂರೈಸಬಲ್ಲದು ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿದೆ.

11-30 A.M.

ಇವೊತ್ತಿನ ದಿವಸ ಸದ್ಯದ ಪರಿಸ್ಥಿತಿ, ಹಣದ ಕೊರತೆ, ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ಗಮನದಲ್ಲಿಟ್ಟುಕೊಂಡು ಗಂಭೀರವಾಗಿ ವಿಚಾರ ಮಾಡಿ ಕೇವಲ ನನ್ನನ್ನು ನಂಬಿ, ನನ್ನನ್ನು ನಂಬಿದವರು ಯಾರೂ ಕೆಡುವುದಿಲ್ಲ ಎನ್ನುವ ಆಶ್ವಾಸನೆ ಪದೇ ಪದೇ ಕೊಡುವುದಕ್ಕೆ ಬದಲಾಗಿ......

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ನಂಬಿದವರು ಕೆಡುವುದಿಲ್ಲ ಎಂದು ಹೇಳಲಿಲ್ಲ. ನಂಬಿಕೆ ಇಲ್ಲದವರು ಕೆಡುತ್ತಾರೆ ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಎರಡು ವಿಚಾರ ಇದೆ, ಆಸ್ತಿಕರು ಮತ್ತು ನಾಸ್ತಿಕರು ಎಂದು ಇವರು ಇಲ್ಲಿ ಹೇಗೆ ಸೇರುತ್ತಾರೋ ಅವರು ಅಲ್ಲಿ ಹಾಗೆ ಸೇರುತ್ತಾರೆ. ನಾನು ಅಂತೂ ಅಲ್ಲಿರುವುದು ಸಾಧ್ಯವಿಲ್ಲ. ತಮ್ಮಲ್ಲಿ ಆತ್ಮವಿಶ್ವಾಸ ಇದೆ. ನಮ್ಮಲ್ಲಿ ನಿಮ್ಮ ಮೇಲೆ ವಿಶ್ವಾಸ

(ಶ್ರೀ ಎಸ್. ಗೋಪಾಲಗೌಡ)

ಹುಟ್ಟುವಂತೆ ಏನಾದರೂ ಮಾಡಬಲ್ಲಿರಾ ? ತಾವು ಕೊಟ್ಟಿರುವ ಆಶ್ವಾಸನೆಯನ್ನು ಸಂಪೂರ್ಣಗೊಳಿಸಲು ಏನಾದರೂ ಮಾಡಬಲ್ಲಿರಾ ? ಮಾನ್ಯ ಹಣಕಾಸಿನ ಸಚಿವರು ತಮ್ಮನ್ನು ಬಹಳ ಮುಕ್ತಕಂಠದಿಂದ ಹೊಗಳಿದರು. ತಾವು ದೇಶದ ನಾಯಕರಲ್ಲಿ ಒಬ್ಬರು. ನಿಮ್ಮಂಥವರು ದೊರಕಿರುವುದು ಪುಣ್ಯ, ಭಾಗ್ಯ ಎಂದು ಹೇಳಿದರು. ಆ ಮಾತನ್ನು ಒಪ್ಪುತ್ತೇವೆ. ಅದು ವಾಸ್ತವ ವಿಚಾರ. ವಾಸ್ತವ ಸ್ಥಿತಿ ತಮಗೆ ಅರಿವು ಆಗಿದೆಯೇ ? ತಾವು ಕೊಟ್ಟಂಥ ಆಶ್ವಾಸನೆ ಎಂದರೆ, ಕೃಷ್ಣಾ ಅಣೆಕಟ್ಟನ್ನು ಪ್ರಾರಂಭ ಮಾಡುವುದು, ಹೊಸಪೇಟೆ ಉಕ್ಕಿನ ಕಾರ್ಖಾನೆ ಪ್ರಾರಂಭ ಮಾಡುವುದು, ಅಲ್ಯೂಮಿನಿಯಂ ಕಾರ್ಖಾನೆ ಫರ್ಟಿಲೈಸರ್ಸ್, ಫ್ಯಾಕ್ಟರಿ ಆರಂಭ ಮಾಡುವುದು, ಭೂಸುಧಾರಣೆ ಜಾರಿಗೆ ತರುವುದು ಇದಕ್ಕೆಲ್ಲಾ ಸಿದ್ಧತೆಗಳನ್ನು ಈ ಕಳೆದ ಐದು ವರ್ಷಗಳಲ್ಲಿ ಮಾಡಿಕೊಂಡಿದ್ದೀರಾ ? ಇನ್ನೂ ಎಷ್ಟು ವರ್ಷ ಸಿದ್ಧತೆ ಮಾಡಲುಬೇಕು ? ಇದೇ ಕಾಲಕ್ಕೆ ಜನತೆ ಕೊಂಡುಕೊಳ್ಳುವ ಶಕ್ತಿ ಕುಸಿದು ಬಿದ್ದಿದೆ. ಇವೊತ್ತಿನ ದಿವಸ ಅಭಾವ ಸ್ಥಿತಿಯಲ್ಲಿ ಅವರ ಗತಿ ಏನಾಗುತ್ತದೆ ? ಇದನ್ನೆಲ್ಲಾ ಪರಿಶೀಲನೆ ಮಾಡಬೇಕು. ಅನುಪೂರಕ ಅನುದಾನದ ಪಟ್ಟಿಯನ್ನು ನಮ್ಮ ಮುಂದೆ ಮಂಡಿಸಿದ್ದೀರಿ. ನಾವು ಒಪ್ಪಲಿ ಒಪ್ಪದೇ ಇರಲಿ ಅಂಗೀಕಾರವಾಗುತ್ತದೆ. ತಾವು ಹಣವನ್ನು ಕೊಡುತ್ತೀರಿ, ಅಡ್ಜಸ್ಟ್‌ಮೆಂಟ್ ಆಗುತ್ತದೆ. ಆಗಲೇ ಸೂಚಿಸಿರತಕ್ಕ ಹೊಸ ಹೊಸ ಇಲಾಖೆಗಳು ಕೆಲವು ಅಸ್ತಿತ್ವಕ್ಕೆ ಬಂದಿವೆ. ಕೆಲವೊಂದನ್ನು ಅಸ್ತಿತ್ವಕ್ಕೆ ತರುವವರಿದ್ದೀರಿ. ಶ್ರೀಮಾನ್ ಶಿವಪ್ಪನವರು ಕೆಲವು ವಿಷಯಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಕಾಲುವೆಗಳನ್ನೂ ನಾಲೆಗಳನ್ನೂ ಬೆಂಗಳೂರಿನಲ್ಲಿಯೇ ತೋಡಿ, ಖರ್ಚು ಮಾಡುವುದಕ್ಕೆ ಹೊರಟಿರುವುದು, ಗೋರ್ಮೆಂಟ್ ಸ್ವತ್ತುಗಳಿಗೆ ಕಾಲನಿ ತೆರೆದು ಖರ್ಚುಮಾಡುವುದು, ಖರ್ಚು ಮಾಡಬಾರದು ಎಂದು ಹೇಳುವುದಿಲ್ಲ. ಮನೆಗಳನ್ನು ನಿರ್ಮಾಣ ಮಾಡಿ ಅಧೀನರು ಹೋಗುವುದು ಇವೆಲ್ಲಾ ಸರಿಯೇ ಎಂದು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಇದನ್ನು ರಾಜಕೀಯ ದೃಷ್ಟಿಯಿಂದ ಹೇಳುತ್ತಿಲ್ಲ. ನಮ್ಮ ದೇಶದ ಭವಿಷ್ಯ ಸುರಕ್ಷಿತವಾಗಿರಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇಷ್ಟು ಹೇಳಿ ಈ ಅನುಪೂರಕ ಅನುದಾನಗಳನ್ನು ನಾನು ವಿರೋಧಿಸುತ್ತೇನೆ.

ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಸಭಾಪತಿಗಳೇ, ಮೂರನೇ ಕಂತಿನ ಹೆಚ್ಚುವರಿ ಬೇಡಿಕೆಗಳು ನಮ್ಮ ಮುಂದಿವೆ. ಮಾನ್ಯ ಸ್ನೇಹಿತರು ಅದರ ಸ್ಪಷ್ಟವಾದ ಅಭಿಪ್ರಾಯಗಳನ್ನು ಅನೇಕ ಬಾಬುಗಳ ಮೇಲೆ ನಮ್ಮ ಮುಂದೆ ಇಟ್ಟಿದ್ದಾರೆ. ಮೂರನೆಯ ಕಂತಿನಲ್ಲಿ ತಂದಿರತಕ್ಕ ಬೇಡಿಕೆಗಳನ್ನು ನಾವು ನೋಡುವುದಾದರೆ, ಈ ವರ್ಷದ ರೆವಿನ್ಯೂ ರಿಸೀಟ್ಸ್ ಏನು ಇದೆ ಅದರ ಅರ್ಧದಷ್ಟು ಹಣವನ್ನು ಹೆಚ್ಚುವರಿ ಬೇಡಿಕೆಗಳ ಮುಖಾಂತರ ಕೇಳಲಾಗಿದೆ. ಅದಕ್ಕನುಗುಣವಾಗಿ ಆದಾಯ ಎಷ್ಟು ಇದೆ ಎಂಬುದು ಸ್ಪಷ್ಟವಾಗಿಲ್ಲ. ಇವೊತ್ತಿನ ದಿವಸ ರೆವೆನ್ಯೂ ಬಾಬತಿನಲ್ಲಿ ಖರ್ಚು ಮಾಡತಕ್ಕಂಥ ಹಣ ಸುಮಾರು ಹತ್ತು ಕೋಟಿ ರೂಪಾಯಿ ಖರ್ಚು ಮಾಡುವುದರ ಪರಿಣಾಮವಾಗಿ ಏನು ಆದಾಯ ಬರುತ್ತದೆ ಎನ್ನುವ ವಿಚಾರವನ್ನು ಸ್ಪಷ್ಟಪಡಿಸಿಲ್ಲ. ಒಟ್ಟಿನಲ್ಲಿ 1965–66ನೇ ಸಾಲಿನ ಓಪನಿಂಗ್ ಬ್ಯಾಲೆನ್ಸ್ ಹತ್ತು ಕೋಟಿ ಖೋತಾ ಅದರ ಮೇಲೆ ಹೆಚ್ಚಿನ ದುಷ್ಪರಿಣಾಮವನ್ನು ಮಾಡತಕ್ಕಂಥ ರೀತಿಯಲ್ಲಿ ಈ ಹೆಚ್ಚಿನ ಬೇಡಿಕೆಗಳು ಮುಂದಿಡಲ್ಪಟ್ಟಿವೆ. ಸ್ವಾಮಿ, ಅನೇಕ ಬಾಬತುಗಳ ಖರ್ಚನ್ನು ಈ ವರ್ಷ ಎಂದರೆ 1966-67ರ ಆಯುವ್ಯಯ ಪಟ್ಟಿಯಲ್ಲಿ ಸೇರಿಸಬಹುದಾಗಿತ್ತು. ಅದರಲ್ಲಿ ಒಂದು ಚತುರತೆ ಕಾಣುತ್ತದೆ. ಮುಂದಿನ ವರ್ಷದ ಆಯುವ್ಯಯ ಪಟ್ಟಿಯಲ್ಲಿ ಒಂದು ಕೋಟಿ 60 ಲಕ್ಷ ಸರ್‌ಪ್ಲಸ್ ಇದೆ ಎನ್ನುವ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅನೇಕ ಬಾಬತುಗಳನ್ನು ಈ ಆಯುವ್ಯಯ ಪಟ್ಟಿಯಲ್ಲಿ ಸೇರಿಸಿದ್ದೇ ಆದರೆ, ನಿಜವಾಗಿಯೂ ಎಷ್ಟು ಖೋತಾ ಬೀಳುತ್ತದೆ ಎಂದು ಸ್ಪಷ್ಟವಾಗುತ್ತದೆ. ಕ್ಲೋಸಿಂಗ್ ಬ್ಯಾಲೆನ್ಸ್ ಓಪನಿಂಗ್ ಬ್ಯಾಲೆನ್ಸ್ ಮೇಲೆ ಒಂದು ಕೆಟ್ಟ ಪರಿಣಾಮ ಈ ಹೆಚ್ಚುವರಿ ಬೇಡಿಕೆ ಮತ್ತು ಖರ್ಚು ಮಾಡುತ್ತೇವೆ ಎನ್ನುವುದರಿಂದ ಆಗುತ್ತದೆ. ಅಂದಮೇಲೆ ಹಣಕಾಸಿನ ಪರಿಸ್ಥಿತಿ ಹದಗೆಡುವುದಕ್ಕೆ ಇದು ಕಾರಣ ಎಂದು ಸ್ಪಷ್ಟವಾಗಿ ಅಭಿಪ್ರಾಯಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ 1960—61ನೇ ಸಾಲಿನ ಈಚೆಗೆ ಬಂದಿರತಕ್ಕ ಆಡಿಟ್ ವರದಿಗಳನ್ನು ನೋಡುವುದಾದರೆ, ಸರ್ಕಾರದವರು ತಂದಿರತಕ್ಕ ಹೆಚ್ಚುವರಿ ಬೇಡಿಕೆಗಳು ನೂರಾರು ಸಂದರ್ಭಗಳಲ್ಲಿ ಅನವಶ್ಯಕ ಎಂದು ಅಲ್ಲಿ ಉಲ್ಲೇಖವಾಗಿರುವುದು ಗೊತ್ತಾಗುತ್ತದೆ. ಅಂದಮೇಲೆ ಒಂದು ನಿಯಮಬದ್ಧವಾದ ವೆಚ್ಚ ಮಾಡುವುದರ ಬಗ್ಗೆ ಸರ್ಕಾರದ ಹತೋಟಿ ಕಡಿಮೆ ಇದೆ ಕೊರತೆ ಇದೆ ಎಂಬುದು ಕಾಣುತ್ತದೆ. ಹಣಕಾಸಿನ ವಿಚಾರದ ಮೇಲೆ ಹತೋಟಿ ಇಲ್ಲದೆ ಇರುವುದರ ಪರಿಣಾಮವಾಗಿ ಇಷ್ಟೊಂದು ನ್ಯೂನತೆಗಳು ಕಂಡುಬರುತ್ತವೆ ಎಂದು ನಾನಾದರೂ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಅನೇಕ ಬಾಬತುಗಳಲ್ಲಿ ಇರತಕ್ಕಂಥ ದುಡ್ಡು ಖರ್ಚು ಆಗುತ್ತದೋ ಇಲ್ಲವೋ ಎನ್ನುವ ವಿಚಾರವನ್ನು ಪರಿಶೀಲನೆ ಮಾಡದೆ ಅದೇ ಬಾಬತುಗಳಿಗೆ ಹೆಚ್ಚುವರಿ ಬೇಡಿಕೆಗಳನ್ನು ಮಂಡಿಸತಕ್ಕ ಅನೇಕ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ಇದರಿಂದ ಮುಂಜಾ

ಗರೂಕತೆ ಕ್ರಮ ಎಷ್ಟರಮಟ್ಟಿಗೆ ಮುಖ್ಯ ಅಧಿಕಾರಿಗಳಿಗಾಗಲಿ, ಹಣಕಾಸಿನ ಇಲಾಖೆಯವರಾಗಲಿ ವಹಿಸುತ್ತಿದ್ದಾರೆ ಎನ್ನುವುದನ್ನು ತಾವು ನೋಡಬಹುದು. ಹಣಕಾಸಿನ ಪರಿಸ್ಥಿತಿ ಇಷ್ಟು ತೀರ ಹದಗೆಡುವುದಕ್ಕೆ ಇದು ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕಾರಣ ಇಷ್ಟೆ. ಅನೇಕ ಬಾಬತುಗಳಲ್ಲಿ ಕೊಟ್ಟಿರತಕ್ಕ ಹಣದಲ್ಲಿ ಡಿಸೆಂಬರ್ ಒಳಗೆ ಎಷ್ಟು ಖರ್ಚು ಮಾಡಿದ್ದೇವೆ, ಅದೇ ರೀತಿ ಮಾರ್ಚಿ ಆಖೈರು ಒಳಗೆ ಖರ್ಚು ಮಾಡಬಹುದು. ಎಷ್ಟು ಸರೆಂಡರ್ ಮಾಡಬಹುದು, ಇನ್ನೂ ಹೆಚ್ಚಿಗೆ ಖರ್ಚು ಮಾಡುವ ಪ್ರಮೇಯ ಬಂದರೆ, ಹೆಚ್ಚು ವರಿ ಬೇಡಿಕೆ ಮುಖಾಂತರ ಖರ್ಚು ಮಾಡಬೇಕು ಎಂದು ಮುಂಜಾಗರೂಕತೆ ಎಲ್ಲಿಯವರೆಗೆ ವಹಿಸುವುದಿವೋ ಅಲ್ಲಿಯವರೆಗೆ ಅವ್ಯವಸ್ಥೆ ಇರುತ್ತದೆ ಎಂದು ಸ್ಪಷ್ಟವಾಗಿ ತಿಳಿಸುವದಕ್ಕೆ ಇಷ್ಟಪಡುತ್ತೇನೆ. ಹಣಕಾಸಿನ ಪರಿಸ್ಥಿತಿ ಎಷ್ಟೊಂದು ತೀರ ಹದಗೆಟ್ಟಿದೆ ಎನ್ನುವ ವಿಚಾರ ನೋಡಬೇಕು. ಯಾವ ಯಾವ ಬಾಬತುಗಳಲ್ಲಿ ಅಡ್ಜಸ್ಟ್‌ಮೆಂಟ್ ಆಗುತ್ತದೆ ಎಂದು ತಿಳಿದುಕೊಳ್ಳದೆ ವೆಚ್ಚ ಮಾಡುವುದರಲ್ಲಿ ಅರ್ಥವಿಲ್ಲ. ಯಾವ ಯಾವ ಬಾಬತುಗಳ ಅಡ್ಜಸ್ಟ್‌ಮೆಂಟ್ ಆಗುತ್ತದೆ, ಯಾವ ಯಾವ ಬಾಬತುಗಳಲ್ಲಿ ಕೇಂದ್ರ ಸರ್ಕಾರದವರ ನೆರವು ಸಿಕ್ಕುತ್ತದೆ, ಹಣವನ್ನು ವೆಚ್ಚ ಮಾಡುವುದರ ಪರಿಣಾಮವಾಗಿ ಏನು ಒಂದು ಆದಾಯ ಬರುತ್ತದೆ ಎಂಬ ವಿಷಯವನ್ನು ವ್ಯಕ್ತಪಡಿಸದೇ ಇದ್ದರೆ ನಿಜವಾಗಿಯೂ ಅವರು ಹಣಕಾಸಿನ ಸ್ಥಿತಿಯನ್ನು ನಿರ್ದಿಷ್ಟವಾಗಿ ನಮ್ಮ ಮುಂದೆ ಇಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಲ್ಲಿಯವರೆಗೆ ಸ್ಪಷ್ಟಪಡಿಸುವುದಿಲ್ಲವೋ ಅಲ್ಲಿಯವರೆಗೆ ಹಣಕಾಸಿನ ಪರಿಸ್ಥಿತಿಯ ನಿಜವಾದ ಚಿತ್ರವನ್ನು ತಿಳಿಯುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಎನ್ನುವ ವಿಚಾರ ಗೋಚರವಾಗುತ್ತದೆ. ನಂಬರ್ ಇಲ್ಲದೆ ಇರತಕ್ಕ ಡಿಮ್ಯಾಂಡ್‌ನಲ್ಲಿ 1 ಕೋಟಿ 98 ಲಕ್ಷ 85 ಸಾವಿರ ರೂಪಾಯಿ ಬಡ್ಡಿಗಾಗಿ ಕೊಡುತ್ತೀರಿ. ಹೀಗೆ ಬಡ್ಡಿ ಕೊಟ್ಟು ಸಾಲವನ್ನು ತೆಗೆದುಕೊಂಡರೆ, ಅದನ್ನು ಪ್ರತಿಫಲ ಕೊಡುವಂಥ ಕೆಲಸಗಳಿಗೆ ವೆಚ್ಚ ಮಾಡಿ ಅದಕ್ಕೆ ಬಡ್ಡಿ ಕೊಡುವುದು ನ್ಯಾಯ ಮತ್ತು ಧರ್ಮ ಇವೊತ್ತಿನ ದಿವಸ Interest on Shortfalls on the cash balances with the Reserve Bank of India ಈ ಬಾಬಿಗಾಗಿ 31,24,000 ರೂಪಾಯಿ ಬಡ್ಡಿ ಕೊಡಬೇಕಾಗಿದೆ. ನಿಮಗೂ ರಿಸರ್ವ್ ಬ್ಯಾಂಕಿಗೂ ಆದ ಒಪ್ಪಂದದ ಪ್ರಕಾರ ಸರ್ಕಾರದ ಲೆಕ್ಕದಲ್ಲಿ 24 ಲಕ್ಷ ಬ್ಯಾಲೆನ್ಸ್ ಪ್ರತಿ ಶುಕ್ರವಾರ ಇರಬೇಕು. ಬೇರೆ ದಿವಸದಲ್ಲಿ 20 ಲಕ್ಷ ಇರಬೇಕು ಎಂದು ಇದೆ.

ಈ ಒಪ್ಪಂದ 170 ಬಾರಿ ಉಲ್ಲಂಘನೆಯಾಗಿದೆ. ಆ ಮೊಬಲಗಿಗೆ ರಿಸರ್ವ್ ಬ್ಯಾಂಕಿನವರು ಬಡ್ಡಿ ಹಾಕುತ್ತಾರೆ. ಇಂತಹ ಕಾರಣಕ್ಕೆ 31 ಲಕ್ಷ 24 ಸಾವಿರ ರೂಪಾಯಿಯನ್ನು ಅನ್ಯಾಯವಾಗಿ ಕೊಡಬೇಕಾಗುತ್ತದೆ. ಈ ಸಾಲಕ್ಕೆ ಕೊಡತಕ್ಕ ಬಡ್ಡಿ ವಿಷಯದಲ್ಲಿ ಮುಂಜಾಗರೂಕತೆ ವಹಿಸಿದ್ದರೆ ಈ ಅನಾವಶ್ಯಕವಾಗಿ ಕೊಡುವಂತಹ 31,24,000 ರೂಪಾಯಿಯನ್ನು ಉಳಿಸಬಹುದಿತ್ತು. ಇದು ಯಾರಿಗೆ ಸಂಬಂಧಪಟ್ಟದ್ದು ! ಎಂದು ನಾನು ಇಲ್ಲಿ ಕೇಳಬೇಕಾಗುತ್ತದೆ. ನಿರಾಯಾಸವಾಗಿ ಹಣವನ್ನು ತಂದು ಉಪಯೋಗಿಸಿದರೆ ಮತ್ತು ಅದಕ್ಕೆ ಬಡ್ಡಿ ಕೊಟ್ಟರೆ, ಆಗ ನಮಗೆ ಅದು ಅರ್ಥವಾಗುತ್ತದೆ. ನಾವು ಸರಿಯಾಗಿ ಮುಂಜಾಗರೂಕತೆ ವಹಿಸದೆ, ಸರಿಯಾದ ರೀತಿಯಲ್ಲಿ ಹಣದ ವಿಷಯದಲ್ಲಿ ಪರಿಶೀಲನೆ ಮಾಡದೆ ಇರುವ ಕಾರಣವೇ ನಾವು ಈ 31,24,000 ರೂಪಾಯಿ ಬಡ್ಡಿಯನ್ನು ಕೊಡಬೇಕಾಯಿತು. ಇದು ನಿಜವಾಗಿಯೂ ದೇಶದ ಜನತೆಯ ಮೇಲೆ, ಜನತೆಯ ಹೊಟ್ಟೆಯ ಮೇಲೆ ಹೊಡೆದಹಾಗೆ ಆಗುತ್ತದೆ. ಕಳೆದ ನಾಲ್ಕಾರು ವರ್ಷಗಳಲ್ಲೂ ಕೂಡ ಇಂತಹ ಅನೇಕ ರೀತಿಯ ವಿಚಾರಗಳು ನಡೆದಿವೆ. ಮತ್ತು ಅದನ್ನು ಈ ಮಾನ್ಯ ಸಭೆಯಲ್ಲಿ ತಂದು ಇದರ ಒಪ್ಪಿಗೆಯನ್ನು ಪಡೆಯುವುದಕ್ಕೆ ಒಂದು ರೀತಿ ಇದೆಯೇ, ಒಂದು ನ್ಯಾಯವಿದೆಯೇ ? ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಇದೇ ರೀತಿ ' ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್‌ಸ್ ' 10,38,200 ಇದೆ. ಈ ತರವ ಅಡ್ವಾನ್ಸ್‌ನ ಆಗತ್ಯವಾದರೂ ಏನಿತ್ತು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಯಾವ ಒಂದು ಪ್ರತಿಫಲ ಕೊಡದಿರತಕ್ಕ ಕೆಲಸಗಳಿಗೆ, ಬಜೆಟಿನಲ್ಲಿ ಸೇರಿರಲಿ, ಸೇರದಿರಲಿ, ಪ್ರಭಾವಕ್ಕೊಳಗಾಗಿ, ಮಧ್ಯಕಾಲದಲ್ಲಿ ಮಂಜೂರಾತಿಯನ್ನು ಕೊಡುವುದು ಏತಕ್ಕೆ ಮತ್ತು ಹಣ ಇಲ್ಲದ ಮೇಲೆ ಅಷ್ಟೊಂದು ಹಣವನ್ನು ತೆಗೆದುಕೊಳ್ಳುವುದು ಈ ಅವ್ಯವಸ್ಥೆಗೆ ಕಾರಣ ಎಂದು ನಾನು ಹೇಳುತ್ತೇನೆ. ಈ ಎಲ್ಲ ವಿಚಾರಗಳಲ್ಲೂ ನಾವು ಮುಂಜಾಗರೂಕತೆ ವಹಿಸಿದ್ದರೆ ಈ ಅನಾವಶ್ಯಕವಾಗಿ ಕೊಡುವಂತಹ ಬಡ್ಡಿಯನ್ನು ತಪ್ಪಿಸಬಹುದಾಗಿತ್ತು ಎಂದು ನಾನಾದರೂ ಹೇಳುತ್ತೇನೆ.

ಇನ್ನು ಇಲೆಕ್ಟರರ್ ರೋಲ್ಸ್ ಪ್ರಿಂಟ್ ಮಾಡುವುದಕ್ಕೆ 60 ಸಾವಿರ ಬೇಕು ಎಂದು ಬಜೆಟಿನಲ್ಲಿ ಕೇಳಿದ್ದರು. ಈಗ ನಾಲ್ಕೈದರಷ್ಟು ಖರ್ಚಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಒಂದು 5-10 ಪರ್‌ಸೆಂಟ್ ಹೆಚ್ಚು ಕಡಿಮೆಯಾಗಿದ್ದರೆ ಒಪ್ಪಿಕೊಳ್ಳಬಹುದು, ಆದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವೆಚ್ಚವಾಗಬೇಕಾದರೆ ಇವರು ಎಷ್ಟು ಮುಂಜಾಗರೂಕತೆ ವಹಿಸುತ್ತಾರೆ ಎಂಬುದು ಅರ್ಥವಾಗುತ್ತದೆ. ಸಿಬ್ಬಂದಿಯ ವಿಚಾರವಾಗಿ ನಿನ್ನೆ ಮಾನ್ಯ ಮಿತ್ರರನೇಕರು ವ್ಯಾಖ್ಯಾನ ಮಾಡಿದ್ದಾರೆ. ನಾವು ಮಿತವ್ಯಯ ಮಾಡಬೇಕು, ಆದಷ್ಟು ಅನಾವಶ್ಯಕ ಖರ್ಚುಗಳನ್ನು ಕಡಿಮೆ

(ಶ್ರೀ ಜಿ. ವಿ. ಗೌಡ)

ಮಾಡಬೇಕು ಎನ್ನುವಾಗ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಇಲೆಕ್ಟೊರಲ್ ರೂಲ್ಸಿಗೆ ಖರ್ಚು ಮಾಡುವುದು ತೀರಾ ಅನ್ಯಾಯ. ಇವತ್ತು ಕಂಟೆಂಜೆನ್ಸಿಯಿಂದ ತೆಗೆದಂತಹ ಈ ಹಣವನ್ನು ನಾವು ತುಂಬಬೇಕಾದುದು ನಮ್ಮ ಧರ್ಮ. ಇವತ್ತು ಕೇಳಿರತಕ್ಕ 40-50 ಕೋಟಿ ರೂಪಾಯಿಯನ್ನು 66-67ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿಸಬಹುದಾಗಿತ್ತು. ಆದರೆ ಕಂಟೆಂಜೆನ್ಸಿಯಿಂದ ತೆಗೆದದ್ದು ಕೇವಲ 8-10 ಲಕ್ಷ ಮಾತ್ರ. ಈ ಹಣವನ್ನು ಕಂಟೆಂಜೆನ್ಸಿಯಿಂದ ತೆಗೆದು ಖರ್ಚು ಮಾಡಿದ್ದರೆ ಅದನ್ನು ವಾಪಸ್ಸು ತುಂಬಬಹುದಿತ್ತು ಮತ್ತು ಸಭೆ ಒಪ್ಪಿಗೆ ಕೊಡಬಹುದಿತ್ತು. ಆದರೆ ಇಷ್ಟೊಂದು ಹಣವನ್ನು ತೆಗೆದು ಈ ಸಭೆಯ ಮಂಜೂರಾತಿಯನ್ನು ಕೇಳತಕ್ಕಂಥದು ಅಷ್ಟು ಸಮಂಜಸವಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ, ಮುಂದಿನ ಆಯವ್ಯಯ ಪಟ್ಟಿಯಲ್ಲಿ ಸೇರಿಸಿದರೆ ಅದು ಏರುಪೇರಾಗುತ್ತದೆ ಮತ್ತು ಜನತೆಗೆ ನೈಜ ಸ್ಥಿತಿ ಗೊತ್ತಾಗುತ್ತದೆ ಎಂದು ತಿಳಿದು ಈ ಹೆಚ್ಚುವರಿಯನ್ನು ನಮ್ಮ ಮುಂದೆ ಇಟ್ಟಿದ್ದೀರಿ ಎಂದು ಧೈರ್ಯವಾಗಿ ಹೇಳಬಹುದು. ಇದರಿಂದ ನೈಜವಾದ ಚಿತ್ರ ಜನತೆಗೆ ಗೊತ್ತಾಗುತ್ತದೆ. ಇದುವರೆಗೂ ಮಾನ್ಯ ಮುಖ್ಯಮಂತ್ರಿಯವರಿಗೆ ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇದನ್ನೆಲ್ಲಾ ಮಾಡಬಾರದು ಎಂದು ಹೇಳಿದರೂ ಕೂಡ ಈ ಸಿಬ್ಬಂದಿವರ್ಗ, ವಿಸ್ತರಣಾಕಾರ್ಯ ಮತ್ತು ಬೈಫರ್ಕೇಶನ್, ಹೊಸ ಹೊಸ ಕಟ್ಟಡಗಳನ್ನು ಮಾಡುತ್ತಾ ಇದ್ದಾರೆ. ಇದರಿಂದ ಹಣವೆಲ್ಲಾ ಇಂತಹ ಖರ್ಚುಗಳಿಗೆ ಹೋಗುತ್ತದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಈಗ ಲ್ಯಾಂಡ್ ರೆವೆನ್ಯೂ ಇಂಪ್ಲಿಮೆಂಟ್ ಮಾಡಲು ಸಿಬ್ಬಂದಿ ನೇಮಕ ಮಾಡಿದ್ದಾರೆ. ಇದನ್ನು ಜಾರಿಗೆ ತರಲಿಕ್ಕೆ ಏನು ಕಷ್ಟವಾಗುತ್ತದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಈ ಸಿಬ್ಬಂದಿ ಕೆಲಸವಾದರೂ ಏನಿದೆ? ಈ ಸಿಬ್ಬಂದಿ ನೇಮಕದಿಂದ ಪ್ರಯೋಜನವಾದರೂ ಏನು? ಜನತೆಗೆ ಪ್ರತ್ಯಕ್ಷವಾಗಲೀ, ಪರೋಕ್ಷವಾಗಲೀ ಅನುಕೂಲವಾಗುವಂತಹ ಕೆಲಸ ಮಾಡಬೇಕೇ ಹೊರತು, ಇಂತಹ ಸಿಬ್ಬಂದಿಗಳನ್ನು ಮಾಡಿ ಅನಾವಶ್ಯಕ ವೆಚ್ಚ ಮಾಡಿದರೆ ಅದು ನಿಜವಾಗಿಯೂ ಸರಿಯಾದುದಲ್ಲ ಎಂದು ನಾನಾದರೂ ಹೇಳಬಯಸುತ್ತೇನೆ.

ಇನ್ನು ಆಹಾರ ಪದಾರ್ಥಗಳನ್ನು ಕೊಳ್ಳುವ ಬಗ್ಗೆ ಅನೇಕ ವೆಚ್ಚಗಳನ್ನು ಮಾಡಿದ್ದಾರೆ. ಕಟ್ಟಡ ಬಾಡಿಗೆ ಮತ್ತು ಗೋಡೌನ್ಸ್ ಬಾಡಿಗೆ ಇತ್ಯಾದಿಗಳಿಗೆ ಎರಡು ಲಕ್ಷ ರೂಪಾಯಿಯನ್ನೂ, ಒಂದು ಲಕ್ಷ ರೂಪಾಯಿಯನ್ನೂ ಫಾರ್ಮ್ಸ್, ರಿಜಿಸ್ಟರ್ಸ್ ಇತ್ಯಾದಿಗಳನ್ನೂ ಕೊಂಡುಕೊಳ್ಳಲೂ ಖರ್ಚು ಮಾಡಿದ್ದಾರೆ. ಇಂತಹ ವೆಚ್ಚಗಳನ್ನು ಸರ್ಕಾರ ಮಾಡುತ್ತಾ ಇದೆ. ಬಹುಶಃ ಇವರು ಹೋಲ್‌ಸೇಲ್ ಮತ್ತು ರಿಟೈಲ್ ರೇಟಿನಲ್ಲಿ ಮಾರಾಟ ಮಾಡುವುದರಿಂದ ಏನಾದರೂ ಬರುತ್ತದೆಯೋ? ಇದನ್ನು ಹೇಗೆ ತುಂಬುತ್ತೀರಿ ಎಂದು ಇವತ್ತು ನಾನು ಪ್ರಶ್ನೆ ಮಾಡಬೇಕಾಗಿದೆ. 'Government sanctioned seven Field Publicity Units at a total cost of Rs. 3.57 lakhs during November 1965 for the remaining seven Districts.' ಎಂದು ಹೇಳಿದ್ದಾರೆ. ಇದರ ಕೆಲಸಕಾರ್ಯಗಳು ಏನು? ಇದರಿಂದ ಏನು ಒಂದು ಪ್ರತಿಫಲ ಮತ್ತು ಪ್ರಯೋಜನ ಜನತೆಗೆ ಮಾಡುತ್ತಾರೆ? ಪರೋಕ್ಷವಾಗಿಯಾದರೂ ಏನಾದರೂ ಪ್ರಯೋಜನ ಜನತೆಗೆ ಇದೆಯೇ ಎಂದು ಸರ್ಕಾರ ಮೊದಲು ತೃಪ್ತಿಪಟ್ಟುಕೊಳ್ಳಬೇಕು. ಇದೇ ರೀತಿ ಖರ್ಚು ಮಾಡುತ್ತಾ ಹೋದರೆ ಇದರ ಪ್ರತಿಫಲವೇನಾದರೂ ಆಗುತ್ತದೆಯೇ ಎಂದು ಪ್ರಶ್ನೆ ಮಾಡುತ್ತೇನೆ.

ಇನ್ನು ಗೋಲ್ಡ್‌ಸ್ಮಿತ್ಸ್‌ಗೆ ಎಲ್ಲೆಲ್ಲಿ ಕೊರತೆ ಇದೆ, ಅದಕ್ಕೆ ಒಂದು ಪರಿಹಾರ ಕೊಡುವುದನ್ನು ಸರ್ಕಾರ ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಈ ಅಭಾವ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೋಸ್ಕರ ಎಷ್ಟು ಹಣವನ್ನು ಜಿಲ್ಲೆಗಳಿಗೆ ಒದಗಿಸಿದ್ದಾರೆಂದು ಗೊತ್ತಿಲ್ಲ ಮತ್ತು ಅಲ್ಲಿನ ಕೆಲಸಕಾರ್ಯಗಳು ಸುಸೂತ್ರವಾಗಿ ಆಗುತ್ತದೆಯೇ ಇಲ್ಲವೇ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಇವತ್ತು ಗ್ರಾಮಾಂತರ ಪ್ರದೇಶಗಳನ್ನು ನೋಡಲಸಾಧ್ಯವಾದ ಸ್ಥಿತಿಯಲ್ಲಿವೆ. ಅಲ್ಲಿನ ಪರಿಸ್ಥಿತಿ ಅಷ್ಟು ಕಠಿಣತರವಾಗಿದೆ. ಜನಗಳಿಗೆ ಕೆಲಸ ಆಗಬೇಕು, ಕುಡಿಯಲು ನೀರು ಬೇಕು, ದನಗಳಿಗೆ ಮೇವು ಬೇಕು. ಇದೆಲ್ಲಾ ಎಷ್ಟು ಮಟ್ಟಿಗೆ ಜನರಿಗೆ ಸಿಕ್ಕುತ್ತದೆ ಎಂಬುದನ್ನು ಸರ್ಕಾರದವರು ನೋಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ತಹಸೀಲ್ದಾರರು ಹಣ ಡ್ರಾ ಮಾಡಬೇಕಾಗುತ್ತದೆ. ಕೆಲಸ ಮಾಡತಕ್ಕವರು ಬಿ.ಡಿ.ಒ. ಗಳು. ಅವರು ವೋಚರ್ ತರದಿದ್ದರೆ ದುಡ್ಡು ಕೊಡುವ ಹಾಗಿಲ್ಲ. ಒಂದು ಕೆಲಸ ಮಾಡಲು 10 ಸಾವಿರ ಕೊಟ್ಟರೆ ಅದನ್ನು ಖರ್ಚು ಮಾಡಲು ನಾಲ್ಕು ತಿಂಗಳು ತೆಗೆದುಕೊಳ್ಳುತ್ತಾರೆ. ಇದರಿಂದಾಗಿ ನಿಜವಾಗಿಯೂ ಜನರಿಗೆ ಪರಿಹಾರ ಕೊಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಎಂದು ನಾನಾದರೂ ಕೇಳಬೇಕಾಗಿದೆ. ಅಷ್ಟು ಜರೂರಾಗಿ

ಕೆಲಸವಾಗಬೇಕಾದರೆ ಬಿ.ಡಿ.ಓ. ಗಳೇ ದುಡ್ಡು ಕೊಡುವಹಾಗಿರಬೇಕು. ಇದರಿಂದ ಕೆಲಸಕಾರ್ಯಗಳು ಬಹಳ ತ್ವರಿತವಾಗಿ ಆಗಿ ಜನಗಳಿಗೆ ಪರಿಹಾರವಾಗುತ್ತದೆ. ಹೀಗೆ ಮಾಡುವುದರಿಂದ ಸುಮಾರು ಮಟ್ಟಿಗೆ ನಮ್ಮ ಈ ಪರಿಸ್ಥಿತಿಯನ್ನು ಸುಧಾರಿಸಬಹುದು. ಈಗ ಕೊಟ್ಟಿದ್ದ ದುಡ್ಡಿನಲ್ಲಿ ಕೇವಲ 25 ಪರ್ ಸೆಂಟ್ ಮಾತ್ರ ಖರ್ಚು ಆಗುತ್ತದೆ. ಇದು ಎತಕ್ಕೆಂದರೆ, ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಹೊಂದಾಣಿಕೆ ಇಲ್ಲದ ಕಾರಣ ಜನಗಳಿಗೆ ಬಹಳ ಕಷ್ಟವಾಗುತ್ತದೆ ಎಂಬುದನ್ನು ಮಾತ್ರ ತಿಳಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ, ಎಷ್ಟೋ ದುಡ್ಡು ಕೊಡುತ್ತೇವೆ ಎಂದು. ಇದರಿಂದ ಏನು ಪ್ರಯೋಜನ? ಜನತೆಗೆ ಕೆಲಸ ಆಗಬೇಕು, ಅವರಿಗೆ ನೇರವಾಗಿ ಉಪಕಾರವಾಗುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ಮಾತ್ರ ಹೇಳಬಯಸುತ್ತೇನೆ. ಇನ್ನೊಂದು ವಿಚಾರ. ಈಗ ಎಮರ್ಜೆನ್ಸಿ ರಿಲೀಫ್ ಆಫೀಶಿಯಲ್ಸ್ ಎಂದು ತಾವು ನೇಮಕ ಮಾಡಿದ್ದೀರಿ. ಎಷ್ಟೋ ಜನರನ್ನು ನೇಮಕಮಾಡಿದ್ದೀರಿ. ಇವರು ಎಷ್ಟು ಪರಿಹಾರವನ್ನು ಒದಗಿಸಿದ್ದಾರೆ? ಇದಕ್ಕೆ ಇಷ್ಟೊಂದು 26 ಲಕ್ಷ 55 ಸಾವಿರ ಏಕೆ ಬೇಕಾಗಿತ್ತು? ಈ ಅಧಿಕಾರಿಗಳಿಂದ ಎಷ್ಟರಮಟ್ಟಿಗೆ ಅನುಕೂಲವಾಗಿದೆ ಮತ್ತು ಖರ್ಚಾಗಿದೆ ಎಂಬುದನ್ನು ತಾವು ರಿವ್ಯೂ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮತ್ತು ಹರಿಜನರಿಗೆ ಮನೆಗಳನ್ನು ಏನು ಕೊಡುತ್ತಾ ಇದ್ದೀರಿ, ಇದು ಎಲ್ಲಾ ಕಡೆಯೂ ಸಮಾನವಾಗಿ ಒಂದೇ ರೀತಿಯಲ್ಲಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದು ಒಂದು ರೈಶನಲ್ ರೀತಿಯಲ್ಲಿ ವಿತರಣೆಯಾಗಬೇಕು. ಕೆಲವು ಕಡೆ ಸರಿಯಾಗಿ ಸಿಗುತ್ತಿಲ್ಲ ಎಂದು ತಿಳಿಸಿ ಈ ಹೆಚ್ಚುವರಿ ಬೇಡಿಕೆಯು ಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯಲು ಅರ್ಹವಲ್ಲ ಎಂದು ಹೇಳುತ್ತೇನೆ. ಮಾನ್ಯ ಹಣಕಾಸಿನ ಸಚಿವರು ನಾಲ್ಕಾರು ವರ್ಷಗಳ ಆಡಿಟ್ ವರದಿಯನ್ನು ದಯವಿಟ್ಟು ಪರಿಶೀಲನೆ ಮಾಡಿ ಅದರಲ್ಲಿ ಇರತಕ್ಕ ಲೋಪದೋಷಗಳನ್ನು, ನ್ಯೂನತೆಗಳನ್ನು ಸರಿಪಡಿಸದೆ ಇದ್ದರೆ ಈ ಆರ್ಥಿಕ ಪರಿಸ್ಥಿತಿಯು ಸರಿಯಾಗುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇಂದು ಈ ಸಭೆಯ ಮುಂದೆ ಇಟ್ಟಿರತಕ್ಕ ಅನುಪೂರಕ ಬೇಡಿಕೆಗಳನ್ನು ನಾನು ಮೂರು ವಿಧವಾಗಿ ವಿಂಗಡಿಸುತ್ತೇನೆ. ಮೊದಲನೆಯದು ಯಾವ ಬೇಡಿಕೆಗಳ ಬಗ್ಗೆ ಕೇವಲ ಸಂಕೇತಾತ್ಮಕವಾದ ಹಣವನ್ನು ಕೇಳಿದ್ದೇವೆ ಅಂಥ ಬೇಡಿಕೆಗಳ ಒಟ್ಟು ಮೊತ್ತ ಕೇವಲ 4,200 ರೂಪಾಯಿ ಮಾತ್ರ. ಎರಡನೆಯದು ಲೆಕ್ಕದಲ್ಲಿ ಹೊಂದಾಣಿಕೆ ಮಾಡುವುದಕ್ಕೋಸ್ಕರವಾಗಿ ಯಾವುದರ ಬಗ್ಗೆ ಕೇಂದ್ರ ಸರ್ಕಾರದಿಂದ, ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್‌ನಿಂದ ಅಥವಾ ಇನ್ನು ಇತರ ಬಾಬುಗಳಿಂದ ನಮಗೆ ಹಣ ಸಿಕ್ಕುತ್ತದೆಯೋ ಆ ವಿಚಾರದಲ್ಲಿ, ಅದರ ಒಟ್ಟು ಮೊತ್ತ 53,57,00,000 ರೂಪಾಯಿಗಳು. ಇದರಲ್ಲಿ ಸರ್ಕಾರಕ್ಕೆ ಖರ್ಚು ಏನೂ ಬರುವುದಿಲ್ಲ ಮತ್ತು ನಿಜವಾಗಿ ಹೇಳುವುದಾದರೆ ಅದು ಕೇವಲ ಹೊಂದಾಣಿಕೆ ಮಾತ್ರವೇ ಹೊರತು ನಿಜವಾದ ಖರ್ಚಲ್ಲ. ಮೂರನೆಯದಾಗಿ ಯಾವುದರ ಬಗ್ಗೆ ನಿಜವಾಗಿಯೂ ಖರ್ಚಾಗುತ್ತದೆಯೋ, ಯಾವುದರ ಬಗ್ಗೆ ಹಣವನ್ನು ಕೇಳಿರುತ್ತೇವೆಯೋ ಅದಕ್ಕೆ ಸಂಬಂಧಪಟ್ಟದ್ದು, ಅದು 5,24,00,000 ರೂಪಾಯಿ. ಕೆಲವು ಸದಸ್ಯರು ಇಷ್ಟೊಂದು ಹಣದ ಬೇಡಿಕೆ ಎಂದರೆ 58—59 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸರ್ಕಾರದವರು ಇಟ್ಟಿದ್ದಾರೆ, ಅದು 1965-66ನೆ ವರ್ಷದ ಒಟ್ಟು ಆದಾಯದ ಬಹಳಷ್ಟು ಅಂಶವಾಗುತ್ತದೆ, ಅದನ್ನು ಹೇಗೆ ಹೊಂದಿಸುತ್ತಾರೆ ಎನ್ನುವ ಸಂದೇಹವನ್ನು ವ್ಯಕ್ತ ಮಾಡಿದರು. ಈಗ ನಾನು ಹೇಳಿದ ವಿವರದಿಂದ ಆ ಸಂದೇಹ ನಿವಾರಣೆಯಾಗುತ್ತದೆ ಎಂದು ನಾನು ಆಶಯ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಈ ಅನುಪೂರಕ ಬೇಡಿಕೆಗಳಲ್ಲಿ ಸೇರಿದಂಥ ಸಾಲ ಮತ್ತು 'ವೇಸ್ ಅಂಡ್ ಮೀನ್ಸ್ ಅಡ್ವಾನ್ಸಸ್' ಇದಕ್ಕೆ ಸಂಬಂಧಪಟ್ಟಂತೆ ನಾನು ವಿಶೇಷವಾಗಿ ಏನು ಹೇಳಲಿಕ್ಕೂ ಬಯಸುವುದಿಲ್ಲ. ಈ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ ಮತ್ತು ನಾನು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದೇನೆ, ಕೆಲವು ದಿವಸಗಳ ಹಿಂದೆ. ಕೆಲವು ವಿಶಿಷ್ಟ ಮೊತ್ತಗಳ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದರು. ಇದಕ್ಕೆ ಸಿಬ್ಬಂದಿ ಏತಕ್ಕೆ, ಸಿಬ್ಬಂದಿಯನ್ನು ನೇಮಕ ಮಾಡಿದರೆ ಅದರಿಂದ ಸರಿಯಾದ ರೀತಿಯಲ್ಲಿ ಕೆಲಸವಾಗುತ್ತದೆಯೇ ಹೇಗೆ ಮತ್ತು ಸಿಬ್ಬಂದಿಯನ್ನು ಈ ರೀತಿ ಬೆಳೆಸುತ್ತ ಹೋಗುವುದು ಯೋಗ್ಯವೇ, ಹೇಗೆ ಎಂದು. ಸಿಬ್ಬಂದಿಯಿಂದ ಸರಿಯಾಗಿ ಕೆಲಸ ಆಗುತ್ತಿದೆಯೇ ಇಲ್ಲವೇ ಎಂದು ಹೇಳುವ ಚರ್ಚೆ ಈ ಸಂದರ್ಭದಲ್ಲಿ ಅಷ್ಟೊಂದು ಪ್ರಸಕ್ತವಾದುದಲ್ಲ ಎಂದು ನನ್ನ ಅಭಿಪ್ರಾಯ. ಆದರೆ ಯಾವುದೇ ಬಾಬಿನಲ್ಲಾಗಲಿ ಯಾವುದೇ ಖಾತೆಯಲ್ಲಾಗಲೀ ಅನಾವಶ್ಯಕವಾಗಿ ಸಿಬ್ಬಂದಿಯನ್ನು ನಾವು ನೇಮಿಸುವುದಿಲ್ಲ ಎನ್ನುವುದನ್ನು ನಾನು ಪುನಃ ಇಲ್ಲಿ ದೃಢೀಕರಿಸಲಿಕ್ಕೆ ಬಯಸುತ್ತೇನೆ. ಈ 'ಎಮರ್ಜೆನ್ಸಿ ಅಸಿಸ್ಟೆಂಟ್ಸ್' ಯಾರು ಎನ್ನುವ ಪ್ರಶ್ನೆಯನ್ನು ಶ್ರೀಮಾನ್ ಜಿ. ವಿ. ಗೌಡರು ಹಾಕಿದರು. ವ್ಯವಸಾಯ ಇಲಾಖೆಯಲ್ಲಿ, ಅದರಲ್ಲಿಯೂ ಮುಖ್ಯವಾಗಿ ಸಾಯಿಲ್ ಕನ್‌ಸರ್ವೇಷನ್, ಕಾಂಟೂರ್ ಬಂಡಿಂಗ್, ಈ ಕೆಲಸಗಳನ್ನು ಮಾಡಲಿಕ್ಕೆ ನಾವು

(ಶ್ರೀ ರಾಮಕೃಷ್ಣ ಹೆಗಡೆ)

'ಎಮರ್ಜೆನ್ಸಿ ಅಸಿಸ್ಟೆಂಟ್'ಗಳನ್ನು ನೇಮಕ ಮಾಡತಕ್ಕ ಪರಿಸ್ಥಿತಿ ಒದಗಿತ್ತು. ಆ ಕೆಲಸಕ್ಕೆ ಮತ್ತು ಅದರಲ್ಲಿ ಯಾವುದೇ ರೀತಿಯ ಅನವಶ್ಯಕವಾದ ಖರ್ಚಾಗಿದೆ ಎಂದು ನನಗನ್ನಿಸುವುದಿಲ್ಲ. ಈಗ ಎಲ್ಲಕ್ಕಿಂತ ಮುಖ್ಯವಾಗಿ ಇವತ್ತಿನ ದಿವಸದ ಚರ್ಚೆಯಲ್ಲಿ ಟೀಕೆ ಬಂದದ್ದು ನೀರಾವರಿ ಯೋಜನೆಗಳಿಗಾಗಿ ನಾವು ಏನು ಹಣವನ್ನು ಖರ್ಚು ಮಾಡುತ್ತಿದ್ದೇವೆಯೋ ಅದರಲ್ಲಿ ಪಕ್ಷಪಾತವಾಗುತ್ತಿದೆ, ಕೆಲವು ಭಾಗಕ್ಕೆ ಹೆಚ್ಚು ಖರ್ಚಾಗುತ್ತಿದೆ, ಕೆಲವು ಭಾಗದಲ್ಲಿ ಕಡಮೆ ಖರ್ಚಾಗುತ್ತಿದೆ ಎನ್ನುವ ಬಹಳ ಕಠೋರವಾದ ಶಬ್ದಗಳಿಂದ ಶ್ರೀಮಾನ್ ಮುಕ್ಕಣ್ಣಪ್ಪನವರೂ, ಶ್ರೀಮಾನ್ ಶಿವಪ್ಪನವರೂ ಮಾತನಾಡಿದರು. ಈ ಟೀಕೆ ಮಾಡುವುದಕ್ಕಿಂತ ಮೊದಲು ಅದಕ್ಕೆ ಸಂಬಂಧಪಟ್ಟಂಥ ಅಂಕಿ ಸಂಖ್ಯೆಗಳನ್ನು ದಯವಿಟ್ಟು ಅವರು ನೋಡಿಕೊಂಡಿದ್ದರೆ ಬಹುಶಃ ಅವರು ಈ ಟೀಕೆಯನ್ನು ಮಾಡುತ್ತಿರಲಿಲ್ಲವೋ ಏನೋ ಎಂದು ನನಗನ್ನಿಸುತ್ತದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಅವಕಾಶ ಸಿಕ್ಕಿದಾಗಲೆಲ್ಲ ಹಳೆ ಮೈಸೂರು ಭಾಗಕ್ಕೆ ಬಹಳ ಅನ್ಯಾಯವಾಗಿದೆ, ಇದೇ ರೀತಿ ನಡೆಯುತ್ತಿದ್ದರೆ ನಾವೂ ಕೂಡ ಪಂಜಾಬಿನಂತೆ, ಅಥವಾ ಇನ್ನು ಯಾವುದೋ ನಡೆಯುತ್ತಿರುವ ರೀತಿಯಲ್ಲಿ ಎರಡು ಕರ್ಣಾಟಕ ಮಾಡಬೇಕು ಎಂದು ಚಳುವಳಿ ಮಾಡಲಿಕ್ಕೆ ಪ್ರಯತ್ನ ಮಾಡುವಂಥ ಪ್ರಸಂಗ ಬರಬಹುದು ಎಂದು ಆಗಾಗ ಹೇಳುತ್ತಿದ್ದಾರೆ. ಎರಡು ಕರ್ಣಾಟಕ ಮಾಡುವುದಾಗಿದ್ದರೆ ನಾವು 30-40 ವರ್ಷಗಳಿಂದ ಕನ್ನಡ ಮಾತನಾಡತಕ್ಕ ಎಲ್ಲ ಜನರೂ ಒಂದು ಆಡಳಿತದಲ್ಲಿ ಬರಬೇಕು, ಕರ್ಣಾಟಕ ಏಕೀಕರಣವಾಗಬೇಕು ಎನ್ನುವ ಚಳುವಳಿಯನ್ನು ಮಾಡುತ್ತಿರಲಿಲ್ಲ. ಏಕೀಕರಣವಾದ ಸ್ವಲ್ಪಕಾಲದವರೆಗೂ ಕೆಲವು ಕಾರಣದಿಂದ ಭಿನ್ನಾಭಿಪ್ರಾಯ ಮತ್ತು ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಅಸಮಾಧಾನ ಆಗುವುದು ಸ್ವಾಭಾವಿಕ, ಅದು ಅಷ್ಟು ಅಸ್ವಾಭಾವಿಕ ಎಂದು ನನಗೆ ಅನ್ನಿಸುವುದಿಲ್ಲ. ನಾವು ಏಕೀಕರಣ ಮಾಡಿರುವ ಒಂದೇ ಒಂದು ಉದ್ದೇಶ ಏನೆಂದರೆ ಕನ್ನಡ ಮಾತನಾಡತಕ್ಕ ಎಲ್ಲಾ ಜನರೂ ಎಲ್ಲ ರೀತಿಯಿಂದಲೂ ಸರಿಯಾದ ಅಭಿವೃದ್ಧಿಯನ್ನು ಹೊಂದಲಿ ಎನ್ನುವ ಉದ್ದೇಶದಿಂದಲೇ. 9-10 ವರ್ಷ, ನಮ್ಮ ಹೊಸ ಮೈಸೂರು ದೇಶ ಅಸ್ತಿತ್ವಕ್ಕೆ ಬಂದಮೇಲೆ ನನ್ನ ಅಭಿಪ್ರಾಯದಲ್ಲಿ ಈ ಉದ್ದೇಶವನ್ನು ಸಾಧಿಸುವುದಕ್ಕೋಸ್ಕರವಾಗಿಯೇ ನಾವು ದುಡಿಯುತ್ತ ಬಂದಿದ್ದೇವೆ ಎಂದು ನನಗನ್ನಿಸುತ್ತದೆ. ಈಗ ಚಿಕ್ಕ ನೀರಾವರಿ ಯೋಜನೆಯ ಒಂದೇ ವಿಚಾರವನ್ನು ತೆಗೆದುಕೊಳ್ಳೋಣ ; ಬಾಕಿ ವಿಚಾರ ಅಗತ್ಯವಿಲ್ಲ ; ಏಕೆಂದರೆ, ಇಲ್ಲಿ ಬಂದಿರತಕ್ಕ ಟೀಕೆ ಮುಖ್ಯವಾಗಿ ಚಿಕ್ಕ ನೀರಾವರಿ ಯೋಜನೆಗೆ ಸಂಬಂಧಪಟ್ಟಂಥದ್ದು. ನಮ್ಮ ಮೈಸೂರಿನ 19 ಬೇರೆ ಬೇರೆ ಜಿಲ್ಲೆಗಳಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಮೇಲೆ ಎಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆ ಎಂದು ಹೇಳುವ ವಿವರವನ್ನು ನಾನು ಇಲ್ಲಿ ಕೊಡಲಿಕ್ಕೆ ಬಯಸುವುದಿಲ್ಲ. ಅದನ್ನು ಇನ್ನೊಂದು ಸಂದರ್ಭದಲ್ಲಿ ಕೊಡುತ್ತೇನೆ. ಆದರೆ ಈಗ ಈ ವರ್ಷ ಪ್ರಾರಂಭ ಆಗುವಾಗ ಎಂದರೆ 1-4-1965ನೆ ದಿವಸದಿಂದ ಬೇರೆ ಬೇರೆ ಜಿಲ್ಲೆಗಳಲ್ಲಿ ಚಿಕ್ಕ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಎಷ್ಟು ಕೆಲಸವಾಗಿದೆ ಮತ್ತು ಎಷ್ಟು ಖರ್ಚಿನ ಕೆಲಸಗಳು ನಡೆದಿವೆ ಎಂದು ಮಾತ್ರ ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

12-00 NOON.

ಈ ವರ್ಷ ಬಡ್ಜೆಟ್ಟಿನಲ್ಲಿ ಕೊಟ್ಟಂಥ ಹಣವೆಷ್ಟು, ಅಡಿಷನಲ್ ಗ್ರ್ಯಾಂಟು ಕೊಟ್ಟಿದ್ದು ಎಷ್ಟೆಂಬುದನ್ನು ಹೇಳಲಿಕ್ಕೆ ಬಯಸುತ್ತೇನೆ. ಬೆಂಗಳೂರು ಜಿಲ್ಲೆಯಲ್ಲಿ ಸ್ಪಿಲ್ಓವರ್ ಅಂದರೆ ಪೂರ್ತಿಯಾಗದಂತಹ ಕೆಲಸಗಳು, ಬೇರೆ ಬೇರೆ ಸ್ಟೇಜಿನಲ್ಲಿ ನಡೆಯುತ್ತಾ ಇರತಕ್ಕ ಕೆಲಸಗಳು—ಇವುಗಳ ಅಂದಾಜು ಖರ್ಚು 106 ಲಕ್ಷ ರೂಪಾಯಿಗಳು. ತುಮಕೂರಿನಲ್ಲಿ 97 ಲಕ್ಷ ರೂಪಾಯಿಗಳು, ಕೋಲಾರದಲ್ಲಿ 91 ಲಕ್ಷ ರೂಪಾಯಿಗಳು, ಶಿವಮೊಗ್ಗಾದಲ್ಲಿ 59 ಲಕ್ಷ ರೂಪಾಯಿಗಳು, ಚಿತ್ರದುರ್ಗದಲ್ಲಿ 74 ಲಕ್ಷ ರೂಪಾಯಿಗಳು, ಹಾಸನದಲ್ಲಿ 77 ಲಕ್ಷ ರೂಪಾಯಿಗಳು, ಚಿಕ್ಕಮಗಳೂರಿನಲ್ಲಿ 30 ಲಕ್ಷ ರೂಪಾಯಿಗಳು, ಮೈಸೂರಿನಲ್ಲಿ 107 ಲಕ್ಷ ರೂಪಾಯಿಗಳು, ಮಂಡ್ಯಾದಲ್ಲಿ 90 ಲಕ್ಷ ರೂಪಾಯಿಗಳು, ಬೆಳಗಾಂನಲ್ಲಿ 112 ಲಕ್ಷ ರೂಪಾಯಿಗಳು, ಬಿಜಾಪುರದಲ್ಲಿ 29 ಲಕ್ಷ ರೂಪಾಯಿಗಳು, ಧಾರವಾಡದಲ್ಲಿ 79 ಲಕ್ಷ ರೂಪಾಯಿಗಳು, ಉತ್ತರ ಕೆನರಾದಲ್ಲಿ 64 ಲಕ್ಷ ರೂಪಾಯಿಗಳು, ರಾಯಚೂರಿನಲ್ಲಿ 29 ಲಕ್ಷ ರೂಪಾಯಿಗಳು, ಗುಲ್ಬರ್ಗಾದಲ್ಲಿ 29 ಲಕ್ಷ ರೂಪಾಯಿಗಳು, ಬಿದರಿನಲ್ಲಿ 13 ಲಕ್ಷ ರೂಪಾಯಿಗಳು, ಬಳ್ಳಾರಿಯಲ್ಲಿ 68 ಲಕ್ಷ ರೂಪಾಯಿಗಳು, ದಕ್ಷಿಣ ಕೆನರಾದಲ್ಲಿ 47 ಲಕ್ಷ ರೂಪಾಯಿಗಳು, ಕೊಡಗಿನಲ್ಲಿ 8 ಲಕ್ಷ ರೂಪಾಯಿಗಳು.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ಪಿಲ್ಓವರ್ ವರ್ಕ್ಸ್ ಆ ರೀತಿ ಪೆಂಡಿಂಗ್ ಇದೆಯೆಂದು ಹೇಳಿದರು. ಇಷ್ಟು ವರ್ಷಗಳಿಂದ ಪೆಂಡಿಂಗ್ ಇರುವುದಕ್ಕೆ ಅಧಿಕಾರಿಗಳು ಕಾರಣವೋ ಅಥವಾ

ಅಕ್ವಿಸಿಷನ್ ಪ್ರೊಸೀಡಿಂಗ್ಸಿಗೋಸ್ಕರ ನಿಂತಿವೆಯೋ ? ಈ ರೀತಿ ಹಣ ಖರ್ಚು ಮಾಡಬೇಕೆಂದು ಇರತಕ್ಕ ಕೆಲಸಗಳನ್ನು ಇವರು ಕುಂಠಿತ ಮಾಡುವುದು ನ್ಯಾಯವೇ ? ಇದನ್ನು ಯಾವ ರೀತಿಯಲ್ಲ ಬಗೆಹರಿಸುತ್ತಾರೆ ! ಸ್ಪಿಲ್ಓವರ್ ಕೆಲಸಗಳು ಇರುವ ಕಡೆ ಹೊಸ ಕೆಲಸಗಳನ್ನು ವಿಶೇಷವಾಗಿ ತೆಗೆದುಕೊಳ್ಳರಾಗುವುದಿಲ್ಲವೆಂದು ಹೇಳುತ್ತಾ, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಪದೇ ಪದೇ ಕ್ಷಾಮ ತಲೆದೋರುತ್ತಿದೆ, ಅದಕ್ಕೋಸ್ಕರ ಹೊಸ ಕೆಲಸಗಳನ್ನು ಅಲ್ಲಿ ತೆಗೆದುಕೊಳ್ಳುತ್ತೇವೆಂದು ಇವರು ಹೇಳುವುದು ಇವರ ಒಂದು ನೀತಿಗೆ ವಿರೋಧವಾಗಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಎರಡು ನಿಮಿಷಗಳ ಕಾಲ ಮೌನವಾಗಿ ಕುಳಿತಿದ್ದರೆ ಅದಕ್ಕೆ ನಾನೇ ಉತ್ತರ ಕೊಡುತ್ತಿದ್ದೆ. ಎಲ್ಲೆಲ್ಲಿ ಸ್ಪಿಲ್ಓವರ್ ವರ್ಕ್ಸ್ ಇವೆ ಅಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಕೂಡದು ಎಂದು ಹೇಳುವುದು ನಮ್ಮ ನಿಲುವೆಯಲ್ಲ. ಆದರೆ ಕೋಟ್ಯಾಂತರ ರೂಪಾಯಿಗಳ ಕೆಲಸ ಮೈಸೂರು ರಾಜ್ಯದಲ್ಲ ಬೇರೆ ಬೇರೆ ಭಾಗಗಳಲ್ಲಿ ಅಪೂರ್ತಿಯಾಗಿರುವಾಗ ಹೊಸ ಕೆಲಸಗಳನ್ನು ಈಗ ತೆಗೆದುಕೊಂಡು ಮುಗಿಸುವುದಕ್ಕೆ ಬದಲು ಅಪೂರ್ತಿಯಾದ ಕೆಲಸಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯ. ಹಿಂದೆಯೂ ಸಹ ಇದನ್ನು ಹೇಳಿದ್ದೇನೆ. ನನಗೆ ನೆನಪು ಇದೆ. ಸ್ಪಿಲ್ಓವರ್ ಕೆಲಸಗಳಿಗೆ ಸುಮಾರು 10-12 ಕೋಟಿ ರೂಪಾಯಿಗಳಷ್ಟು ಖರ್ಚು ಆಗಬೇಕಾಗಿದೆ. ಮೈನರ್ ಇರ್ರಿಗೇಷನ್ ಬಗ್ಗೆ ಪ್ಲಾನಿಂಗ್ ಕಮಿಷನ್ನಿನವರಲ್ಲಿ ಇನ್ನೂ ಹೆಚ್ಚು ಹಣವನ್ನು ಕೇಳುವಾಗ ಅವರು ಹೇಳಿರತಕ್ಕ ಕೆಲಸಗಳನ್ನು ಮುಗಿಸಿದ್ದೇವೆ. ಅವನ್ನು ಪೂರ್ತಿಯಾಗಿ ಮುಗಿಸಿದ್ದಾದಮೇಲೆ ಪುನಃ ಇವರ ವಾದಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತೇವೆ. ನಾನು, ನನ್ನ ಸ್ನೇಹಿತರು ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು, ಸಂಬಂಧಪಟ್ಟ ಮಂತ್ರಿಗಳು ಬಹುಶಃ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಹೋಗಿ ಬಂದಿದ್ದೇವೆ. ಆದರೂ ನಮ್ಮ ಮುಖ್ಯ ಉದ್ದೇಶ. ಆದಷ್ಟು ಬೇಗ ಅಪೂರ್ತಿಯಾದ ಕೆಲಸಗಳನ್ನು ಯಾವ ರೀತಿಯಾಗಿ ಪೂರ್ತಿ ಮಾಡಬೇಕು, ಅದಕ್ಕೆ ಇರುವ ತೊಂದರೆಗಳೇನು, ಅದನ್ನು ಎಷ್ಟು ದಿವಸಗಳಲ್ಲಿ ಯಾವ ರೀತಿಯಲ್ಲಿ ನಿವಾರಣೆ ಮಾಡಬಹುದು ಎಂಬುದನ್ನು ತೀರ್ಮಾನ ಮಾಡುವುದಕ್ಕೆ ಹೋಗಿದ್ದೇವೆ. ಅದಕ್ಕೆ ಸಂಬಂಧಪಟ್ಟ ವಿವರಣೆಗಳನ್ನು ಬೇಕಾದರೆ ನಾನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ರಾಜ್ಯದಲ್ಲಿ ಅಪೂರ್ತಿಯಾಗಿರುವ ಕೆಲಸಗಳನ್ನು ಸಾಧ್ಯವಾದಮಟ್ಟಿಗೆ ಈ ವರ್ಷದ ಕೊನೆಯೊಳಗೆ, ಆಗಲೂ ಸಾಧ್ಯವಾಗದಿದ್ದರೆ 1966ನೇ ಜೂನ್ ಕೊನೆಯೊಳಗೆ, ಇಲ್ಲದಿದ್ದರೆ ಅವೆಲ್ಲವನ್ನೂ 66-67ನೇ ವರ್ಷದ ಅಂದರೆ 1967ನೇ ಇಸವಿ ಮಾರ್ಚ್‌ನೊಳಗೆ ಮುಗಿಸಬೇಕೆಂಬುದಾಗಿ ಒಂದು ಕಡ್ಡಾಯ ನಿರ್ಬಂದವನ್ನು ಮಾಡಿದ್ದೇವೆ. ಅವು ಪೂರ್ತಿಯಾಗಿ ಮುಗಿಯುವಂತೆ ನೋಡತಕ್ಕ ಒಂದು ದೃಢನಿಶ್ಚಯ ಮಾಡಿದ್ದೇವೆ. ಆದ್ದರಿಂದ ಆ ವಿಚಾರದ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ಅನುಮಾನವೂ ಬೇಡವೆಂದು ಹೇಳುತ್ತೇನೆ. ಆದರೆ ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ ಅಕ್ವಿಸಿಷನ್ ಕಾರಣದಿಂದಾಗಲೀ ಅಥವಾ ಎರಡು ಗುಂಪುಗಳ ಜಗಳದ ಕಾರಣದಿಂದಾಗಲೀ ಆ ಕೆಲಸಗಳು ನಿಂತು ಹೋಗುವುದಕ್ಕೆ ಸಾಧ್ಯವಿಲ್ಲ. ಸ್ಪಿಲ್ಓವರ್ ವರ್ಕ್ಸ್ ಒಟ್ಟು ಎಷ್ಟಿವೆ ಎಂಬುದನ್ನು ನೋಡುವುದು ಅತ್ಯಗತ್ಯ. ಕಳೆದ 6 ತಿಂಗಳುಗಳಿಂದಲೂ ಮಳೆಯ ಅಭಾವದಿಂದ ತೊಂದರೆಯಾಗಿರತಕ್ಕ ರೈತರಿಗೆ ಸ್ಪಿಲ್ಓವರ್ ವರ್ಕ್ಸ್ ಇದ್ದರೂ ಕೂಡ ಅನೇಕ ಕಡೆಗಳಲ್ಲಿ ಹೊಸ ಕೆಲಸಗಳನ್ನು ಮಾಡುವುದಕ್ಕೆ ಸೂಚನೆ ಮಾಡಿದ್ದೇವೆ. ಈ ವರ್ಷದಲ್ಲಿ ನಾವು ಕೆಲವು ಜಿಲ್ಲೆಗಳಿಗೆ ಹೊಸ ಕೆಲಸಗಳಿಗಾಗಿ ಕೊಟ್ಟಿದ್ದೇವೆ. ಕಡಿಮೆ ಎಂದರೆ 7 ಲಕ್ಷ ರೂಪಾಯಿಗಳನ್ನು ಬಿದರೆಯಲ್ಲಿಯೂ, ಹೆಚ್ಚು ಅಂದರೆ 22 ಲಕ್ಷ ರೂಪಾಯಿಗಳನ್ನು ಮೈಸೂರಿನಲ್ಲಿಯೂ—ಹೀಗೆ ನಾವು ಹಣವನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಹಂಚಿದ್ದೇವೆ. ಸುಮಾರು 15—18 ಲಕ್ಷ ರೂಪಾಯಿಗಳ ಸರಾಸರಿ ಬಂದಿದೆಯೆಂದು ಹೇಳಬಹುದು. ಚಿಕ್ಕ ಜಿಲ್ಲೆಗೆ ಸ್ವಲ್ಪ ಬಂದಿದೆ. ದೊಡ್ಡ ಜಿಲ್ಲೆಗೆ ದೊಡ್ಡದಾಗಿ ಬಂದಿದೆ. ಸ್ಪಿಲ್ಓವರ್ ವರ್ಕ್ಸ್ ಜೊತೆಗೆ ಹೊಸದಾಗಿ ಅಗತ್ಯವಿರುವ ಕೆಲಸಗಳನ್ನು ಮಾಡಲು ಹಣ ಮಂಜೂರಾಗಿ ಅಂದಾಜು ಆಗಿರುವುದು ಎಷ್ಟೆಂಬುದನ್ನು ತಿಳಿಸಬಯಸುತ್ತೇನೆ. ಬೆಂಗಳೂರಿಗೆ 15 ಲಕ್ಷ ರೂಪಾಯಿಗಳು, ತುಮಕೂರಿಗೆ 19 ಲಕ್ಷ ರೂಪಾಯಿಗಳು, ಕೋಲಾರಕ್ಕೆ 19 ಲಕ್ಷ ರೂಪಾಯಿಗಳು, ಶಿವಮೊಗ್ಗಾಕ್ಕೆ 13½ ಲಕ್ಷ ರೂಪಾಯಿಗಳು, ಚಿತ್ರದುರ್ಗಕ್ಕೆ 35 ಲಕ್ಷ ರೂಪಾಯಿಗಳು, ಹಾಸನಕ್ಕೆ 5 ಲಕ್ಷ ರೂಪಾಯಿಗಳು, ಚಿಕ್ಕಮಗಳೂರಿಗೆ 15ಲಕ್ಷ ರೂಪಾಯಿಗಳು, ಮೈಸೂರಿಗೆ 20 ಲಕ್ಷ ರೂಪಾಯಿಗಳು, ಮಂಡ್ಯಕ್ಕೆ 10 ಲಕ್ಷ ರೂಪಾಯಿಗಳು, ಬೆಳಗಾಂಗೆ 30 ಲಕ್ಷ ರೂಪಾಯಿಗಳು, ಬಿಜಾಪುರಕ್ಕೆ 42 ಲಕ್ಷ ರೂಪಾಯಿಗಳು ಧಾರವಾಡಕ್ಕೆ 46 ಲಕ್ಷ ರೂಪಾಯಿಗಳು, ಉತ್ತರ ಕನ್ನಡಕ್ಕೆ 27 ಲಕ್ಷ ರೂಪಾಯಿಗಳು, ರಾಯಚೂರಿಗೆ 25 ಲಕ್ಷ ರೂಪಾಯಿಗಳು, ಗುಲ್ಬರ್ಗಾಕ್ಕೆ 43 ಲಕ್ಷ ರೂಪಾಯಿಗಳು, ಬಿದರ್‌ಗೆ 22 ಲಕ್ಷ ರೂಪಾಯಿಗಳು, ಬಳ್ಳಾರಿಗೆ 22 ಲಕ್ಷ ರೂಪಾಯಿಗಳು, ದಕ್ಷಿಣ ಕನ್ನಡಕ್ಕೆ 5 ಲಕ್ಷ ರೂಪಾಯಿಗಳು, ಕೊಡಗಿಗೆ 5 ಲಕ್ಷ ರೂಪಾಯಿಗಳು—ಹೀಗೆ ಮೊಬಲಗನ್ನು ಹಂಚಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮಂತ್ರಿಗಳು ಕೊಟ್ಟ ಅಂಕಿ ಅಂಶಗಳ ಪ್ರಕಾರ ನೋಡಿದರೆ ಗುಲ್ಬರ್ಗಕ್ಕೆ 43 ಲಕ್ಷ ರೂಪಾಯಿಗಳು, ಹಾಸನಕ್ಕೆ 5 ಲಕ್ಷ ರೂಪಾಯಿಗಳು ಬರುತ್ತದೆ. ಇದು ಡಿಸ್ಕ್ರಿಮಿನೇಷನ್ ಅಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಹಾಸನ, ಗುಲ್ಬರ್ಗಾ, ಬೆಳಗಾಂ, ಮೈಸೂರು, ಬೆಂಗಳೂರು ಜಿಲ್ಲೆಗಳೆಲ್ಲಾ ಒಂದೇ ತಕ್ಕಡಿಯಲ್ಲಿ ತೂಕ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಮಾಡ ಬೇಕಾದರೆ ಜಿಲ್ಲೆಯ ವಿಸ್ತಾರ ಮತ್ತು ಅಲ್ಲಿನ ಅನುಕೂಲಗಳಪರಿಸ್ಥಿತಿ ಏನೆಂಬುದನ್ನು ನೋಡಬೇಕು. ಎಲ್ಲಿ ಮಳೆಯ ಅಭಾವ ಬಹಳವಿದೆಯೋ, ಎಲ್ಲಿ ರೈತರಿಗೆ ಸ್ವಲ್ಪವೂ ಕೂಡ ಕೆಲಸವಿಲ್ಲದೆ ಮತ್ತು ಅದರಲ್ಲೂ ಬೇರೆ ರೀತಿಯಲ್ಲಿ ಅನುಕೂಲತೆಗಳು ಇಲ್ಲದೆ ಬಹಳ ತೊಂದರೆಯಾಗಿದೆಯೋ ಅಂತಹ ಕಡೆ ಗಳಲ್ಲಿ ಹೆಚ್ಚಿನ ಮಹತ್ವವನ್ನು ಕೊಡಬೇಕಾಗುತ್ತದೆ. ಈಗ ಸ್ಪಿಲ್ಓವರ್ ಮತ್ತು ಹೊಸದಾಗಿ ಮಂಜೂರಾತಿಯಾಗಿರುವ ಕೆಲಸಗಳಿಗೆ ಒಟ್ಟು ಎಷ್ಟು ಮೊಬಲಗನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಒದ ಗಿಸಲಾಗಿದೆಯೆಂಬುದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರುತ್ತೇನೆ.

		ಲಕ್ಷ ರೂಪಾಯಿಗಳು			ಲಕ್ಷ ರೂಪಾಯಿಗಳು
ಬೆಂಗಳೂರು	...	121	ಬೆಳಗಾಂ	...	142
ತುಮಕೂರು	...	115	ಬಿಜಾಪುರ	..	72
ಕೋಲಾರ	...	115	ಧಾರವಾಡ	...	176
ಶಿವಮೊಗ್ಗ	...	72	ಉತ್ತರ ಕನ್ನಡ	...	91
ಚಿತ್ರದುರ್ಗ	...	109	ರಾಯಚೂರು	...	54
ಹಾಸನ	...	82	ಗುಲ್ಬರ್ಗ	...	72
ಚಿಕ್ಕಮಗಳೂರು	...	41½	ಬಿದರ್	...	57
ಮೈಸೂರು	...	127	ಬಳ್ಳಾರಿ	...	90
ಮಂಡ್ಯ	...	100	ದಕ್ಷಿಣ ಕನ್ನಡ	...	52
			ಕೊಡಗು	...	13

ಶ್ರೀ ಕೆ. ಲಕ್ಕಪ್ಪ.—77 ಲಕ್ಷ ರೂಪಾಯಿಗಳ ಸ್ಪಿಲ್ಓವರ್ ವರ್ಕ್ಸ್ ಹಾಸನ ಜಿಲ್ಲೆಯಲ್ಲಿ ಎಷ್ಟು ದಿನಗಳಿಂದ ಪೆಂಡಿಂಗ್‌ನಲ್ಲಿದೆ, ನಮ್ಮ ಜಿಲ್ಲೆಯನ್ನು ಈ ರೀತಿ ಕಡೆಗಣ್ಣಿನಿಂದ ನೋಡಿದರೆ ಹೇಗಾಗು ತ್ತದೆ. ಸ್ಪಿಲ್ಓವರ್ ವರ್ಕ್ಸ್‌ಗೆ ಮೊದಲು ವೆಚ್ಚ ಮಾಡಿ ಹೊಸದಾಗಿ ಮೈನರ್ ಇರ್ರಿಗೇಷನ್ ವರ್ಕ್ಸ್‌ನ್ನು ಅಲ್ಲಿ ತೆಗೆದುಕೊಳ್ಳುವುದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲಿ ಏನೇನು ಕ್ರಮಗಳನ್ನು ಸರ್ಕಾರ ದವರು ತೆಗೆದುಕೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ಜೊತೆಗೆ ಈಗ ಕ್ಷಾಮ ಪರಿಹಾರಗಳಿಗಾಗಿ, ಇರ್ರಿಗೇಷನ್ ಪಂಪುಸೆಟ್ಟುಗಳಿಗೆ, ಇರ್ರಿಗೇಷನ್ ಬಾವಿಗಳಿಗೆ ಎಷ್ಟೆಷ್ಟು ಹಣವನ್ನು ಯಾವ್ಯಾವ ಡಿವಿಜನ್‌ಗಳಿಗೆ ಕೊಟ್ಟಿದ್ದೇವೆಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿ ಬಾವಿಗಾಗಿ ಬೆಂಗಳೂರು ಜಿಲ್ಲೆಗೆ 50 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಟ್ಟಿದೇವೆ. ಮೈಸೂರಿಗೆ 13 ಲಕ್ಷ 50 ಸಾವಿರ, ಗುಲ್ಬರ್ಗಾಕ್ಕೆ 20 ಲಕ್ಷ ರೂಪಾಯಿಗಳು, ಬೆಳಗಾಂಗೆ 20 ಲಕ್ಷ ರೂಪಾಯಿಗಳು—ಹೀಗೆ ಕೊಟ್ಟಿದೆ. ಆದರೆ ನೀರಾವರಿ ಬಾವಿಗೆ ಈ ವರ್ಷ ಹೀಗೆ ಕೊಟ್ಟಿರುವ ಹಣ ಹೊಸ ಬಾವಿಗಳನ್ನು ತೆಗೆಯುವುದಕ್ಕೆ ಕೊಟ್ಟಂಥ ಹಣವಲ್ಲ. ಹಳೆಯ ಬಾವಿಗಳ ಕೆಲಸ ಇನ್ನೂ ಮುಗಿಸದೆ ಅಪೂರ್ತಿಯಾಗಿರುವಂತಹವು ಗಳನ್ನು ಜಾಗ್ರತೆಯಾಗಿ ಮಾಡಲಿ ಎಂದು ಮಾತ್ರ ಕೊಟ್ಟಿದ್ದೇವೆ. ಆದ್ದರಿಂದ ಸರ್ಕಾರದವರ ಈಗಿನ ಹೊಸ ನೀತಿಯಂತೆ ಇನ್ನು ಮುಂದೆ ಹೊಸ ಬಾವಿಗಳಿಗಾಗಿ ರೈತರಿಗೆ ಸಾಲವನ್ನು ಲ್ಯಾಂಡ್ ಡೆವ ಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಕೊಡಬೇಕೆಂದು ಈ ಸಭೆಯಲ್ಲಿ ಹೇಳಿದ್ದೇವೆ.

ಇನ್ನು 64ನೇ ಫ್ಯಾಮಿನ್ ಕೆಳಗಡೆ ನಾಲ್ಕು ಬೇರೆ ಬೇರೆ ವಿಭಾಗಗಳಿಗೆ ಕೊಟ್ಟಿರತಕ್ಕದ್ದು ಈ ರೀತಿ ಇದೆ. ಬೆಂಗಳೂರು ಡಿವಿಜನ್ 25 ಲಕ್ಷ ರೂಪಾಯಿಗಳು, ಮೈಸೂರು ಡಿದಜನ್ 11 ಲಕ್ಷ ರೂಪಾಯಿಗಳು. ಗುಲ್ಬರ್ಗ ಡಿವಿಜನ್ 6 ಲಕ್ಷ ರೂಪಾಯಿಗಳು. ಬೆಳಗಾಂ ಡಿವಿಜನ್ 11 ಲಕ್ಷ ರೂಪಾಯಿಗಳು. ಮತ್ತು ಮೊನ್ನೆ ತಾನೆ ಕೆಲವು ದಿವಸಗಳ ಹಿಂದೆ ಈಗಿರತಕ್ಕ ಭಾವಿಗಳನ್ನು ಹೆಚ್ಚು ಆಳ ಮಾಡುವುದಕ್ಕೋಸ್ಕರ ಸ್ವಲ್ಪ ಹಣವನ್ನು ಮಂಜೂರು ಮಾಡಲಾಗಿದೆ. ಇದರಿಂದ ರೈತ ರಿಗೆ ಕೆಲಸ ಸಿಕ್ಕುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಮಂಜೂರು ಮಾಡಿದ ಹಣ ಈ ರೀತಿ ಇದೆ. ಬೆಂಗಳೂರು ಡಿವಿಜನ್ 15 ಲಕ್ಷ ರೂಪಾಯಿಗಳು, ಮೈಸೂರು ಡಿವಿಜನ್ 5 ಲಕ್ಷ ರೂಪಾಯಿ ಗಳು, ಗುಲ್ಬರ್ಗ 2 ಲಕ್ಷ ರೂಪಾಯಿಗಳು, ಬೆಳಗಾಂ 2½ ಲಕ್ಷ ರೂಪಾಯಿಗಳು, ಲೋಕಲ್

ಡೆವಲಪ್‌ಮೆಂಟ್ ವರ್ಕ್ ಕಾರ್ಯಕ್ರಮದ ಕೆಳಗಡೆ ನಾಲ್ಕು ವಿಭಾಗಗಳಿಗೆ ಕೊಟ್ಟಿರತಕ್ಕ ಹಣ ಈ ರೀತಿ ಇದೆ. ಮೈಸೂರು ಡಿವಿಜನ್ 19 ಲಕ್ಷ 55 ಸಾವಿರ ರೂಪಾಯಿಗಳು. ಬೆಂಗಳೂರು ಡಿವಿಜನ್ನಿಗೆ 15 ಲಕ್ಷ ರೂಪಾಯಿಗಳು. ಬೆಳಗಾಂ ಡಿವಿಜನ್ನಿಗೆ 9½ ಲಕ್ಷ ರೂಪಾಯಿಗಳು. ಗುಲ್ಬರ್ಗ ಡಿವಿಜನ್ನಿಗೆ 10½ ಲಕ್ಷ ರೂಪಾಯಿಗಳು. ಈ ಅಂಕಿ ಅಂಶಗಳನ್ನು ನೋಡಿದರೆ ಯಾವ ಒಬ್ಬ ವ್ಯಕ್ತಿಗೂ ಕೂಡ ಯಾವುದೇ ರೀತಿಯ ಪಕ್ಷಪಾತವನ್ನು ಸರ್ಕಾರ ಮಾಡಿದೆ ಎಂಬ ಭಾವನೆ ಉಂಟಾಗಲಾರದೆಂದು ನಾನು ನಂಬಿದ್ದೇನೆ.

ಇನ್ನು ಈಗ್ಯೆ ನಾಲ್ಕು ತಿಂಗಳ ಹಿಂದೆ ಬೆಳೆಗಳನ್ನು ಉಳಿಸುವುದಕ್ಕೋಸ್ಕರ ಮತ್ತು ಪಂಪು ಸೆಟ್ಟುಗಳಿಗಾಗಿ ಏನು ಒಂದು ಕ್ರಾಪ್ ಪ್ರೋಗ್ರಾಮ್ ಮಾಡಿದ್ದೆವೋ ಅದಕ್ಕೆ ಸಂಬಂಧಪಟ್ಟ ಹಣವನ್ನು ಈ ರೀತಿ ಕೊಟ್ಟಿದ್ದೇವೆ. ಬೆಂಗಳೂರು ಡಿವಿಜನ್ 33 ಲಕ್ಷ ರೂಪಾಯಿಗಳು. ಬೆಳಗಾಂ ಡಿವಿಜನ್ 23 ಲಕ್ಷ ರೂಪಾಯಿಗಳು, ಗುಲ್ಬರ್ಗ ಡಿವಿಜನ್ನಿಗೆ 42 ಲಕ್ಷ ರೂಪಾಯಿಗಳು. ಮೈಸೂರು ಡಿವಿಜನ್ 45½ ಲಕ್ಷ ರೂಪಾಯಿಗಳು. ಈ ರೀತಿ ಹಣವನ್ನು ಮಂಜೂರು ಮಾಡುವಂತ ನಮ್ಮ ಒಂದೇ ಒಂದು ದೃಷ್ಟಿ ಏನಿರುತ್ತದೆ ಎಂದರೆ, ಎಲ್ಲಿ ಜನರ ಅಗತ್ಯ ಎಷ್ಟು ಮಟ್ಟಿಗೆ ಇದೆ ಎಂದು ಹೇಳುವುದು ಹೊರತು ಇದು ಗುಲ್ಬರ್ಗ ಡಿವಿಜನ್, ಇದು ಮೈಸೂರು ಡಿವಿಜನ್, ಇದು ಬೆಳಗಾಂ ಡಿವಿಜನ್, ಇದು ಬೆಂಗಳೂರು ಡಿವಿಜನ್ ಎಂದು ಹೇಳತಕ್ಕಂಥ ದೃಷ್ಟಿಯಿಲ್ಲವೆಂದು ನಾನು ಹೇಳಬಯಸುತ್ತೇನೆ. ಹಾಸನ ಡಿಸ್ಟ್ರಿಕ್ಟ್ ಬಗ್ಗೆ ಒಂದು ವಿಶೇಷವಾದ ಇನ್‌ಫರ್ಮೇಷನ್ ಕೊಡತಕ್ಕದ್ದು ಅಗತ್ಯ. ಏತಕ್ಕೆಂದರೆ, ಶ್ರೀಮಾನ್ ಶಿವಪ್ಪನವರು ಬಹಳ ಉಗ್ರವಾಗಿ ಟೀಕೆ ಮಾಡಿದರು. ತಮ್ಮ ಮತ ಕ್ಷೇತ್ರದಲ್ಲಿ ಯಾವ ಕೆಲಸವನ್ನೂ ಮಾಡಿಲ್ಲ. ವಿರೋಧ ಪಕ್ಷದವರನ್ನು ಕಂಡರೆ ಮಲತಾಯಿ ಭಾವನೆಯಿಂದ ನೋಡುತ್ತಾರೆ, ಯಾವ ಕೆಲಸವನ್ನು ಮಾಡುತ್ತಿಲ್ಲ ಎಂದು ಹೇಳಿದರು. ವಿರೋಧ ಪಕ್ಷದ ನಾಯಕರ ಬಾಯಿಂದ ಯಾವ ಮಾತು ಬಂದರೂ ಅದಕ್ಕೆ ಬೆಲೆ ಇರುವುದರಿಂದ ಪತ್ರಿಕೆಗಳಲ್ಲಿ ಜನತೆಯಿಂದ ಅದಕ್ಕೆ ಮಹತ್ವ ಸಿಕ್ಕುತ್ತದೆ. ಆದರಿಂದಾಗಿ ಅವರು ಮಾತನ್ನು ಆಡುವಾಗ ಸತ್ಯಕ್ಕೆ ದೂರವಾದ ಮಾತುಗಳನ್ನು ಆಡಬಾರದು. ಹಾಸನ ಡಿಸ್ಟ್ರಿಕ್ಟಿನಲ್ಲಿ ಒಟ್ಟು 3ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಡೆದದ್ದನ್ನು ಮಾತ್ರ ಹೇಳುತ್ತೇನೆ. ಶ್ರೀಮಾನ್ ಶಿವಪ್ಪನವರು ಈ ಸಭೆಗೆ ಆರಿಸಿ ಬಂದು 4½ ವರ್ಷ ಆಯಿತು. ಈಗ 4½ ವರ್ಷಗಳಿಂದ ಹಾಸನ ಡಿಸ್ಟ್ರಿಕ್ಟಿನಲ್ಲಿ ಎಷ್ಟು ಕೆಲಸ ಆಗಿದೆ, ಅವರ ಮತ ಕ್ಷೇತ್ರದಲ್ಲಿ ಎಷ್ಟು ಕೆಲಸ ಆಗಿದೆ ಎಂಬುದನ್ನು ಹೇಳದೆ ನಿರ್ವಾಹವಿಲ್ಲ. ಹಾಸನ ಡಿಸ್ಟ್ರಿಕ್ಟಿನಲ್ಲಿ 271 ಕೆಲಸಗಳನ್ನು ತೆಗೆದುಕೊಂಡು ಮುಗಿಸಿದ್ದೇವೆ. ಅದಕ್ಕೆ ಒಟ್ಟು ಖರ್ಚಾಗಿರುವ ಹಣ 26 ಲಕ್ಷ ರೂಪಾಯಿಗಳು. ಇದರಲ್ಲಿ 47 ಕೆಲಸಗಳನ್ನು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಶ್ರೀಮಾನ್ ಶಿವಪ್ಪನವರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿಯೇ ತೆಗೆದುಕೊಂಡಿದ್ದೇವೆ. ಅಲ್ಲಿ ನಾವು ಖರ್ಚು ಮಾಡಿರತಕ್ಕ ಹಣ 5 ಲಕ್ಷ 75 ಸಾವಿರ ರೂಪಾಯಿಗಳು. ಇನ್ನು ಬೇರೆ ಯಾವ ತಾಲ್ಲೂಕಿಗೂ ಇಷ್ಟು ಹಣವನ್ನು ಖರ್ಚು ಮಾಡಿಲ್ಲ.

ಆಮೇಲೆ ಶ್ರೀಮಾನ್ ಶಿವಪ್ಪನವರು ಇವೊತ್ತಿನ ದಿವಸ ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಒಂದು ವಿಚಾರವನ್ನು ಮಾತನಾಡುವುದನ್ನು ಮರೆತಿದ್ದಾರೆ. ಅದು ಯಾವುದು ಎಂದರೆ ಡಿಮ್ಯಾಂಡ್ ನಂಬರ್ 43. ಶ್ರವಣಬೆಳಗೊಳಕ್ಕೆ ನೀರನ್ನು ಒದಗಿಸುವ ಯೋಜನೆ. ಅದರ ಬಗ್ಗೆ ಅವರ ದೃಷ್ಟಿ ಹೇಗೆ ತಪ್ಪಿಹೋಯಿತೋ ನನಗೆ ಅರ್ಥವಾಗಲಿಲ್ಲ. ಈ ಶ್ರವಣಬೆಳಗೊಳಕ್ಕೆ ನೀರನ್ನು ಒದಗಿಸುವ ಯೋಜನೆಗೆ ಖರ್ಚು 3½ ಲಕ್ಷ ರೂಪಾಯಿಗಳು ಎಂದು ಒಂದು ಹೊಸ ಡಿಮ್ಯಾಂಡನ್ನು ಇಟ್ಟಿದ್ದೇವೆ. ಅದರ ಬಗ್ಗೆ ವಿರೋಧಪಕ್ಷದ ನಾಯಕರು ಚುಟಕ್ ಅನ್ನಲಿಲ್ಲ. ಅದಕ್ಕಾಗಿ ನನಗೆ ಬಹಳ ವ್ಯಥೆ ಆಯಿತು. ಶ್ರವಣಬೆಳಗೊಳ ಮೈಸೂರು ರಾಜ್ಯದಲ್ಲಿ ಯಾವ ತಾಲ್ಲೂಕಿನಲ್ಲಿ ಯಾರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿದೆ? ಹಾಗೆಯೇ 15-20 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಶ್ರವಣಬೆಳಗೊಳಕ್ಕೆ 3 ರಸ್ತೆಗಳನ್ನು ಮಾಡಲಾಗುತ್ತಿದೆ. ಅದರ ಕಡೆಗೂ ಅವರ ದೃಷ್ಟಿ ಹೋಗಲಿಲ್ಲ. ಇದನ್ನೆಲ್ಲಾ ನೋಡಿದರೆ ವಿರೋಧಪಕ್ಷದವರ ಕ್ಷೇತ್ರಗಳ ಬಗ್ಗೆ ನಿರ್ಲಕ್ಷ್ಯವಿಲ್ಲ ಎಂಬುದು ವ್ಯಕ್ತವಾಗುತ್ತದೆ. ಎಲ್ಲಿ ಹೆಚ್ಚು ಖರ್ಚು ಬರುತ್ತದೆಯೋ ಅಲ್ಲಿ ಬರುತ್ತದೆ. ಅವರು ಇರತಕ್ಕ ಸ್ಥಿತಿಯನ್ನು ನೋಡದೆ ಸುಮ್ಮನೆ ಕಣ್ಣುಮುಚ್ಚಿಕೊಂಡು ಟೀಕೆಯನ್ನು ಮಾಡಿದ್ದಾರೆ. ನಿಜವಾಗಿ ನೋಡಿದರೆ ನಾನು ಈ ಮಾತನ್ನು ಹೇಳಬಾರದೋ ಏನೋ ಗೊತ್ತಿಲ್ಲ. ನಿಜವಾಗಿ ಎಲ್ಲೆಲ್ಲಿ ಆಳುವ ಪಕ್ಷದ ಸದಸ್ಯರು ಸೋತಿದ್ದಾರೋ ಅಲ್ಲಿಗೆ ಸರ್ಕಾರ ಹೆಚ್ಚು ಖರ್ಚುಮಾಡುತ್ತಿದ್ದಾರೆ ಏತಕ್ಕೆಂದರೆ, ಮುಂದಿನ ಸಲ ಆದರೂ ಆಳುವ ಪಕ್ಷದವರು ಅಲ್ಲಿ ಆರಿಸಿಬರಬೇಕು ಎನ್ನುವ ದೃಷ್ಟಿಯಿಂದ. ನಾನು ಏತಕ್ಕೆ ಈ ವಿವರಗಳನ್ನು ಕೊಡುತ್ತಿದ್ದೇನೆಂದರೆ, ಪುನಃ ಪುನಃ ಜನಗಳ ಮನಸ್ಸನ್ನು ಕಲಕತಕ್ಕ ಮಾತುಗಳನ್ನು ಆಡುವುದು ಯೋಗ್ಯವಲ್ಲ ಎನ್ನುವ ಕಾರಣಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಕರ್ನಾಟಕ ಏಕೀಕರಣ ಆಗಬೇಕು ಎನ್ನುವ ಬಗ್ಗೆ ಕೆಲವರಿಗೆ ಒಪ್ಪಿಗೆ ಇತ್ತು ಕೆಲವರಿಗೆ ಒಪ್ಪಿಗೆ ಇರಲಿಲ್ಲ. ಆದರೂ ಸಹ ಕರ್ನಾಟಕ ಏಕೀಕರಣ ಆಗಬೇಕೇನ್ನುವ ಕನಸು ನನಸಾಯಿತು. ಕರ್ನಾಟಕ

(ಶ್ರೀ ರಾಮಕೃಷ್ಣ ಹೆಗ್ಗಡೆ)

ರಾಜ್ಯ ಆಯಿತು. ಈಗ ಪುನಃ ಈ ರಾಜ್ಯ ಎರಡಾಗಬೇಕು 3 ಆಗಬೇಕು ಎಂದು ಹೇಳತಕ್ಕದ್ದು ಸರಿಯಲ್ಲ. ಎರಡು ಕರ್ನಾಟಕ ಮಾಡುವುದಾದರೆ 30-40 ವರ್ಷಗಳಿಂದ ಏಕೀಕರಣ ಚಳುವಳಿ ಮಾಡುತ್ತಿರಲಿಲ್ಲ. ಕರ್ನಾಟಕ ಏಕೀಕರಣವಾದ ನಂತರ ಇಡೀ ಕನ್ನಡ ಜನತೆಯು ಪ್ರಗತಿಯಾಗಬೇಕೆಂಬ ಉದ್ದೇಶದಿಂದ ದುಡಿಯುತ್ತಾ ಬಂದಿದ್ದೇವೆ. ಸರ್ಕಾರದವರು ಕೆಲಸ ಮಾಡುವಾಗ ಸಾರ್ವಜನಿಕ ಕೆಲಸಗಳಾದ ರಸ್ತೆಗಳಾಗಲೀ, ಚಿಕ್ಕ ನೀರಾವರಿ ಯೋಜನೆಗಳಾಗಲೀ, ಇತರ ಯೋಜನೆಗಳಾಗಲೀ ಸಮಗ್ರ ಮೈಸೂರಿನ ಕನ್ನಡ ಜನತೆಯ ಪ್ರಗತಿ ದೃಷ್ಟಿಯಿಂದ ಇದುವರೆಗೂ ಕೆಲಸ ಮಾಡುತ್ತಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಸಹವಾಸವೇ ಬೇಡ ಎರಡು ರಾಜ್ಯಗಳಾಗಿ ಮಾಡಿಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ನೋಡಿದರೆ ಪ್ರತಿ ಜಿಲ್ಲೆಯವರೂ ಬೇರೆಯಾಗಬೇಕೆನ್ನಬಹುದು. ಈಗ ನಾರ್ತ್ ಕೆನರಾದಿಂದ ಫಾರೆಸ್ಟಿನಿಂದ 5 ಕೋಟಿ ರೂಪಾಯಿಗಳು ಉತ್ಪತ್ತಿ ಬರುತ್ತದೆ. ಅವರೂ ಸಹ ನಾವು ಪ್ರತ್ಯೇಕ ಆಗುತ್ತೇವೆಂದು ಹೇಳಬಹುದು. ಹಾಗೆಯೇ ಕೊಡಗಿನಿಂದ ಹೆಚ್ಚಿನ ವರಮಾನ ಬರುತ್ತದೆ ಅವರೂ ಸಹ ನಾವು ಬೇರೆ ಹೋಗುತ್ತೇವೆಂದು ಹೇಳಬಹುದು. ಈ ದೃಷ್ಟಿಯಿಂದ ಅವರು ಆ ರೀತಿ ಹೇಳತಕ್ಕದ್ದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ. ಇನ್ನೂ ಹೆಚ್ಚು ವಿವರವಾಗಿ ಈ ವಿಚಾರದಲ್ಲಿ ಮಾತನಾಡತಕ್ಕ ಅಗತ್ಯ ಕಾಣುವುದಿಲ್ಲ. ಮಾನ್ಯ ಸದಸ್ಯರು ಇನ್ನೂ ಬೇರೆ ಬೇರೆ ಟೀಕೆಗಳನ್ನು ಮಾಡಿದ್ದಾರೆ. ಆ ಟೀಕೆಗಳು ಈ ಬೇಡಿಕೆಗಳಿಗೆ ಸಂಬಂಧ ಇಲ್ಲದೆ ಇರುವುದರಿಂದ ಯಾವುದಾದರೂ ಬೇರೆ ಸಂದರ್ಭದಲ್ಲಿ ಆ ಟೀಕೆಗಳಿಗೆ ಉತ್ತರ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ಟೀಕೆಗಳಿಗೆ ಹಿಂದೆ ಉತ್ತರವನ್ನು ಕೊಟ್ಟಿದ್ದರೂ ಕೂಡ ಇದರ ಬಗ್ಗೆ ಪುನಃ ಪುನಃ ಮಾತನಾಡುವುದು ಸ್ವಾಭಾವಿಕ. ಆದ್ದರಿಂದ ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಬಯಸುವುದಿಲ್ಲ. ಇಷ್ಟು ಹೇಳಿ ಈ ಸಭೆಯಮುಂದೆ ಸರ್ಕಾರದವರು ಇಟ್ಟಿರತಕ್ಕ ಸಪ್ಲಿಮೆಂಟರಿ ಡಿಮ್ಯಾಂಡಿಗೆ ಈ ಮಾನ್ಯ ಸಭೆಯವರು ತಮ್ಮ ಹೃತ್ಪೂರ್ವಕವಾದ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಒಂದು ಮಾತನ್ನು ಶ್ರೀ ಮುಕ್ಕಣ್ಣಪ್ಪನವರು ಹಾಗೂ ಶ್ರೀಮಾನ್ ಗೋಪಾಲಗೌಡರು ಪುಟ 3ರಲ್ಲಿ ಡಿಮ್ಯಾಂಡು 8ರ ನಂತರ ಒಂದು ಡಿಮ್ಯಾಂಡಿಗೆ ನಂಬರಿಲ್ಲ, ಇದು ಅನಾಮಧೇಯವಾಗಿದೆ ಎಂದು ಹೇಳಿದರು. ಇದರ ಬಗ್ಗೆ ಇರುವ ಪದ್ಧತಿ ಮಾನ್ಯ ಸದಸ್ಯರಿಗೆ ಮರೆತು ಹೋಗಿರಬಹುದು. ಯಾವುದು ಛಾರ್ಜ್ ಹಾಗೂ ವೋಟೆಡ್ ಎಂದು ಇರುತ್ತದೊ ಅದಕ್ಕೆ ನಂಬರು ಇರುತ್ತದೆ. ಮತ್ತು ಇದಕ್ಕೆ ಈ ಸಭೆಯಲ್ಲಿ ವೋಟು ಮಾಡಲು ಅವಕಾಶವಿದೆ. ಯಾವುದು ಬರೀ ಛಾರ್ಜ್ಡ್ ಎಂದು ಇರುವುದೋ ಇವರಲ್ಲಿ ನಂಬರನ್ನು ನಮೂದಿಸುವ ಪ್ರಶ್ನೆ ಬರುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ಹಾಸನ ಜಿಲ್ಲೆಗೆ ಮೂರನೆ ಯೋಜನೆಯಲ್ಲಿ 25 ಲಕ್ಷದಷ್ಟು ಖರ್ಚು ಮಾಡಿದ್ದೇವೆ ಎಂದು ಭುಜ ತಟ್ಟಿಕೊಂಡು ಇಲ್ಲಿ ಹೇಳಿದರು. ಆದರೆ ಅವರೇ ಕೊಟ್ಟಿರುವ ಅಡ್ಮಿನಿಸ್ಟ್ರೇಷನ್ನು ರಿಪೋರ್ಟಿನಲ್ಲಿ 12 ಕೋಟಿಯಷ್ಟು ಸಂಸ್ಥಾನಾಮಳೆ ಮೈನರು ಇರಿಗೇಷನ್ನು ಕೆಲಸಗಳಿಗಾಗಿ ಎಂದು ಕೊಟ್ಟಿರುವುದರಲ್ಲಿ, ಹಾಸನ ಜಿಲ್ಲೆಗೆ 25 ಲಕ್ಷ ಮಾತ್ರ ಕೊಡಲಾಗಿದೆ ಎಂದು ಇದೆ. ಆದುದರಿಂದ ಮಾನ್ಯ ಸಚಿವರು ಇಲ್ಲಿ ಹೇಳಿದ ಉತ್ತರ ಸಮಂಜಸವಾಗುತ್ತದೆಯೇ!

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಮಂಜಸವೇ ಹೌದೋ ಅಲ್ಲವೋ ಇಲ್ಲಿ ಅದು ಬೇಡ. ಹಾಸನ ಜಿಲ್ಲೆಗೆ ಮಂಜೂರು ಮಾಡಿರುವ ಮೊಬಲಗು ಎಷ್ಟು ಎನ್ನುವುದನ್ನು ಹೇಳಿದ್ದೇನೆ. ಅದು ಸುಮಾರು 70 ಲಕ್ಷದಷ್ಟು ಎಂದಿದೆ.

Mr. SPEAKER.—I will now put the Demands to the vote of the House. The question is:

"That further sums not exceeding the amounts mentioned in the Demands Nos. 7, 8, 9, 10, 11, 12, 13, 14, 15, 16, 18, 20, 24 to 27, 29, 30, 30A, 31, 33, 39, 40, 43, 44 to 48, 52 to 54 for supplementary and additional demands for grants (Third instal-

ment) moved by the Finance Minister be granted to Government to defray the charges which will come in course of payment during the financial year ending 31st day of March 1966".

Motion was adopted.

As directed by the Chair the motion for demands for grants adopted by the House are reproduced below :—

DEMAND No. 7.—Stamps.

14. Stamps,

"That a further sum not exceeding Rs. 1,80,000 be granted to the Government to defray the charges which will come in course of payment during the financial year for the period ending 31st day March 1966, in respect of 'Stamps'.'

DEMAND No. 8.—Registration.

15. Registration Fees.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Registration Fees'."

DEMAND No. 9.—State Legislature and Elections.

18. Parliament, State/Union Territory Legislature.

"That a further sum not exceeding Rs. 1,79,100 be granted to the Government to defray the charges which will come in course of payment during the financial year for the period ending 31st day of March 1966, in respect of 'Parliament, State/Union Territory Legislature'."

DEMAND No. 10.—General Administration.

19. General Administration.

"That a further sum not exceeding Rs. 20,80,200 be granted to the Government to defray the charges which will come in course of payment during the financial year for the perion ending 31st day of March 1966, in respect of 'General Administration'."

DEMAND No. 11.—Administration of Justice.

21. Administration of Justice.

"That a further sum not exceeding Rs. 4,04,000 be granted to the Government to defray the charges which will come in course of payment during the financial year for the period ending 31st day of March 1966, in respect of 'Administration of Justice'."

DEMAND No. 12.—Jails.

22. Jails

"That a further sum not exceeding Rs. 8,25,200 be granted to the Government to defray the charges which will come in course of payment during the financial year for the period ending 31st day of March 1966, in respect of 'Jails'."

DEMAND No. 13.—Police.

23. Police.

"That a further sum not exceeding Rs. 33,92,334 be granted to the Government to defray the charges which will come in course of payment during the financial year for the period ending 31st day of March 1966, in respect of 'Police'."

DEMAND No. 14.—Supplies and Disposals.

25. Supplies and Disposals.

"That a further sum not exceeding Rs. 50,38,450 be granted to the Government to defray the charges which will come in course of payment during the financial year for the period ending 31st day of March 1966, in respect of 'Supplies and Disposals'."

DEMAND No. 15.—Miscellaneous Departments.

26. Miscellaneous Departments.

"That a further sum not exceeding Rs. 11,84,010 be granted to the Government to defary the charges which will come in course of payment during the financial year for the period ending 31st day of March 1966, in respect of 'Miscellaneous Departments'."

DEMAND No. 16.—Scientific Departments.

27. Scientific Departments.

"That a further sum not exceeding Rs. 1,00,000 be granted to the Government to defray the changes which will come in course of payment during the financial year for the period ending 31st day of March 1966, in respect of Scientific Departments'."

DEMAND No. 18.—Medical.

29. Medical.

" That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Medical and Public Health'."

DEMAND No. 20.—Agriculture, Horticulture and Fisheries.

31. Agriculture.

" That a further sum not exceeding Rs. 300 be granted to the Government to defray the charges which will come in course of payment during the financial year for the period ending 31st day of March 1966, in respect of 'Agriculture'."

DEMAND No. 24.—Industries including Sericulture.

35. Industries.

" That a further sum not exceeding Rs. 29,10,000 be granted to the Government to defray the charges which will come in course of payment during the financial year for the period ending 31st day of March 1966, in respect of 'Industries."

DEMAND No. 25.—Community Development, etc.

37. Community Development Projects, National Extension Service and Local Development Works.

" That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Community Development Projects, National Extension Service and Local Development Works'."

DEMAND No. 26.—Labour and Employment.

38. Labour and Employment.

" That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Labour and Employment.'"

[MR. SPEAKER

DEMAND NO. 27.—Miscellaneous, Social and Developmental Organisations.

39. Miscellaneous, Social and Developmental Organisations.

"That a further sum not exceeding Rs. 5,17,948 be granted to the Government to defray the charges which will come in course of payment during the financial year for the period ending 31st day of March 1966, in respect of 'Miscellaneous, Social and Developmental Organisations.'"

DEMAND NO. 29.—Irrigation—Commercial.

43. Irrigation, Navigation, Embankment and Drainage Works (Commercial)

"That a further sum not exceeding Rs. 1,20,42,000 be granted to the Government to defry the charges which will come in course of payment during the financial year for the period ending 31st day of March 1966, in respect of 'I.N.E. & D. Works (Commercial)'."

DEMAND NO. 30.—Irrigation—Non-Commercial.

44. Irrigation, Navigation, Embankment and Drainage Works (Non-Commercial)

"That a further sum not exceeding Rs. 54,00,000 be granted to the Government to defray the charges which will come in course of payment during the financial year for the period ending 31st day of March 1966, in respect of 'I.N.E. & D. Works (Non-Commercial).'"

DEMAND NO. 30.-A.—Electricity Schemes.

45. Electricity Schemes.

"That a sum further not exceeding Rs. 6,82, 000 be granted to the Government to defray the charges which will come in course of payment during the financial year for the period ending 31st day of March 1966, in respect of 'Electricity Schemes'."

DEMAND NO. 31—Public Works.

50. Public Works.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Public Works'."

DEMAND No 33.—Famine.

64. Famine Relief.

"That a further sum not exceeding Rs. 26,55,000 be granted to the Government to defray the charges which will come in course of payment during the financial year for the period ending 31st day of March 1966, in respect of 'Famine Relief'."

DEMAND No. 39—Miscellaneous.

71. Miscellaneous.

"That a further sum not exceeding Rs. 1,80,26,000 be granted to the Government to defray the charges which will come in course of payment during the financial year for the period ending 31st day of March 1966, in respect of 'Miscellaneous'."

DEMAND No. 40.—Commutation of Pensions.

72. Commutation of Pensions.

"That a further sum not exceeding Rs. 7,41,500 be granted to the Government to defray the charges which will come in course of payment during the financial year for the period ending 31st day of March 1966, in respect of 'Commutation of Pensions'."

DEMAND No. 43.—Capital Outlay on Improvement of Public Health

94. Capital Outlay on Improvement of Public Health.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Improvement of Public Health'."

DEMAND No. 44—Industrial and Economic Development.

96. Capital Outlay on Industrial and Economic Development.

"That a further sum not exceeding Rs. 1,48,50,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Industrial and Economic Development'."

MR. SPEAKER

DEMAND No. 45.—Capital Outlay on Irrigation.

99. Capital Outlay on Irrigation, Navigation, Embankment and Drainage Works (Commercial).

"That a further sum not exceeding Rs. 95,37,900 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Irrigation, Navigation, Embankment and Drainage Works (Commercial)."

DEMAND No. 46.—Capital Outlay on Irrigation—Non-Commercial.

100. Capital Outlay on I. N. E. and D. Works (Non-Commercial).

"That a further sum not exceeding Rs. 32,64,100 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on I.N.E. and D. Works (Non-Commercial)'."

DEMAND No. 47. Capital Account on Electricity Schemes outside the Revenue Account.

101. Capital Outlay on Electricity Schemes.

"That a further sum not exceeding Rs. 1,96,63,600 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Electricity Schemes'."

DEMAND No. 48.—Capital Outlay on Public Works.

103. Capital Outlay on Public Works.

"That a further sum not exceeding Rs. 3,02,600 be granted to the Government to defray the charges which will come in course of payment during the financial year for the period ending 31st day of March 1966, in respect of "Capital Outlay on Public Works'."

DEMAND No. 52.—Commuted Value of Pensions.

120. Payments of Commuted Value of Pensions.

"That a further sum not exceeding Rs. 7,41,500 be granted to the Government to defray the charges which will come in course of payment during the financial year for the period ending 31st day of March 1966, in respect of 'Payments of Commuted Value of Pensions'."

DEMAND No. 53.—Capital Outlay on Schemes of Government Trading.

124. Capital Outlay on Schemes of Government Trading.

"That a further sum not exceeding Rs. 8,00,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Schemes of Government Trading'."

DEMAND No. 54.—Advances and Loans.

Q. Loans and Advances by State/Union Territory Governments.

"That a further sum not exceeding Rs. 3,50,00,400 be granted to the Government to defray the charges which will come in course of payment during the financial year for the period ending 31st day of March 1966, in respect of 'Loans and Advances by State/Union Territory Governments'."

Mr. SPEAKER.—The House will adjourn and reassemble at 2 P.M. to-day.

The House adjourned at Twenty-Five Minutes past Twelve of the Clock and re-assembled at Two of the Clock.

[MR. SPEAKER in the Chair.]

BUDGET ESTIMATES FOR 1966-67—DEMANDS FOR GRANTS

DEMAND No. 10—General Administration

Mr. SPEAKER.—Now, Demands for 1966-67.

Sri S. NIJALINGAPPA (Chief Minister).—Sir, on the recommendation of the Governor of Mysore, I beg to move :

"That a sum not exceeding Rs. 3,60,72,000 be granted to to this Government to defray the charges which will come in course of payment during the financial year for the period ending 31st day of March 1967, in respect of Demand No. 10—'General Administration'."